ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶಿಕ್ಷಣ
ಲಿಬರಲ್ ಸೈನ್ಸ್ ವಿಜ್ಞಾನ ಮತ್ತು ಸಾಮಾಜಿಕ ವಿಜ್ಞಾನ, ಕಲಾ ವಿಷಯಗಳನ್ನು ಒಟ್ಟುಗೂಡಿಸಿ ಕಲಿಯುವ ಒಂದು ವಿಶಿಷ್ಟ ಮಾದರಿ.

ಆಳ-ಅಗಲ
ಗಂಗಾ ನದಿಯಲ್ಲಿ ತೇಲಿದ ಹೆಣಗಳು
ಬೆಳ್ತಂಗಡಿ: ಗಿರುನಾಯಿಗಳು ಪ್ರತ್ಯಕ್ಷ 4
ಕೋವಿಡ್ ಪರೀಕ್ಷೆ, ಸೋಂಕಿತರ ಸಂಖ್ಯೆ ಇಳಿಕೆ 8
ಕೋವಿಡ್ ಪೀಡಿತರ ಜೀವ ರಕ್ಷಣೆಗೆ ನೆರವು
ನಿವಾಸಿಗಳೇ ರೂಪಿಸಿದ ಆರೈಕೆ ಕೇಂದ್ರ 9

ಕರಾವಳಿಯ ಮೂರೂ ಜಿಲ್ಲೆಗಳಲ್ಲಿ ಜನಜೀವನ ಅಸ್ತವ್ಯಸ್ತ • ತತ್ತರಿಸಿದ 98 ಗ್ರಾಮಗಳು • ಎಂಟು ಮಂದಿ ಸಾವು

ತೌತೆ ಮಾರುತದ ಅಬ್ಬರ: ಹಾನಿ ಅಪಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ತೌತೆ' ಚಂಡಮಾರುತದ ಅಬ್ಬರಕ್ಕೆ ರಾಜ್ಯದ ಕರಾವಳಿಯ ಮೂರೂ ಜಿಲ್ಲೆಗಳ ಜನಜೀವನ ಅಸ್ತವ್ಯಸ್ತಗೊಂಡಿದೆ. ಚಂಡಮಾರುತದ ಪರಿಣಾಮ ಹಲವು ಜಿಲ್ಲೆಗಳಲ್ಲಿಯೂ ಮಳೆಯಾಗಿದೆ. ರಾಜ್ಯದ ವಿವಿಧೆಡೆ ಒಟ್ಟು ಎಂಟು ಮಂದಿ ಪ್ರಾಣ ಕಳೆದುಕೊಂಡಿದ್ದಾರೆ.

ಶನಿವಾರದಿಂದ ಜೋರಾಗಿದ್ದ ಮಳೆಯ ಬಿರುಸು ಭಾನುವಾರ ಮಧ್ಯಾಹ್ನದ ಬಳಿಕ ತುಸು ಕಡಿಮೆಯಾಗಿದೆ. ಚಂಡಮಾರುತದ ಪರಿಣಾಮ ಗಾಳಿಯಿಂದ ಕೂಡಿದ ಮಳೆಯಾಗಿದ್ದು, ಹಲವು ಜಿಲ್ಲೆಗಳಲ್ಲಿ ಹಾನಿಯಾಗಿದೆ. ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ, ಕೊಡಗು, ಚಿಕ್ಕಮಗಳೂರು, ಹಾಸನ ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ಹೆಚ್ಚಿನ ಹಾನಿ ಸಂಭವಿಸಿದೆ ಎಂದು ಕಂದಾಯ ಇಲಾಖೆಯ ಪ್ರಾಥಮಿಕ ವರದಿ ಹೇಳಿದೆ.

ಎರಡು ಶವ ಪತ್ತೆ: ಹಡಗುಗಳಿಂದ ಕಚ್ಚಾ ತೈಲ ಇಳಿಸುವುದಕ್ಕಾಗಿ ಎಂಆರ್‌ಪಿಎಲ್ ಸಮುದ್ರದ ಅಡಿಯಲ್ಲಿ ಹಾಕಿರುವ ಕೊಳವೆ ಮಾರ್ಗಕ್ಕೆ ಸಂಪರ್ಕ ಕಲ್ಪಿಸುವ ಕೆಲಸ ಮಾಡುತ್ತಿದ್ದ ಎರಡು ಟಗ್‌ಗಳು ಲಂಗರು ಕಡಿದುಕೊಂಡು ಸಮುದ್ರದ ಪಾಲಾಗಿದ್ದವು. ಅದರಲ್ಲಿ ಹ್ಯಾಟ್ ಎಲ್ಐ ಹೆಸರಿನ ಟಗ್ ಶನಿವಾರ ಸಮುದ್ರದಲ್ಲಿ ಮಗುಚಿ ಬಿದ್ದಿದ್ದು, ಇಬ್ಬರು ಕಾರ್ಮಿಕರ ಶವ ಪತ್ತೆಯಾಗಿದೆ. ಮೂವರು ಕಾರ್ಮಿಕರನ್ನು ರಕ್ಷಿಸಲಾಗಿದೆ. ಇನ್ನೂ ಮೂವರು ನಾಪತ್ತೆಯಾಗಿದ್ದಾರೆ.

ನವ ಮಂಗಳೂರು ಬಂದರಿನಲ್ಲಿ ಲಂಗರು ಹಾಕಿದ್ದ ಕೋರಮಂಡಲ್ ಸಪೋರ್ಟರ್ ಹೆಸರಿನ ಮತ್ತೊಂದು ಟಗ್ ಲಂಗರು ಕಡಿದುಕೊಂಡು ಸಮುದ್ರದಲ್ಲಿ ಹೋಗಿದ್ದು, ಮೂಲ್ಕಿ ಬಳಿ ಬಂಡೆಗಳ ನಡುವೆ ಸಿಲುಕಿಕೊಂಡಿದೆ. ಟಗ್‌ನಲ್ಲಿರುವ ಒಂಬತ್ತು ಕಾರ್ಮಿಕರು ರಕ್ಷಣೆಗಾಗಿ ಮೊರೆ ಇಡುತ್ತಿದ್ದಾರೆ.

'ನೌಕಾ ಪಡೆಯ ಐಎನ್‌ಎಸ್ ವರಾಹ ಹಡಗು ಟಗ್ ಸಮೀಪದಲ್ಲೇ ಇದೆ. ಆದರೆ, ಪ್ರತಿಕೂಲ ಹವಾಮಾನದಿಂದ ರಕ್ಷಣಾ ಕಾರ್ಯಾಚರಣೆ ನಡೆಸಲು ಸಾಧ್ಯವಾಗುತ್ತಿಲ್ಲ. ತನ್ನ ಹೆಲಿಕಾಪ್ಟರ್ ಮೂಲಕ ರಕ್ಷಣಾ ಕಾರ್ಯಾಚರಣೆ ನಡೆಸಲು ನೌಕಾಪಡೆ ಒಪ್ಪಿಗೆ ಸೂಚಿಸಿದೆ. ಹವಾಮಾನ ಸುಧಾರಿಸಿದ ಬಳಿಕ ಗೋವಾದಿಂದ ನೌಕಾಪಡೆಯ ಹೆಲಿಕಾಪ್ಟರ್ ಬರಲಿದೆ. ಆ ಬಳಿಕ ರಕ್ಷಣಾ ಕಾರ್ಯಾಚರಣೆ ನಡೆಸಲಾಗುವುದು. ಟಗ್‌ನಲ್ಲಿರುವ ಕಾರ್ಮಿಕರ ಬಳಿ ಆಹಾರ ವಸ್ತುಗಳು ಇರುವುದು ಖಾತರಿಯಾಗಿದೆ' ಎಂದು ದಕ್ಷಿಣ ಕನ್ನಡ ಜಿಲ್ಲಾಧಿಕಾರಿ ಡಾ.ಕೆ.ವಿ. ರಾಜೇಂದ್ರ ತಿಳಿಸಿದ್ದಾರೆ.

ಬೆಳಗಾವಿ ಜಿಲ್ಲೆಯಲ್ಲಿ ಭಾನುವಾರ ದಿನವಿಡೀ ಜೋರು ಗಾಳಿ ಮಳೆಯಾಗಿದೆ. ಖಾನಾಪುರ ತಾಲ್ಲೂಕಿನ ಇಟಗಿ ಗ್ರಾಮದಲ್ಲಿ ಮಳೆಯಿಂದ ಮನೆಯ ಗೋಡೆ ಕುಸಿದು ದೊಡ್ಡವ್ವ ರುದ್ರಪ್ಪ ಪಟ್ಟೇದ (55) ಮತ್ತು ಅವರ ಮೊಮ್ಮಗ ಅಭಿಷೇಕ ಸುರೇಶ ಪಟ್ಟೇದ (3) ಮೃತಪಟ್ಟಿದ್ದಾರೆ.

ತೌತೆ ಚಂಡಮಾರುತದಿಂದಾಗಿ ಉಡುಪಿ, ಉತ್ತರ ಕನ್ನಡ, ಶಿವಮೊಗ್ಗ ಮತ್ತು ಚಿಕ್ಕಮಗಳೂರು ಜಿಲ್ಲೆಗಳಲ್ಲಿ ತಲಾ ಒಬ್ಬರು ಮೃತಪಟ್ಟಿದ್ದಾರೆ ಎಂದು ಕಂದಾಯ ಇಲಾಖೆ ವರದಿ ತಿಳಿಸಿದೆ.

98 ಗ್ರಾಮಗಳಲ್ಲಿ ಹೆಚ್ಚು ಹಾನಿ: ಉತ್ತರ ಕನ್ನಡ ಜಿಲ್ಲೆಯ 31, ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ತಲಾ 28, ಉತ್ತರ ಕನ್ನಡ ಮತ್ತು ಚಿಕ್ಕಮಗಳೂರು ಜಿಲ್ಲೆಗಳ ತಲಾ 5 ಹಾಗೂ ಹಾಸನ ಜಿಲ್ಲೆಯ ಒಂದು ಗ್ರಾಮದಲ್ಲಿ ಚಂಡಮಾರುತದಿಂದ ಹೆಚ್ಚು ಹಾನಿ ಸಂಭವಿಸಿದೆ.

4ನೇ ಪುಟ ನೋಡಿ

ಚಂಡಮಾರುತದ ಪರಿಣಾಮ ಅರಬ್ಬಿ ಸಮುದ್ರದಲ್ಲಿ ಎದ್ದ ದೈತ್ಯ ಅಲೆಗಳ ಅಬ್ಬರಕ್ಕೆ ಮಂಗಳೂರು ಹೊರವಲಯದ ಸುರತ್ಕಲ್ ಎನ್‌ಐಟಿಕೆ ಬೀಚ್ ರಸ್ತೆ ಸಮುದ್ರದ ಪಾಲಾಗಿದೆ ಪ್ರಜಾವಾಣಿ ಚಿತ್ರ/ ಗೋವಿಂದರಾಜ ಜವಳಿ

ಆರು ಜಿಲ್ಲೆಗಳಲ್ಲಿ ಭಾರಿ ಮಳೆ

ಶನಿವಾರ ಬೆಳಿಗ್ಗೆ 8.30ರಿಂದ ಭಾನುವಾರ ಬೆಳಿಗ್ಗೆ 8.30ರವರೆಗಿನ 24 ಗಂಟೆಗಳ ಅವಧಿಯಲ್ಲಿ ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ, ಶಿವಮೊಗ್ಗ, ಕೊಡಗು ಮತ್ತು ಚಿಕ್ಕಮಗಳೂರು ಜಿಲ್ಲೆಗಳ 313 ಮಳೆ ಮಾಪನ ಕೇಂದ್ರಗಳಲ್ಲಿ 6.4 ಸೆಂ.ಮೀ. ಮಳೆ ಬಿದ್ದಿರುವುದು ದಾಖಲಾಗಿದೆ.

15 ಸ್ಥಳಗಳಲ್ಲಿ 20 ಸೆಂ.ಮೀ.ಗಿಂತ ಹೆಚ್ಚಿನ ಮಳೆ ದಾಖಲಾಗಿದೆ. ಕುಂದಾಪುರ ತಾಲ್ಲೂಕಿನ ನಾಡ ಮಳೆಮಾಪನ ಕೇಂದ್ರದಲ್ಲಿ ಗರಿಷ್ಠ 38.5 ಸೆಂ.ಮೀ. ಮಳೆ ಬಿದ್ದಿದೆ. ಈ ಜಿಲ್ಲೆಗಳಲ್ಲಿ ಜೋರಾದ ಮಳೆಯೊಂದಿಗೆ ಪ್ರತಿ ಗಂಟೆಗೆ 70 ರಿಂದ 90 ಕಿ.ಮೀ. ವೇಗದಲ್ಲಿ ಗಾಳಿ ಬೀಸಿರುವುದು ಹಾನಿಗೆ ಕಾರಣವಾಗಿದೆ ಎಂದು ಕಂದಾಯ ಇಲಾಖೆ ತಿಳಿಸಿದೆ.

ಗರಿಷ್ಠ ಮಳೆ	
ಉಡುಪಿ	
ನಾಡ	38.5 ಸೆಂ.ಮೀ.
ಕೋಣಿ	33.5
ಖಂಬದಕೋಣೆ	31.3
ದಕ್ಷಿಣ ಕನ್ನಡ	
ಆರ್ಯಾಪು	18.6 ಸೆಂ.ಮೀ.
ಚಿಕ್ಕಮಗಳೂರು	
ಕೊಟ್ಟಿಗೆಹಾರ	21.2 ಸೆಂ.ಮೀ

ಇಂದು ಗುಜರಾತ್ ಕರಾವಳಿಗೆ ಪ್ರವೇಶ

ಅಹಮದಾಬಾದ್ (ಪಿಟಿಐ): ತೌತೆ ಚಂಡಮಾರುತವು ಮುಂದಿನ 24 ತಾಸುಗಳಲ್ಲಿ ಇನ್ನಷ್ಟು ತೀವ್ರಗೊಳ್ಳುವ ಸಾಧ್ಯತೆ ಇದೆ. ಸೋಮವಾರ ಸಂಜೆಯ ಹೊತ್ತಿಗೆ ಗುಜರಾತ್ ಕರಾವಳಿಯನ್ನು ಪ್ರವೇಶಿಸಲಿದೆ ಎಂದು ಭಾರತೀಯ ಹವಾಮಾನ ಇಲಾಖೆಯು ಭಾನುವಾರ ತಿಳಿಸಿದೆ.

ಪೋರ್‌ಬಂದರ್ ಮತ್ತು ಭಾವನಗರ ಜಿಲ್ಲೆಯ ಮಹುವಾ ನಡುವೆ 'ತೌತೆ' ಮಂಗಳವಾರ ಬೆಳಗ್ಗಿನ ಹೊತ್ತಿಗೆ ಹಾದು ಹೋಗಲಿದೆ. ಚಂಡಮಾರುತವು ಕರಾವಳಿಗೆ ಅಪ್ಪಳಿಸುವ ಹೊತ್ತಿಗೆ ಸುಮಾರು ಮೂರು ಮೀಟರ್ ಎತ್ತರದ ಅಲೆಗಳು ಸೃಷ್ಟಿಯಾಗಲಿವೆ.

ಗುಜರಾತ್ ಕರಾವಳಿ ಸಮೀಪಿಸುವ ಹೊತ್ತಿಗೆ ಗಾಳಿಯ ವೇಗವು ತಾಸಿಗೆ 120ರಿಂದ 150 ಕಿ.ಮೀ. ಇರಬಹುದು. ಸೋಮವಾರ ಬೆಳಿಗ್ಗೆಯಿಂದ ರಾತ್ರಿಯವರೆಗೆ ಸಮುದ್ರವು ಪ್ರಕ್ಷುಬ್ಧವಾಗಿ ಇರಲಿದೆ. ಸೌರಾಷ್ಟ್ರ ಮತ್ತು ಕಛ್ ವಿಭಾಗಗಳು ಹಾಗೂ ಕೇಂದ್ರಾಡಳಿತ ಪ್ರದೇಶ ದಿಯುನಲ್ಲಿ ಮಂಗಳವಾರ ಭಾರಿ ಮಳೆ ಸುರಿಯುವ ಸಾಧ್ಯತೆ ಇದೆ.

ಗುಜರಾತ್‌ನ ಕರಾವಳಿಯ ತಗ್ಗು ಪ್ರದೇಶಗಳ 1.5 ಲಕ್ಷ ಜನರನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಲಾಗಿದೆ. ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆ (ಎನ್‌ಡಿಆರ್‌ಎಫ್) ಮತ್ತು ರಾಜ್ಯ ವಿಪತ್ತು ನಿರ್ವಹಣಾ ಪಡೆಯ (ಎಸ್‌ಡಿಆರ್‌ಎಫ್) 54 ತಂಡಗಳನ್ನು ಕರಾವಳಿ ಪ್ರದೇಶದಲ್ಲಿ ನಿಯೋಜಿಸಲಾಗಿದೆ. ಸಶಸ್ತ್ರ ಪಡೆಗಳನ್ನೂ ಸನ್ನದ್ಧ ಸ್ಥಿತಿಯಲ್ಲಿ ಇರಿಸಲಾಗಿದೆ.

ಕೋವಿಡ್ ರೋಗಿಗಳಿಗೆ ಚಿಕಿತ್ಸೆ ನೀಡುವ ಆಸ್ಪತ್ರೆಗಳು ವಿದ್ಯುತ್‌ಗೆ ಪರ್ಯಾಯ ವ್ಯವಸ್ಥೆ ಮಾಡಿಕೊಳ್ಳುವಂತೆ ಸೂಚಿಸಲಾಗಿದೆ. ವೈದ್ಯಕೀಯ ಆಮ್ಲಜನಕ ಉತ್ಪಾದನೆಯ ಎಂಟು ಘಟಕಗಳು ರಾಜ್ಯದಲ್ಲಿವೆ. ಅವುಗಳಲ್ಲಿ ನಿರಂತರವಾಗಿ ಉತ್ಪಾದನೆ ಸಾಧ್ಯವಾಗುವಂತೆ ವ್ಯವಸ್ಥೆ ಮಾಡಲು ನಿರ್ದೇಶನ ಕೊಡಲಾಗಿದೆ.

ಎರಡು ಬಾರಿ ಮಾಹಿತಿ ಪಡೆದ ಸಿ.ಎಂ

ಬೆಂಗಳೂರು: ಕರಾವಳಿ ಭಾಗದಲ್ಲಿ 'ತೌತೆ' ಚಂಡಮಾರುತದಿಂದ ಉಂಟಾಗಿರುವ ಹಾನಿ ಮತ್ತು ಸದ್ಯದ ಪರಿಸ್ಥಿತಿಯ ಬಗ್ಗೆ ಆ ಭಾಗದ ಜಿಲ್ಲಾಧಿಕಾರಿಗಳಿಂದ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಭಾನುವಾರ ಬೆಳಿಗ್ಗೆ ಮತ್ತು ಸಂಜೆ ದೂರವಾಣಿ ಮೂಲಕ ಮಾಹಿತಿ ಪಡೆದರು. ಚಂಡಮಾರುತದಿಂದ ಹಾನಿಗೆ ಒಳಗಾದ ಪ್ರದೇಶಗಳಿಗೆ ಭೇಟಿ ನೀಡಿ ಪರಿಹಾರ ಹಾಗೂ ರಕ್ಷಣಾ ಕಾರ್ಯಗಳಲ್ಲಿ ತೊಡಗಿಸಿಕೊಳ್ಳುವಂತೆ ದಕ್ಷಿಣ ಕನ್ನಡ, ಉತ್ತರ ಕನ್ನಡ ಮತ್ತು ಉಡುಪಿ ಜಿಲ್ಲಾಧಿಕಾರಿಗಳು ಮತ್ತು ಸಚಿವರಿಗೆ ಕರೆ ಮಾಡಿ ಸೂಚನೆ ನೀಡಿದರು.

'ರಾಜ್ಯ ಸರ್ಕಾರದಿಂದ ಏನೇ ತುರ್ತು ನೆರವು ಬೇಕಿದ್ದರೂ ಸಂಬಂಧಪಟ್ಟ ಸಚಿವರಿಗೆ ಕರೆ ಮಾಡಿ ತಿಳಿಸಿ. ಅಥವಾ ನೇರವಾಗಿ ನನಗೆ ಕರೆ ಮಾಡಿ. ಮುನ್ನೆಚ್ಚರಿಕೆ ಕ್ರಮಗಳನ್ನು ಸಮರೋಪಾದಿಯಲ್ಲಿ ತೆಗೆದುಕೊಳ್ಳಿ' ಎಂದೂ ಮುಖ್ಯಮಂತ್ರಿ ಸಲಹೆ ನೀಡಿದರು.

ಇನ್ನಷ್ಟು ಸುದ್ದಿಗಳು 4

ಹಳ್ಳಿಗಳಲ್ಲಿ ಆರೈಕೆ ಕೇಂದ್ರ ಸ್ಥಾಪಿಸಲು ಸೂಚನೆ

ಕೇಂದ್ರದಿಂದ ಮಾರ್ಗಸೂಚಿ ಬಿಡುಗಡೆ

ನವದೆಹಲಿ(ಪಿಟಿಐ): ದೇಶದ ಗ್ರಾಮೀಣ ಪ್ರದೇಶಗಳಲ್ಲಿ ಕೋವಿಡ್-19 ಪ್ರಕರಣಗಳು ಹೆಚ್ಚುತ್ತಿರುವುದರಿಂದ, ಸೋಂಕು ಪ್ರಸರಣ ತಡೆಯುವ ಸಂಬಂಧ ಕೇಂದ್ರ ಸರ್ಕಾರ ಭಾನುವಾರ ಹೊಸ ಮಾರ್ಗಸೂಚಿಗಳನ್ನು ಬಿಡುಗಡೆ ಮಾಡಿದೆ.

ಗ್ರಾಮೀಣ ಮತ್ತು ನಗರದ ಹೊರವಲಯ ಪ್ರದೇಶಗಳಲ್ಲಿ ಕನಿಷ್ಠ 30 ಹಾಸಿಗೆಯ ಕೋವಿಡ್ ಆರೈಕೆ ಕೇಂದ್ರಗಳನ್ನು ಸ್ಥಾಪಿಸಬೇಕು ಎಂದು ಸೂಚಿಸಿದೆ.

ಮಧುಮೇಹ, ಅಧಿಕ ರಕ್ತದೊತ್ತಡದಂತಹ ತೊಂದರೆಗಳಿರುವ ಲಕ್ಷಣ ರಹಿತ ಕೋವಿಡ್-19 ಪೀಡಿತರಾದವರಿಗೆ ಅಥವಾ ಸೌಮ್ಯ ಲಕ್ಷಣಗಳಿರುವವರಿಗೆ ಮನೆಯಲ್ಲಿ ಪ್ರತ್ಯೇಕ ವಾಸಕ್ಕೆ (ಹೋಂ ಐಸೋಲೇಷನ್) ಅವಕಾಶ ಇರದಿದ್ದರೆ ಈ ಕೇಂದ್ರಗಳಲ್ಲಿ ಆರೈಕೆ ನೀಡಬೇಕು ಎಂದು ಸೂಚಿಸಲಾಗಿದೆ.

ಎಲ್ಲ ಹಂತಗಳ ಆರೋಗ್ಯ ಕೇಂದ್ರಗಳಲ್ಲಿ ರ್‍ಯಾಪಿಡ್ ಆ್ಯಂಟಿಜೆನ್ ಟೆಸ್ಟ್ (ಆರ್‌ಎಟಿ) ಕಿಟ್‌ಗಳು ಲಭ್ಯವಿರುವಂತೆ ನೋಡಿಕೊಳ್ಳಬೇಕು. ಕೋವಿಡ್-19 ದೃಢಪಟ್ಟವರು ಹಾಗೂ ಸೋಂಕಿನ ಲಕ್ಷಣಗಳಿರುವ ವ್ಯಕ್ತಿಗಳನ್ನು ಒಂದೇ ಕಡೆ ದಾಖಲಿಸಿ, ಚಿಕಿತ್ಸೆ ನೀಡಬಾರದು ಎಂದೂ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ.

9ನೇ ಪುಟ ನೋಡಿ

'ಕಪ್ಪು ಶಿಲೀಂಧ್ರ ರೋಗ ಚಿಕಿತ್ಸೆಗೆ ಸಲಹಾ ಸಮಿತಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಪ್ಪು ಶಿಲೀಂಧ್ರ ರೋಗಕ್ಕೆ ಯಾವ ರೀತಿಯ ಚಿಕಿತ್ಸೆ ನೀಡಬೇಕೆಂದು ಸಲಹೆ ಪಡೆಯಲು ನೇತ್ರ ತಜ್ಞರು ಸೇರಿದಂತೆ 3– 4 ತಜ್ಞರನ್ನು ಒಳಗೊಂಡ ಸಮಿತಿ ರಚಿಸಲಾಗುವುದು. ಈ ರೋಗಕ್ಕೆ ಉಚಿತವಾಗಿ ಚಿಕಿತ್ಸೆ ನೀಡುವ ಬಗ್ಗೆ ಮುಖ್ಯಮಂತ್ರಿ ಜೊತೆ ಚರ್ಚಿಸುತ್ತೇನೆ' ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ತಿಳಿಸಿದರು.

ಸುದ್ದಿಗಾರರ ಜೊತೆ ಭಾನುವಾರ ಮಾತನಾಡಿದ ಅವರು, 'ಈ ರೋಗಕ್ಕೆ ಬೌರಿಂಗ್ ಆಸ್ಪತ್ರೆಯಲ್ಲಿ ಸೋಮವಾರ ದಿಂದಲೇ (ಮೇ 17) ಚಿಕಿತ್ಸೆ ನೀಡಲು ಪ್ರಾಯೋಗಿಕವಾಗಿ ವ್ಯವಸ್ಥೆ ಮಾಡಲಾಗಿದೆ. ನಂತರ ಎಲ್ಲ ಜಿಲ್ಲೆಗಳಲ್ಲಿ ಜಿಲ್ಲಾಸ್ಪತ್ರೆ, ವೈದ್ಯಕೀಯ ಕಾಲೇಜುಗಳಲ್ಲಿ ಚಿಕಿತ್ಸೆ ಆರಂಭಿಸಲಾಗುವುದು' ಎಂದರು.

9ನೇ ಪುಟ ನೋಡಿ

ಕೋಲಾರ: 12 ಮಂದಿಗೆ ಕಪ್ಪು ಶಿಲೀಂಧ್ರ ಸೋಂಕು

ಕೋಲಾರ: ಕೋವಿಡ್‌ನಿಂದ ತತ್ತರಿಸಿರುವ ಜಿಲ್ಲೆಗೆ ಕಪ್ಪು ಶಿಲೀಂಧ್ರ (ಬ್ಲ್ಯಾಕ್ ಫಂಗಸ್) ಸೋಂಕು ದಾಂಗುಡಿ ಇಟ್ಟಿದ್ದು, 12 ಮಂದಿಯಲ್ಲಿ ಈ ಸೋಂಕು ಪತ್ತೆಯಾಗಿದೆ.

ಕೊರೊನಾ ಸೋಂಕಿನಿಂದ ಗುಣಮುಖರಾಗಿ ಆಸ್ಪತ್ರೆಯಿಂದ ಮನೆಗೆ ಮರಳಿದ್ದ 12 ಮಂದಿಯಲ್ಲಿ ಮೂರು ವಾರದ ಬಳಿಕ ಬ್ಲ್ಯಾಕ್ ಫಂಗಸ್ ಸೋಂಕಿನ ಲಕ್ಷಣ ಕಾಣಿಸಿಕೊಂಡಿರುವುದನ್ನು ಆರ್.ಎಲ್. ಜಾಲಪ್ಪ ಆಸ್ಪತ್ರೆ ವೈದ್ಯರು ದೃಢಪಡಿಸಿದ್ದಾರೆ.

9ನೇ ಪುಟ ನೋಡಿ

ರಾಜ್ಯ ಕೋವಿಡ್ ಅಂಕಿ-ಅಂಶ

22,03,462 ▲	ಒಟ್ಟು ಸೋಂಕಿತರು (16,46,303 ನಿನ್ನೆಯ ವಿವರ)
6,00,147 ▼	ಸಕ್ರಿಯ ಪ್ರಕರಣಗಳು
15,81,457 ▲	ಗುಣಮುಖರಾದವರು
21,837 ▲	ಒಟ್ಟು ಸಾವು
ದಿನದ ಏರಿಕೆ	
ಹೊಸ ಪ್ರಕರಣ	31,531 ▼
ಗುಣಮುಖ	36,475 ▲
ಸಾವು	403 ▲

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

'ಸ್ಪುಟ್ನಿಕ್ ಲೈಟ್' ಶೀಘ್ರ ಬಳಕೆಗೆ 9

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಪ್ರಿಯ ವಿದ್ಯಾರ್ಥಿಗಳೇ, ಕೋವಿಡ್‌ನಿಂದಾಗಿ ಈ ವರ್ಷ ತರಗತಿಗಳಿಗೆ ಖುದ್ದಾಗಿ ಹಾಜರಾಗಲು ನಿಮಗೆ ಸಾಧ್ಯವಾಗದಿರಬಹುದು. ಎಸ್ಸೆಸ್ಸೆಲ್ಸಿ-ಪಿಯುಸಿ ಪರೀಕ್ಷೆ ಬರೆಯುವ ನಿಮಗಾಗಿ ಅನುಭವಿ ಶಿಕ್ಷಕರು ನೀಡಿರುವ ಮಾರ್ಗದರ್ಶನ ದಿಕ್ಸೂಚಿಯಲ್ಲಿ..

ಪುಟ-5

ಚಿನಕುರಳಿ

ಪ್ರಕಾಶ್ ಶೆಟ್ಟಿ



ಕೇಂದ್ರ ಸರ್ಕಾರಕ್ಕೆ ರಾಹುಲ್ ಗಾಂಧಿ ಸವಾಲು

ತಾಕತ್ತಿದ್ದರೆ ನನ್ನನ್ನೂ ಬಂಧಿಸಿ

ನವದೆಹಲಿ (ಪಿಟಿಐ): ಕೋವಿಡ್ ಲಸಿಕೆ ರಫ್ತು ಕ್ರಮವನ್ನು ಪ್ರಶ್ನಿಸಿ ರಾಜಧಾನಿಯಲ್ಲಿ ಭಿತ್ತಿಪತ್ರ ಹಾಕಿದ್ದಕ್ಕಾಗಿ ಕನಿಷ್ಠ 25 ಜನರನ್ನು ಬಂಧಿಸಿದ ಪೊಲೀಸರ ಕ್ರಮದ ವಿರುದ್ಧ ಕಾಂಗ್ರೆಸ್ ಮುಖಂಡರು ವ್ಯಾಪಕ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ರಾಹುಲ್

'ಕೋವಿಡ್ ಲಸಿಕೆಗಳನ್ನು ರಫ್ತು ಮಾಡಿದ ಕ್ರಮದ ವಿರುದ್ಧ ನಾವು ಕಠಿಣವಾಗಿ ಪ್ರಶ್ನಿಸುತ್ತೇವೆ. ಧೈರ್ಯವಿದ್ದರೆ ನನ್ನನ್ನೂ ಬಂಧಿಸಿ' ಎಂದು ಕಾಂಗ್ರೆಸ್ ಸಂಸದ ರಾಹುಲ್ ಗಾಂಧಿ ಟ್ವೀಟ್‌ನಲ್ಲಿ ಸವಾಲು ಹಾಕಿದ್ದಾರೆ.

ರಾಹುಲ್ ಗಾಂಧಿ ನೇತೃತ್ವದಲ್ಲಿ ಪ್ರತಿಭಟನೆ ನಡೆದಿದೆ. ಅವರು ತಮ್ಮ ಟ್ವಿಟರ್ ಖಾತೆಯ ಪ್ರೊಫೈಲ್ ಚಿತ್ರದಲ್ಲಿಯೇ ವಿದೇಶಕ್ಕೆ ಲಸಿಕೆ ಏಕೆ ಕಳುಹಿಸಲಾಯಿತು ಎಂದು ಪ್ರಶ್ನಿಸುವ ಭಿತ್ತಿಪತ್ರ ಹಾಕಿಕೊಂಡಿದ್ದಾರೆ.

ಜನರಿಗೆ ಲಸಿಕೆ, ಔಷಧ, ಆಮ್ಲಜನಕ ಸಿಗದಿದ್ದರೆ ಮೋದಿಗೆ ಇನ್ನೂ ಕಠಿಣವಾದ ಪ್ರಶ್ನೆಗಳನ್ನು ಕೇಳುತ್ತಾರೆ ಎಂದು ವಿರೋಧ ಪಕ್ಷ ಕಾಂಗ್ರೆಸ್ ಪ್ರತಿಕ್ರಿಯಿಸಿದೆ.

ಲಸಿಕೆ ಕೊರತೆಯನ್ನು ಪ್ರಶ್ನಿಸಿ, 'ಮೋದಿಯವರೆ, ನಮ್ಮ ಮಕ್ಕಳ ಲಸಿಕೆಯನ್ನು ವಿದೇಶಕ್ಕೆ ಏಕೆ ಕಳುಹಿಸಿದೀರಿ?' ಎಂದು ಪ್ರಶ್ನಿಸಿದ್ದ ಭಿತ್ತಿಪತ್ರಗಳನ್ನು ರಾಜಧಾನಿಯ ವಿವಿಧ ಕಡೆ ಹಾಕಿದ್ದ ಪ್ರಕರಣಕ್ಕೆ ಸಂಬಂಧಿಸಿ ಪೊಲೀಸರು ಶನಿವಾರ 25 ಮಂದಿಯನ್ನು ಬಂಧಿಸಿದ್ದರು. ಅವರ ವಿರುದ್ಧ ಎಫ್‌ಐಆರ್ ಕೂಡ ದಾಖಲಿಸಿದ್ದರು.

> **ಕೇಂದ್ರೀಕೃತವಾಗಿ ನಿರ್ಧಾರ ಕೈಗೊಳ್ಳಲಾಗದು. ಜವಾಬ್ದಾರಿಯನ್ನು ವಿಕೇಂದ್ರೀಕರಣ ಮಾಡಬೇಕು. ಸರ್ಕಾರ ಕೇವಲ ವರ್ಚಸ್ಸಿನ ನಿರ್ವಹಣೆ ಮಾಡುತ್ತಿದೆ**
> **ಪವನ್ ಖೇರಾ,** ಕಾಂಗ್ರೆಸ್ ವಕ್ತಾರ

ಜೈರಾಂ ರಮೇಶ್ ಪ್ರಶ್ನೆ: 'ಕೋವಿಡ್ ಲಸಿಕೆಗಳು ಎಲ್ಲಿ ನಾಪತ್ತೆಯಾದವು' ಎಂದು ಪ್ರಧಾನಿಯನ್ನು ಪ್ರಶ್ನಿಸುವ ಭಿತ್ತಿಪತ್ರವನ್ನು ಕಾಂಗ್ರೆಸ್‌ನ ರಾಜ್ಯಸಭೆ ಸದಸ್ಯ, ಮುಖ್ಯ ಸಚೇತಕ ಜೈರಾಂ ರಮೇಶ್ ತಮ್ಮ ನಿವಾಸದ ಎದುರು ಹಾಕಿದ್ದಾರೆ.

'ಮೋದಿಯವರೇ, ಉತ್ತರ ನೀಡಿ. ಲಸಿಕೆಯು ನಿಮ್ಮ ಹಾಗೇ ಹೇಗೆ ನಾಪತ್ತೆಯಾಯಿತು?' ಎಂದು ಹಿಂದಿಯಲ್ಲಿ ಬರೆಯಲಾದ ಭಿತ್ತಿಪತ್ರವನ್ನು ಇಲ್ಲಿನ ಲೋಧಿ ರಸ್ತೆಯಲ್ಲಿರುವ ಜೈರಾಂ ರಮೇಶ್ ಅವರ ನಿವಾಸದ ಎದುರು ಹಾಕಲಾಗಿದೆ.

ಪ್ರಧಾನಿ ಮೋದಿ ಅವರ ವಿರುದ್ಧ ಟೀಕಾತ್ಮಕ ಭಿತ್ತಿಪತ್ರ ಹಾಕುವುದು ಅಪರಾಧವೇ? ಈಗ ಭಾರತದಲ್ಲಿ ಮೋದಿ ದಂಡಸಂಹಿತೆ ಚಾಲ್ತಿಯಲ್ಲಿದೆಯೇ? ಅಥವಾ ಕೋವಿಡ್ ಪರಿಸ್ಥಿತಿಯ ನಡುವೆ ದೆಹಲಿ ಪೊಲೀಸರಿಗೆ ಬೇರೇ ಕೆಲಸವಿಲ್ಲವೇ ಎಂದು ಪ್ರಶ್ನಿಸಿದ್ದಾರೆ.

'ಇಂಥ ಭಿತ್ತಿಪತ್ರವನ್ನು ನಾನು ಮನೆ ಎದುರು ಹಾಕಿದ್ದೇನೆ. ಬನ್ನಿ, ನನ್ನನ್ನು ಬಂಧಿಸಿ' ಎಂದು ಮಾಡಿರುವ ಟ್ವೀಟ್ ಅನ್ನು ಅವರು ದೆಹಲಿ ಪೊಲೀಸರು ಹಾಗೂ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರಿಗೂ ಟ್ಯಾಗ್ ಮಾಡಿದ್ದಾರೆ.

ಸರಿಯಾಗಿ ನಿರ್ವಹಿಸಿಲ್ಲ: ಸುದ್ದಿಗೋಷ್ಠಿಯಲ್ಲಿ ಮಾತನಾಡಿರುವ ಕಾಂಗ್ರೆಸ್ ವಕ್ತಾರ ಪವನ್ ಖೇರಾ ಅವರು, ಜನರು ಕೋವಿಡ್‌ನಿಂದ ಸಾಯುತ್ತಿಲ್ಲ. ಪಿಡುಗು ನಿರ್ವಹಣೆಯ ಸರ್ಕಾರದ ಅವ್ಯವಸ್ಥೆಯಿಂದ ಸಾಯುತ್ತಿದ್ದಾರೆ. ಕೇಂದ್ರ ಸರ್ಕಾರ ಪರಿಸ್ಥಿತಿಯನ್ನು ಸರಿಯಾಗಿ ನಿರ್ವಹಿಸಿಲ್ಲ ಎಂದು ಟೀಕಿಸಿದರು.

ಎಎಪಿ ಆಕ್ರೋಶ: ಭಿತ್ತಿಪತ್ರ ಪ್ರಕರಣಕ್ಕೆ ಸಂಬಂಧಿಸಿದಂತೆ ದೆಹಲಿ ಪೊಲೀಸರು ಪಕ್ಷದ ಹಲವು ಕಾರ್ಯಕರ್ತರನ್ನು ಬಂಧಿಸಿ, ಕಿರುಕುಳ ನೀಡುತ್ತಿದ್ದಾರೆ ಎಂದು ಎಎಪಿ ಆಕ್ರೋಶ ವ್ಯಕ್ತಪಡಿಸಿದೆ.

ಮೈಸೂರಿನ ಕೆ.ಆರ್.ಆಸ್ಪತ್ರೆ: ಅಂತರವೇ ಮಾಯ

ಸೋಂಕು ಹರಡುವ ಅಪಾಯ

• ಡಿ.ಬಿ.ನಾಗರಾಜ

ಮೈಸೂರು: ಕೊರೊನಾ ವೈರಸ್ ಒಬ್ಬರಿಂದ ಒಬ್ಬರಿಗೆ ಹರಡುವ ಸಾಂಕ್ರಾಮಿಕ ಎಂಬುದು ಜಗಜ್ಜಾಹೀರು. ಆದರೆ ಬಡವರ ದೊಡ್ಡಾಸ್ಪತ್ರೆ ಎಂದು ಬಿಂಬಿತಗೊಂಡಿರುವ ನಗರದ ಕೆ.ಆರ್.ಆಸ್ಪತ್ರೆಯಲ್ಲೇ ಕನಿಷ್ಠ ಅಂತರ ಕಾಪಾಡುತ್ತಿಲ್ಲ.

ಆಮ್ಲಜನಕ ಹಾಸಿಗೆ, ವೆಂಟಿಲೇಟರ್, ಐಸಿಯುನಲ್ಲಿ ಗಂಭೀರ ಪರಿಸ್ಥಿತಿಯಲ್ಲಿರುವ ಕೋವಿಡ್ ಪೀಡಿತರ ಪಕ್ಕದಲ್ಲೇ, ಆರೈಕೆಗಾಗಿ ಕುಟುಂಬದ ಸದಸ್ಯರಿದ್ದಾರೆ.

ಸೋಂಕಿತರ ಹಾಸಿಗೆಯಲ್ಲೇ ಕೂರುವುದು, ಪಕ್ಕದಲ್ಲೇ ಕುರ್ಚಿ ಹಾಕಿಕೊಂಡು ಕಾಳಜಿ ಮಾಡುವುದು, ನೆಲದಲ್ಲೇ ಕುಳಿತು ರೋಗಿಯನ್ನು ನೋಡಿಕೊಳ್ಳುವುದು, ಆಯಾಸವಾದಾಗ ಅಲ್ಲಿಯೇ ಮಲಗಿದ್ದ ಚಿತ್ರಣ ಭಾನುವಾರ ಕಂಡು ಬಂತು.

ಕೆಲ ಸೋಂಕಿತರು ಹಾಸಿಗೆಯಿಲ್ಲದ ಮಂಚದ ಮೇಲೆ ಮಲಗಿ ಚಿಕಿತ್ಸೆ ಪಡೆದರೆ; ಬೆರಳೆಣಿಕೆಯ ಸೋಂಕಿತರು ನೆಲದಲ್ಲಿ- ಕುರ್ಚಿಯಲ್ಲಿ ಕುಳಿತು ಕುಟುಂಬದವರ ಸಹಾಯದಿಂದ ಆಮ್ಲಜನಕ ಪಡೆಯುತ್ತಿರುವುದು ಕಂಡು ಬಂದಿತು.

ಸೋಂಕಿತರ ಆರೈಕೆಗಾಗಿ ಮಹಿಳೆಯರೇ ಇಲ್ಲಿ ಹೆಚ್ಚಿದ್ದಾರೆ. ರೋಗಿ ಮತ್ತು ಆರೈಕೆದಾರರಿಗೆ ಊಟೋಪಚಾರ ಪೂರೈಸುವವರು ಸಹ ಆಸ್ಪತ್ರೆಯೊಳಗೆ ಬಂದು, ಯೋಗಕ್ಷೇಮ ನೋಡಿಕೊಂಡು ಹೋಗುತ್ತಿದ್ದಾರೆ. ಕೌಂಟರ್‌ನಲ್ಲಿರುವ ವೈದ್ಯಕೀಯ ಸಿಬ್ಬಂದಿ ಬಳಿಯೂ ಗುಂಪಾಗಿ ಬಂದು ತಮ್ಮವರ ಆರೋಗ್ಯ ವಿಚಾರಿಸಿಕೊಳ್ಳುತ್ತಾರೆ. ಬಹುತೇಕರು ಮಾಸ್ಕ್ ಸಹ ಸರಿಯಾಗಿ ಧರಿಸಿಲ್ಲದಿರುವುದು ಕಾಣಿಸಿತು.

ಆಸ್ಪತ್ರೆಯೊಳಗೆ ಸೋಂಕಿತರ ಆರೋಗ್ಯ ಮಾಹಿತಿ ಪಡೆಯಲಿಕ್ಕಾಗಿ ಕುಟುಂಬದವರು ಗುಂಪುಗೂಡಿರುವುದು

ಪ್ರಜಾವಾಣಿ ವಿಶೇಷ

> **ನಮ್ಮವರ ಹಾಸಿಗೆ ಸ್ವಚ್ಛಗೊಳಿಸುವುದು, ಬೆಡ್ ಪಾನ್ ಕೊಡಲು, ಅದನ್ನು ತೊಳೆಯುವಂತೆ ಆಸ್ಪತ್ರೆ ಸಿಬ್ಬಂದಿ ನಮಗೆ ಸೂಚಿಸುತ್ತಾರೆ. ಅನಿವಾರ್ಯವಾಗಿ ಇಲ್ಲಿದ್ದೇವಷ್ಟೇ**
> **ಕಮಲ,** ಸೋಂಕಿತರೊಬ್ಬರ ಪತ್ನಿ

> **ನಮ್ಮವರ ಜೊತೆಗಿರುತ್ತೇವೆ ಎಂದು ಸೋಂಕಿತರ ಸಂಬಂಧಿಕರು ಜಗಳ ಮಾಡುತ್ತಾರೆ. ಸಿಬ್ಬಂದಿ ಕೊರತೆಯೂ ನಮ್ಮನ್ನು ಅಸಹಾಯಕರನ್ನಾಗಿಸಿದೆ**
> **ನಂಜುಂಡಸ್ವಾಮಿ**
> ಸ್ಥಾನಿಕ ವೈದ್ಯಾಧಿಕಾರಿ, ಕೆ.ಆರ್.ಆಸ್ಪತ್ರೆ

9ನೇ ಪುಟ ನೋಡಿ

ವೈಟ್‌ಟಾಪಿಂಗ್ ಮಾಡಲಾದ ರಸ್ತೆಗಳ ನಿರ್ವಹಣೆಗೂ ಬೇಕಂತೆ ನೂರಾರು ಕೋಟಿ ರೂಪಾಯಿ

ಅತಿ ದಟ್ಟಣೆ ಕಾರಿಡಾರ್ ಅತಿಯಾಯಿತೇ ವೆಚ್ಚ?

ನಗರದ ತುಮಕೂರು ರಸ್ತೆ ಪ್ರಜಾವಾಣಿ ಚಿತ್ರ/ಎಂ.ಎಸ್.ಮಂಜುನಾಥ್

• ಪ್ರವೀಣ್ ಕುಮಾರ್ ಪಿ.ವಿ.

ಬೆಂಗಳೂರು: ನಗರದ 12 ಅತಿ ದಟ್ಟಣೆಯ ಕಾರಿಡಾರ್‌ಗಳ ನಿರ್ವಹಣೆ ಹೊಣೆಯನ್ನು ಬಿಬಿಎಂಪಿಯ ಬದಲು ಕರ್ನಾಟಕ ರಸ್ತೆ ಅಭಿವೃದ್ಧಿ ಪ್ರಾಧಿಕಾರಕ್ಕೆ (ಕೆಆರ್‌ಡಿಸಿಎಲ್) ರಾಜ್ಯ ಸರ್ಕಾರ ವಹಿಸಿದೆ. ಈ ರಸ್ತೆಗಳ ಅಭಿವೃದ್ಧಿ ಮತ್ತು ನಿರ್ವಹಣೆ ಕುರಿತ ನಾಲ್ಕು ಪ್ಯಾಕೇಜ್‌ಗಳ ಟೆಂಡರ್‌ಗಳನ್ನು ಕೆಆರ್‌ಡಿಸಿಎಲ್ ಅಂತಿಮಗೊಳಿಸಿದೆ. ಈ ರಸ್ತೆಗಳ ಉನ್ನತೀಕರಣಕ್ಕೆ ಮತ್ತು ದೈನಂದಿನ ನಿರ್ವಹಣೆಗೆ ಬಳಕೆಯಾಗುವ ಮೊತ್ತ ಹುಬ್ಬೇರುವಂತೆ ಮಾಡಿದೆ!

12 ಕಾರಿಡಾರ್‌ಗಳ ಒಟ್ಟು 191 ಕಿ.ಮೀ ಉದ್ದದ ರಸ್ತೆಗಳ ಪ್ರಾರಂಭಿಕ ಹಂತದ ಉನ್ನತೀಕರಣಕ್ಕೆ ಒಟ್ಟು ₹ 335.17 ಕೋಟಿ ಹಾಗೂ ದೈನಂದಿನ ನಿರ್ವಹಣೆಗೆ ಮೊದಲ ವರ್ಷಕ್ಕೆ ₹ 142.12 ಕೋಟಿ ವೆಚ್ಚವಾಗಲಿದೆ. ಇನ್ನುಳಿದ ನಾಲ್ಕು ವರ್ಷಗಳಲ್ಲಿ ಇವುಗಳ ನಿರ್ವಹಣೆಗೆ ₹ 643.19 ಕೋಟಿ ವೆಚ್ಚವಾಗುತ್ತದೆ ಎಂದು ಕೆಆರ್‌ಡಿಸಿಎಲ್ ಅಂದಾಜಿಸಿದೆ. ಅಂದರೆ, ಐದು ವರ್ಷಗಳಲ್ಲಿ ಈ ರಸ್ತೆಗಳ ಅಭಿವೃದ್ಧಿ ಮತ್ತು ನಿರ್ವಹಣೆಗೆ ವೆಚ್ಚವಾಗುವ ಒಟ್ಟು ವೆಚ್ಚ ₹1120.48 ಕೋಟಿ.

‘ಇದು ಉತ್ಪ್ರೇಕ್ಷಿತ ಮೊತ್ತ. ನಿಜಕ್ಕೂ ಇಷ್ಟು ವೆಚ್ಚವಾಗಲು ಸಾಧ್ಯವೇ ಇಲ್ಲ. ರಸ್ತೆ ಅಭಿವೃದ್ಧಿಗೆ ₹ 335 ಕೋಟಿ ವ್ಯಯಿಸಿ, ಮತ್ತೆ ಅವುಗಳ ನಿರ್ವಹಣೆಗೆ ಐದು ವರ್ಷಗಳಲ್ಲಿ ₹ 785 ಕೋಟಿ ವ್ಯಯ ಮಾಡುವುದರಲ್ಲಿ ಅರ್ಥವಿದೆಯೇ. ರಾಜ್ಯದಲ್ಲಿ ಯಾವುದೇ ರಸ್ತೆ ಅಭಿವೃದ್ಧಿಪಡಿಸಿದರೂ ಅವುಗಳಿಗೆ ಎರಡು ವರ್ಷಗಳ ದೋಷ ಬಾಧ್ಯತಾ ಅವಧಿ ಇರುತ್ತದೆ. ಈ ಅವಧಿಯಲ್ಲಿ ಏನೇ ದೋಷ ಕಾಣಿಸಿಕೊಂಡರೂ ಗುತ್ತಿಗೆದಾರರೇ ಸರಿಪಡಿಸಬೇಕು. ಹಾಗಿದ್ದರೂ ರಸ್ತೆಗಳ ನಿರ್ವಹಣೆಗೆ ಮೊದಲೆರಡು ವರ್ಷಗಳಿಗೆ ₹ 291.35 ಕೋಟಿ ನೀಡುವ ಅಗತ್ಯವೇನು. ಯಾರಿಗೆ ಅನುಕೂಲ ಮಾಡಿಕೊಡಲು ಸರ್ಕಾರದ ಬೊಕ್ಕಸದ ಹಣವನ್ನು ವೃಥಾ ವ್ಯಯಿಸಲಾಗುತ್ತದೆ’ ಎಂದು ಹೆಸರು ಬಹಿರಂಗಪಡಿಸಲು ಬಯಸದ ಅಧಿಕಾರಿಯೊಬ್ಬರು ಪ್ರಶ್ನಿಸಿದರು.

ಕೆಆರ್‌ಡಿಸಿಎಲ್ ಇಷ್ಟೊಂದು ಮೊತ್ತದ ಅಂದಾಜು ಪಟ್ಟಿಯನ್ನು ಸಿದ್ಧಪಡಿಸಿದ್ದರೂ, ಆರ್ಥಿಕ ಇಲಾಖೆ ಸದ್ಯಕ್ಕೆ ₹ 100 ಕೋಟಿಯನ್ನು ಮಾತ್ರ ಈ ರಸ್ತೆಗಳ ನಿರ್ವಹಣೆಗಾಗಿ ಒದಗಿಸಿದೆ. ಉಳಿಕೆ ಮೊತ್ತವನ್ನು ಬಿಬಿಎಂಪಿಯ ಸಂಪನ್ಮೂಲಗಳಿಂದ ಬಳಸಬೇಕು ಎಂದು ಹೇಳಿದೆ.

ಈ 12 ಕಾರಿಡಾರ್‌ಗಳ ಅಭಿವೃದ್ಧಿ ಮತ್ತು ನಿರ್ವಹಣೆಯನ್ನು ಕೆಆರ್‌ಡಿಸಿಎಲ್‌ಗೆ ನೀಡುವುದಕ್ಕೆ ಆರಂಭದಲ್ಲೇ ಬಿಬಿಎಂಪಿ ವಿರೋಧ ವ್ಯಕ್ತಪಡಿಸಿತ್ತು. ಈ ಕುರಿತು ಸರ್ಕಾರಕ್ಕೆ ಪತ್ರ ಬರೆದಿದ್ದ ಬಿಬಿಎಂಪಿಯ ಹಿಂದಿನ ಆಯುಕ್ತರು ಈ ರಸ್ತೆಗಳ ಅಭಿವೃದ್ಧಿ ಮತ್ತು ನಿರ್ವಹಣೆಯ ಹೊಣೆಯನ್ನು ಪಾಲಿಕೆಗೇ ನೀಡುವಂತೆ ಕೋರಿದ್ದರು. ಈ ಪ್ರಸ್ತಾವಕ್ಕೆ ಸಮನ್ವಯ ಸಮಿತಿ ಸಭೆಯಲ್ಲಿ ಹಿಂದಿನ ಮುಖ್ಯ ಕಾರ್ಯದರ್ಶಿಯವರೂ ಸಮ್ಮತಿ ಸೂಚಿಸಿದ್ದರು. ಆ ಬಳಿಕ ಕೆಆರ್‌ಡಿಸಿಎಲ್ ಅಧ್ಯಕ್ಷರ ಒತ್ತಡಕ್ಕೆ ಸರ್ಕಾರ ಮಣಿದಿತ್ತು. 2020ರ ನ 12ರಂದು ನಡೆದ ಸಚಿವ ಸಂಪುಟ ಸಭೆಯಲ್ಲಿ ಈ ರಸ್ತೆಗಳ ನಿರ್ವಹಣೆಯನ್ನು ಕೆಆರ್‌ಡಿಸಿಎಲ್‌ಗೆ ನೀಡುವುದಕ್ಕೆ ಅನುಮೋದನೆ ನೀಡಿತ್ತು.

ಈ ಯೋಜನೆಯನ್ನು ಮತ್ತೊಮ್ಮೆ ಕೂಲಂಕಷವಾಗಿ ಪರಿಶೀಲನೆಗೆ ಒಳಪಡಿಸಬೇಕು. ಕೊರೊನಾದಂತಹ ಬಿಕ್ಕಟ್ಟಿನ ಸಮಯದಲ್ಲಿ ಇಂತಹ ದುಂದುವೆಚ್ಚಗಳಿಗೆ ಕಡಿವಾಣ ಹಾಕಬೇಕು ಎಂದು ಅಧಿಕಾರಿಯೊಬ್ಬರು ಒತ್ತಾಯಿಸಿದರು.

ಕಾರಿಡಾರ್‌ಗಳ ವಾರ್ಷಿಕ ನಿರ್ವಹಣೆ ಮೊತ್ತ (₹ ಕೋಟಿಗಳಲ್ಲಿ)				
2021-21	2021-22	2022-23	2023-24	2024-25
142.12	149.23	156.69	164.52	172.75

ವಿವಿಧ ಕಾಮಗಾರಿಗಳು ಸೇರಿವೆ: ಕೆಆರ್‌ಡಿಸಿಎಲ್

‘ನಿಗಮವು 12 ಅತಿ ಹೆಚ್ಚು ದಟ್ಟಣೆಯ ಕಾರಿಡಾರ್‌ಗಳಲ್ಲಿ 68 ಕಿ.ಮೀ ರಸ್ತೆಯನ್ನು ಮಾತ್ರ ಅಭಿವೃದ್ಧಿಪಡಿಸಿದರೂ 191 ಕಿ.ಮೀ ಉದ್ದಕ್ಕೂ ವಿವಿಧ ಕಾಮಗಾರಿಗಳನ್ನು ನಿರ್ವಹಿಸಬೇಕಾಗಿದೆ. ಇಷ್ಟೂ ಉದ್ದಕ್ಕೂ ಹೊಸತಾಗಿ ಪಾದಚಾರಿ ಮಾರ್ಗಗಳನ್ನು ಅಭಿವೃದ್ಧಿಪಡಿಸಲಿದ್ದೇವೆ. ವಿಭಜಕಗಳಲ್ಲಿ ಗಿಡಗಳನ್ನು ಬೆಳೆಸಲಿದ್ದೇವೆ. ಈ ರಸ್ತೆಗಳನ್ನು ಬೇಕಾಬಿಟ್ಟಿ ದಾಟುವುದನ್ನು ತಡೆಯಲು ಎತ್ತರದ ರಸ್ತೆ ವಿಭಜಕ ಅಳವಡಿಸಲಿದ್ದೇವೆ. ರಸ್ತೆ ಪಕ್ಕದ ಮಳೆ ನೀರು ಚರಂಡಿಗಳನ್ನು ಅಭಿವೃದ್ಧಿಪಡಿಸಿ ನಿರ್ವಹಿಸಲಿದ್ದೇವೆ. ನಿರ್ವಹಣೆ ವೆಚ್ಚ ಪ್ರತಿವರ್ಷ ಶೇ 5ರಷ್ಟು ಹೆಚ್ಚಳವಾಗಲಿದೆ’ ಎಂದು ಕೆಆರ್‌ಡಿಸಿಎಲ್ ಮುಖ್ಯ ಎಂಜಿನಿಯರ್ ಬಿ.ಎಸ್.ಶಿವಕುಮಾರ್ ‘ಪ್ರಜಾವಾಣಿ’ಗೆ ತಿಳಿಸಿದರು.

‘12 ಕಾರಿಡಾರ್‌ಗಳ ಅಭಿವೃದ್ಧಿ ಹಾಗೂ ನಿರ್ವಹಣೆಯ ಟೆಂಡರ್‌ಗಳು ಅಂತಿಮಗೊಂಡಿವೆ. ಆದರೆ, ಅದಕ್ಕೆ ಅಧಿಕಾರಯುಕ್ತ ಸಮಿತಿಯ ಅನುಮೋದನೆ ಬಾಕಿ ಇದೆ’ ಎಂದು ಅವರು ಮಾಹಿತಿ ನೀಡಿದರು.

ಉತ್ತರ ಸಿಗದ ಪ್ರಶ್ನೆಗಳು?

- ರಸ್ತೆ ನಿರ್ವಹಣೆಗಾಗಿ ಬಿಬಿಎಂಪಿಗೆ ನಯಾ ಪೈಸೆಯನ್ನೂ ನೀಡದ ಸರ್ಕಾರ ಕೆಆರ್‌ಡಿಸಿಎಲ್‌ಗೆ ವರ್ಷಕ್ಕೆ ₹ 150 ಕೋಟಿವರೆಗೂ ನೀಡುತ್ತಿರುವುದರ ಗುಟ್ಟೇನು?
- ಈ 12 ಕಾರಿಡಾರ್‌ಗಳಲ್ಲಿ 53.42 ಕಿ.ಮೀಗಳಷ್ಟು ಉದ್ದದ ವೈಟ್ ಟಾಪಿಂಗ್ ರಸ್ತೆಗಳಿವೆ. ಇವುಗಳ ನಿರ್ವಹಣೆಗೆ ತೀರಾ ಕಡಿಮೆ ವೆಚ್ಚವಾಗುತ್ತದೆ. ಆದರೂ ಕಾರಿಡಾರ್‌ಗಳ ನಿರ್ವಹಣೆಗೆ ಕೋಟ್ಯಂತರ ರೂಪಾಯಿ ಏಕೆ ಬೇಕು?
- ಹೆಬ್ಬಾಳ-ಕೆ.ಆರ್.ಪುರ-ಸಿಲ್ಕ್‌ಬೋರ್ಡ್ ಹೊರ ವರ್ತುಲ ರಸ್ತೆಯಲ್ಲಿ ಮೆಟ್ರೊ ಮಾರ್ಗ ನಿರ್ಮಾಣವಾಗುವುದರಿಂದ ಈ ಹಂತದಲ್ಲಿ ಇಲ್ಲಿ ರಸ್ತೆ ಅಭಿವೃದ್ಧಿ ಕಾರ್ಯಸಾಧುವೇ?

ಕಾಮಗಾರಿಯ ನಾಲ್ಕು ಪ್ಯಾಕೇಜ್‌ಗಳ ವಿವರ						
ಪ್ಯಾಕೇಜ್	ಅಂದಾಜು ಮೊತ್ತ (₹ ಕೋಟಿಗಳಲ್ಲಿ)	ಟೆಂಡರ್‌ಗಿಟ್ಟ ಮೊತ್ತ (₹ ಕೋಟಿಗಳಲ್ಲಿ)	ರಸ್ತೆ ಉದ್ದ (ಕಿ.ಮೀ)	ವಾಸ್ತವದಲ್ಲಿ ಅಭಿವೃದ್ಧಿ (ಕಿ.ಮೀ)	ಬಿಡ್ ಮೊತ್ತ	ಟೆಂಡರ್ ಪ್ರೀಮಿಯಂ (%)
1	303.86	241.62	44.56	17.87	231.82	8.02
2	264.91	184.14	42.39	27.00	200.89	9.097
3	233.51	159.68	49.45	1.15	173.1	8.40
4	318.21	229.30	54.60	21.86	258.19	8.02
ಒಟ್ಟು	1120.49	787.74	190.99	67.88	864	-

ಅಭಿವೃದ್ಧಿ ಆಗಬೇಕಿರುವುದು 67 ಕಿ.ಮೀ. ಮಾತ್ರ!

ಕೆಆರ್‌ಡಿಸಿಎಲ್‌ಗೆ ವಹಿಸಲಾಗಿರುವ 191 ಕಿ.ಮೀ ರಸ್ತೆಗಳಲ್ಲಿ ಬಿಬಿಎಂಪಿ ಅಧೀನದ 98 ಕಿ.ಮೀ ರಸ್ತೆ ಸೇರಿದೆ. ಇದರಲ್ಲಿ 53.42 ಕಿ.ಮೀ ರಸ್ತೆ ವೈಟ್‌ಟಾಪಿಂಗ್ ಯೋಜನೆಯಡಿ ಅಭಿವೃದ್ಧಿಗೊಂಡಿದೆ. 20.8 ಕಿ.ಮೀ ಉದ್ದದ ರಸ್ತೆಯಲ್ಲಿ ನಮ್ಮ ಮೆಟ್ರೊ ಕಾಮಗಾರಿ ನಡೆಯಲಿದೆ. ಹಾಗಾಗಿ ಸದ್ಯಕ್ಕೆ ಅಭಿವೃದ್ಧಿಪಡಿಸಬೇಕಾದ ರಸ್ತೆಗಳ ಉದ್ದ 67.88 ಕಿ.ಮೀ ಮಾತ್ರ. ಆದರೂ 191 ಕಿ.ಮೀ. ಉದ್ದದ ರಸ್ತೆ ಅಭಿವೃದ್ಧಿ ಪಡಿಸಬೇಕಿದೆ ಎಂದು ಟೆಂಡರ್ ಕರೆಯಲಾಗಿದೆ ಎನ್ನುತ್ತವೆ ಬಿಬಿಎಂಪಿ ಮೂಲಗಳು.

ಅಧಿಕಾರಯುಕ್ತ ಸಮಿತಿ ಬಿಬಿಎಂಪಿ ಟೆಂಡರ್‌ಗಳಿಗೆ ಕೇವಲ ಶೇ 1ರಷ್ಟು ಟೆಂಡರ್ ಪ್ರೀಮಿಯಂಗಳನ್ನು (ಟೆಂಡರ್‌ನ ಮೂಲ ಮೊತ್ತಕ್ಕಿಂತ ಹೆಚ್ಚುವರಿ ಮೊತ್ತ) ಮಾತ್ರ ಅನುಮೋದಿಸುತ್ತಾ ಬಂದಿದೆ. ಎರಡು ವರ್ಷಗಳಲ್ಲಿ ಯಾವುದೇ ಟೆಂಡರ್‌ಗೂ ಇದಕ್ಕಿಂತ ಹೆಚ್ಚು ಟೆಂಡರ್ ಪ್ರೀಮಿಯಂ ನೀಡಿಲ್ಲ. ಆದರೆ, ಕೆಆರ್‌ಡಿಸಿಎಲ್‌ನ ಟೆಂಡರ್‌ಗಳ ಹೆಚ್ಚುವರಿ ಪ್ರೀಮಿಯಂ ಮೊತ್ತ ಶೇ 8ರಿಂದ ಶೇ 9ರವರೆಗಿದೆ. ಇದಕ್ಕೆ ಅಧಿಕಾರಯುಕ್ತ ಸಮಿತಿ ಅನುಮೋದನೆ ನೀಡಲು ಸಾಧ್ಯವೇ ಎಂಬುದು ಪ್ರಶ್ನೆ.

‘ಕೆಆರ್‌ಡಿಸಿಎಲ್‌ನ ಕಾಮಗಾರಿ ವಹಿಸಿಕೊಂಡ ಗುತ್ತಿಗೆದಾರರು ಬೆಂಗಳೂರಿನಲ್ಲಿ ಬಿಬಿಎಂಪಿಯ ಕಾಮಗಾರಿಯನ್ನು ಕೇವಲ ಶೇ 1ರಷ್ಟು ಟೆಂಡರ್ ಪ್ರೀಮಿಯಂನಲ್ಲಿ ನಡೆಸುತ್ತಿದ್ದಾರೆ. ಅದೇ ಗುತ್ತಿಗೆದಾರರಿಗೆ ಶೇ 8ಕ್ಕಿಂತ ಹೆಚ್ಚು ಪ್ರೀಮಿಯಂ ನೀಡುವ ಔಚಿತ್ಯವೇನು. ಬಿಬಿಎಂಪಿ ಕಾಮಗಾರಿಗಳ ಟೆಂಡರ್ ಪ್ರೀಮಿಯಂ ಮೊತ್ತವನ್ನು ಪಾಲಿಕೆಯೇ ಭರಿಸಬೇಕು ಎಂದು ಷರತ್ತು ವಿಧಿಸಲಾಗುತ್ತದೆ. ಇದೇ ಷರತ್ತುಗಳನ್ನು ಕೆಆರ್‌ಡಿಸಿಎಲ್‌ಗೆ ಏಕೆ ಅನ್ವಯಿಸಿಲ್ಲ’ ಎಂದು ಅಧಿಕಾರಿಯೊಬ್ಬರು ಪ್ರಶ್ನಿಸಿದರು.

₹ 285 ಕೋಟಿ ಎಲ್ಲಿಂದ ತರಲಿದೆ ಬಿಬಿಎಂಪಿ?

ಬಿಬಿಎಂಪಿ ತನ್ನ ಅಧೀನದ 13 ಸಾವಿರ ಕಿ.ಮೀ ಉದ್ದದ ರಸ್ತೆಗಳ ಅಭಿವೃದ್ಧಿಗೆ ವೆಚ್ಚ ಮಾಡುವುದು ₹ 25 ಕೋಟಿ. ಆದರೆ, 12 ಕಾರಿಡಾರ್‌ಗಳ ಐದು ವರ್ಷಗಳ ನಿರ್ವಹಣೆಗೆ ಬಿಬಿಎಂಪಿ ₹ 285 ಕೋಟಿ ಭರಿಸಬೇಕಿದೆ. ನೂರಾರು ಕಾಮಗಾರಿಗಳ ಸಾವಿರಾರು ಕೋಟಿ ರೂಪಾಯಿ ಬಿಲ್‌ಗಳು ಬಾಕಿ ಇವೆ. ವಸ್ತುಸ್ಥಿತಿ ಹೀಗಿರುವಾಗ ಈ ಕೆಆರ್‌ಡಿಸಿಎಲ್‌ಗೆ ರಸ್ತೆ ನಿರ್ವಹಣೆಯ ಮೊತ್ತವನ್ನು ಭರಿಸಲು ಬಿಬಿಎಂಪಿಗೆ ಸಾಧ್ಯವಾಗಲಿದೆಯೇ ಎಂಬುದು ಪ್ರಶ್ನೆ.

ಜಾಲತಾಣ ಹ್ಯಾಕ್: ರೆಸ್ಯುಮೆ ಕದ್ದು ₹ 7 ಲಕ್ಷ ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಾಲತಾಣವೊಂದರಲ್ಲಿ ಅಪ್‌ಲೋಡ್ ಮಾಡಿದ್ದ ರೆಸ್ಯುಮೆ ಮಾಹಿತಿ ಕದ್ದು ಅಭ್ಯರ್ಥಿಯನ್ನು ಸಂಪರ್ಕಿಸಿದ್ದ ಸೈಬರ್ ವಂಚಕರು, ಕೆಲಸದ ಆಮಿಷವೊಡ್ಡಿ ಶುಲ್ಕದ ಹೆಸರಿನಲ್ಲಿ ₹ 7 ಲಕ್ಷ ಪಡೆದು ವಂಚಿಸಿದ್ದಾರೆ.

‘ಹೊಸಕೆರೆಹಳ್ಳಿಯ 26 ವರ್ಷದ ಯುವಕ ವಂಚನೆ ಬಗ್ಗೆ ದೂರು ನೀಡಿದ್ದಾರೆ. ಅಪರಿಚಿತರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ’ ಎಂದು ದಕ್ಷಿಣ ವಿಭಾಗ ಸೈಬರ್ ಕ್ರೈಂ ಠಾಣೆ ಪೊಲೀಸರು ಹೇಳಿದರು.

‘ಕೆಲಸಕ್ಕಾಗಿ ಹುಡುಕಾಟ ನಡೆಸುತ್ತಿದ್ದ ಯುವಕ, ಜಾಲತಾಣವೊಂದರಲ್ಲಿ ರೆಸ್ಯುಮೆ ಅಪ್‌ಲೋಡ್ ಮಾಡಿದ್ದರು. ಅದೇ ಜಾಲತಾಣ ಹ್ಯಾಕ್ ಮಾಡಿ ರೆಸ್ಯುಮೆ ದತ್ತಾಂಶ ಕದ್ದಿದ್ದ ಆರೋಪಿಗಳು, ಅದರಲ್ಲಿರುವ ಮಾಹಿತಿ ಆಧರಿಸಿ ಯುವಕನ ಮೊಬೈಲ್‌ಗೆ ಕರೆ ಮಾಡಿದ್ದರು.’

‘ಕಿಯಾ ಮೋಟಾರ್ಸ್ ಕಂಪನಿಯಲ್ಲಿ ಕೆಲಸ ಖಾಲಿ ಇದ್ದು, ನಿಮ್ಮ ಅರ್ಹತೆಗೆ ಹೊಂದುತ್ತದೆ. ನೀವು ಒಪ್ಪಿದರೆ ಕೆಲಸ ಕೊಡಿಸುತ್ತೇವೆ’ ಎಂದು ಆರೋಪಿಗಳು ಹೇಳಿದ್ದರು. ಅದಕ್ಕೆ ಯುವಕ ಒಪ್ಪಿದ್ದರು’ ಎಂದೂ ಹೇಳಿದರು.

‘ಕೆಲಸಕ್ಕೆ ಆಯ್ಕೆಯಾದರೆ ಲಕ್ಷಾಂತರ ರೂಪಾಯಿ ಸಂಬಳ ಹಾಗೂ ಸವಲತ್ತುಗಳು ಇವೆ. ಆದರೆ, ಕೆಲಸ ಸಿಗಲು ಕೆಲ ಷರತ್ತುಗಳನ್ನು ಪೂರೈಸಬೇಕು. ಅರ್ಜಿ, ಸಂದರ್ಶನ ಹಾಗೂ ಇತರೆ ಶುಲ್ಕಗಳನ್ನು ಪಾವತಿಸಬೇಕು’ ಎಂದೂ ಆರೋಪಿಗಳು ಹೇಳಿದ್ದರು. ಅದನ್ನು ನಂಬಿದ್ದ ಯುವಕ, ಆರೋಪಿಗಳು ನೀಡಿದ್ದ ಬ್ಯಾಂಕ್ ಖಾತೆಗಳಿಗೆ ಹಂತ ಹಂತವಾಗಿ ₹ 7 ಲಕ್ಷ ಜಮೆ ಮಾಡಿದ್ದರು. ಅದಾದ ನಂತರ ಯಾವುದೇ ಕೆಲಸ ಕೊಡಿಸದೇ ಆರೋಪಿಗಳು ನಾಪತ್ತೆಯಾಗಿದ್ದಾರೆ’ ಎಂದೂ ಪೊಲೀಸರು ಮಾಹಿತಿ ನೀಡಿದರು.

ಮೊಬೈಲ್ ನಿಷ್ಕ್ರಿಯವೆಂದು ಹೇಳಿ ₹ 1.23 ಲಕ್ಷ ವಂಚನೆ

ಬಿಎಸ್‌ಎನ್‌ಎಲ್ ಕಂಪನಿ ಪ್ರತಿನಿಧಿ ಸೋಗಿನಲ್ಲಿ ನಗರದ ನಿವಾಸಿಯೊಬ್ಬರಿಗೆ ಕರೆ ಮಾಡಿದ್ದ ಸೈಬರ್ ವಂಚಕರು, ಬ್ಯಾಂಕ್ ಖಾತೆಯಿಂದ ₹ 1.23 ಲಕ್ಷ ಡ್ರಾ ಮಾಡಿಕೊಂಡು ವಂಚಿಸಿದ್ದಾರೆ.

ಇಸ್ರೊ ಲೇಔಟ್ ನಿವಾಸಿಯಾದ 59 ವರ್ಷದ ಎಂಜಿನಿಯರ್ ವಂಚನೆ ಬಗ್ಗೆ ದಕ್ಷಿಣ ವಿಭಾಗದ ಸೈಬರ್ ಕ್ರೈಂ ಠಾಣೆಗೆ ದೂರು ನೀಡಿದ್ದಾರೆ.

‘ಮೇ 3ರಂದು ದೂರುದಾರರ ಮೊಬೈಲ್‌ಗೆ ಕರೆ ಮಾಡಿದ್ದ ಆರೋಪಿ, ಬಿಎಸ್‌ಎನ್‌ಎಲ್ ಕಂಪನಿ ಪ್ರತಿನಿಧಿಯೆಂದು ಹೇಳಿದ್ದ. ‘ನಿಮ್ಮ ಮೊಬೈಲ್ ಸಂಖ್ಯೆ ಸದ್ಯದಲ್ಲೇ ನಿಷ್ಕ್ರಿಯವಾಗಲಿದೆ. ಆ ರೀತಿ ಆಗಬಾರದೆಂದರೆ ನಿಮ್ಮ ವೈಯಕ್ತಿಕ ಮಾಹಿತಿಯನ್ನು ಮೊಬೈಲ್ ಆ್ಯಪ್‌ನಲ್ಲಿ ಭರ್ತಿ ಮಾಡಿ ₹ 10 ಶುಲ್ಕ ಪಾವತಿ ಮಾಡಬೇಕು’ ಎಂಬುದಾಗಿ ಆರೋಪಿ ತಿಳಿಸಿದ್ದ’ ಎಂದು ಪೊಲೀಸರು ಹೇಳಿದರು.

‘ಆರೋಪಿ ಮಾತು ನಂಬಿದ್ದ ದೂರುದಾರ, ಎನಿ ಡೆಸ್ಕ್ ಆ್ಯಪ್ ಡೌನ್‌ಲೋಡ್ ಮಾಡಿಕೊಂಡು ಮೊಬೈಲ್‌ನಲ್ಲಿ ಇನ್‌ಸ್ಟಾಲ್ ಮಾಡಿಕೊಂಡಿದ್ದರು. ನಂತರ, ಅದರಲ್ಲಿ ತಮ್ಮ ಕ್ರೆಡಿಟ್ ಕಾರ್ಡ್ ಮಾಹಿತಿ ಭರ್ತಿ ಮಾಡಿ ₹ 10 ಶುಲ್ಕವನ್ನೂ ಪಾವತಿಸಿದ್ದರು. ಅದಾದ ಕೆಲ ಸಮಯಗಳ ನಂತರ ಆರೋಪಿಗಳು, ದೂರುದಾರರ ಖಾತೆಯಿಂದ ಹಂತ ಹಂತವಾಗಿ ₹ 1.23 ಲಕ್ಷ ಡ್ರಾ ಮಾಡಿಕೊಂಡಿದ್ದಾರೆ’ ಎಂದೂ ತಿಳಿಸಿದರು.

‘ಅಮೆಜಾನ್ ಇಂಡಿಯಾ’ ಹೆಸರಲ್ಲಿ ₹ 1.49 ಲಕ್ಷ ವಂಚನೆ

ಅಪರಾಧ ಸುದ್ದಿ

‘ಅಮೆಜಾನ್ ಇಂಡಿಯಾ’ ಕಂಪನಿಯಿಂದ ಉಡುಗೊರೆ ಬಂದಿರುವುದಾಗಿ ಹೇಳಿ ನಗರದ ಯುವತಿಯೊಬ್ಬರಿಂದ ₹ 1.49 ಲಕ್ಷ ಪಡೆದು ವಂಚಿಸಲಾಗಿದ್ದು, ಈ ಸಂಬಂಧ ಈಶಾನ್ಯ ವಿಭಾಗದ ಸೈಬರ್ ಕ್ರೈಂ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ದೇವನಹಳ್ಳಿ ನಿವಾಸಿಯಾಗಿರುವ 25 ವರ್ಷದ ಯುವತಿ ವಂಚನೆ ಬಗ್ಗೆ ದೂರು ನೀಡಿದ್ದಾರೆ. ಅಪರಿಚಿತರ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಮೇ 7ರಂದು ದೂರುದಾರರ ಮೊಬೈಲ್‌ಗೆ ಕರೆ ಮಾಡಿದ್ದ ಆರೋಪಿ, ಅಮೆಜಾನ್ ಇಂಡಿಯಾ ಕಂಪನಿ ಪ್ರತಿನಿಧಿಯೆಂದು ಪರಿಚಯಿಸಿಕೊಂಡಿದ್ದ. ‘ನಮ್ಮ ಕಂಪನಿಯಿಂದ ನಿಮಗೆ ಉಡುಗೊರೆ ಬಂದಿದೆ. ಅದನ್ನು ನಿಮ್ಮ ವಿಳಾಸಕ್ಕೆ ಸದ್ಯದಲ್ಲೇ ಕಳುಹಿಸಲಿದ್ದೇವೆ. ಅದಕ್ಕೆ ಕೆಲ ಶುಲ್ಕಗಳನ್ನು ಪಾವತಿಸಬೇಕು’ ಎಂದೂ ಆರೋಪಿ ಹೇಳಿದ್ದ.’

‘ಆರೋಪಿ ಮಾತು ನಂಬಿದ್ದ ಯುವತಿ, ಆತ ನೀಡಿದ್ದ ಸಂಖ್ಯೆಗೆ ಗೂಗಲ್ ಪೇ ಮೂಲಕ ಹಂತ ಹಂತವಾಗಿ ₹ 1.49 ಲಕ್ಷ ಪಾವತಿಸಿದ್ದರು. ಅದಾದ ನಂತರ ಆರೋಪಿಗಳು ನಾಪತ್ತೆಯಾಗಿದ್ದಾರೆ’ ಎಂದೂ ಮೂಲಗಳು ತಿಳಿಸಿವೆ.

ಕೊರೊನಾ ಸೋಂಕಿತರ ಕುಟುಂಬಕ್ಕೆ ಬೆದರಿಕೆ; ಚಾಕು ಇರಿತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಂದಿರಾನಗರ ಠಾಣೆ ವ್ಯಾಪ್ತಿಯಲ್ಲಿ ಕೊರೊನಾ ಸೋಂಕಿತರ ಕುಟುಂಬಕ್ಕೆ ಜೀವ ಬೆದರಿಕೆ ಹಾಕಿ, ಸದಸ್ಯರೊಬ್ಬರ ಮೇಲೆ ಚಾಕುವಿನಿಂದ ಹಲ್ಲೆ ಮಾಡಲಾಗಿದೆ.

‘ಮೇ 14ರಂದು ರಾತ್ರಿ ಈ ಘಟನೆ ನಡೆದಿದೆ. ನರ್ಸಿಂಗ್ ವಿದ್ಯಾರ್ಥಿನಿ ಪ್ರಿಯದರ್ಶಿನಿ ಎಂಬುವರು ದೂರು ನೀಡಿದ್ದಾರೆ. ಆರೋಪಿಗಳಾದ ಲಕ್ಷ್ಮಿಪುರದ ರಾಮ್, ಪ್ರಭು ಹಾಗೂ ಅರ್ಜುನ್ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಪ್ರಿಯದರ್ಶಿನಿ ಅವರು ತಂದೆ–ತಾಯಿ ಜೊತೆ ವಾಸವಿದ್ದಾರೆ. 2020ರ ಸೆಪ್ಟೆಂಬರ್‌ನಲ್ಲಿ ತಾಯಿಗೆ ಸೋಂಕು ತಗುಲಿತ್ತು. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡು ಅವರು ಗುಣಮುಖರಾಗಿದ್ದರು. ಆದರೆ. ಅಕ್ಕ– ಪಕ್ಕದ ಕೆಲ ಮನೆಯವರು ಅವರಿಗೆ ಕಿರುಕುಳ ನೀಡಲಾರಂಭಿಸಿದ್ದರು. ‘ನಮಗೆ ಕೊರೊನಾ ಸೋಂಕು ತಂದು ಹಚ್ಚುತ್ತಿದ್ದಿರಾ’ ಎಂದು ಪೀಡಿಸುತ್ತಿದ್ದರು’ ಎಂದೂ ಮೂಲಗಳು ತಿಳಿಸಿವೆ.

‘ಆರೋಪಿಗಳಾದ ರಾಮ್, ಪ್ರಭು ಹಾಗೂ ಅರ್ಜುನ್ ಸಹ ಪದೇ ಪದೇ ದೂರುದಾರ ಯುವತಿ ಮತ್ತು ಅವರ ಕುಟುಂಬದವರ ಜೊತೆ ಗಲಾಟೆ ಮಾಡುತ್ತಿದ್ದರು. ಇದೇ ಮೇ 14ರಂದು ಸಂಜೆ ಯುವತಿ ಮನೆ ಬಳಿ ಬಂದಿದ್ದ ಆರೋಪಿಗಳು, ಅವಾಚ್ಯ ಶಬ್ದಗಳಿಂದ ಬೈದಿದ್ದರು. ಅದನ್ನು ಪ್ರಶ್ನಿಸಿದ್ದಕ್ಕೆ ಹಲ್ಲೆ ಮಾಡಿ ಜೀವ ಬೆದರಿಕೆ ಹಾಕಿದ್ದರು. ಇದೇ ಸಂದರ್ಭದಲ್ಲೇ ಚಾಕುವಿನಿಂದ ದೂರುದಾರ ಯುವತಿ ಕೈಗೂ ಆರೋಪಿಗಳು ಇರಿದಿದ್ದರು’ ಎಂದು ಪೊಲೀಸರು ಹೇಳಿದರು.

ನಕಲಿ ಖಾತೆ ತೆರೆದು ಔಷಧಿ ಮಾರಾಟ

ವೈದ್ಯರ ಹೆಸರಿನಲ್ಲಿ ‘ಇಂಡಿಯಾ ಮಾರ್ಟ್’ ಜಾಲತಾಣದಲ್ಲಿ ನಕಲಿ ಖಾತೆ ತೆರೆದು ಕೋವಿಡ್ ಔಷಧಿ ಮಾರಾಟ ಮಾಡಿ ಜನರನ್ನು ವಂಚಿಸಲಾಗುತ್ತಿದ್ದು, ಈ ಸಂಬಂಧ ಆಗ್ನೇಯ ವಿಭಾಗ ಸೈಬರ್ ಕ್ರೈಂ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ನಗರದ ಪ್ರತಿಷ್ಠಿತ ವೈದ್ಯರ ಹೆಸರು ಬಳಸಿಕೊಂಡು ವಂಚಕರು ಔಷಧಿ ಮಾರುತ್ತಿದ್ದಾರೆ. ಈ ಬಗ್ಗೆ ವೈದ್ಯರೊಬ್ಬರು ಇತ್ತೀಚೆಗೆ ದೂರು ನೀಡಿದ್ದು, ಅದನ್ನು ಆಧರಿಸಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಕೋರಮಂಗಲ ನಿವಾಸಿಯಾಗಿರುವ ವೈದ್ಯರೊಬ್ಬರ ಫೋಟೊ ಹಾಗೂ ವಿವರ ಬಳಸಿಕೊಂಡು ಇಂಡಿಯಾ ಮಾರ್ಟ್ ಜಾಲತಾಣದಲ್ಲಿ ನಕಲಿ ಖಾತೆ ತೆರೆಯಲಾಗಿದೆ. ‘ನಾನು ಕೋವಿಡ್ ರೋಗಕ್ಕೆ ಔಷಧಿ ನೀಡುತ್ತೇನೆ. ಬೇಕಾದವರು ಸಂಪರ್ಕಿಸಿ’ ಎಂದು ಜಾಹೀರಾತು ಪ್ರಕಟಿಸಿದ್ದಾರೆ. ಇದನ್ನು ನಂಬಿ ಹಲವರು ಔಷಧಿಯನ್ನು ಖರೀದಿಸಿದ್ದಾರೆ. ವಿಷಯ ಗೊತ್ತಾಗುತ್ತಿದ್ದಂತೆ ವೈದ್ಯ ಠಾಣೆಗೆ ಬಂದು ಮಾಹಿತಿ ನೀಡಿದ್ದಾರೆ. ಈಗಾಗಲೇ ಹಲವರು ಆರೋಪಿಗಳ ಬಳಿ ಔಷಧಿ ಖರೀದಿಸಿ ವಂಚನೆಗೀಡಾಗಿದ್ದು ಗೊತ್ತಾಗಿದೆ’ ಎಂದೂ ಮೂಲಗಳು ತಿಳಿಸಿವೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

EDUCATIONAL

Admission

DIRECT FINAL B.Tech/ M.Tech/Diploma/MBA/MCA/ M.Sc/BBA/BCA/B.Sc/B.Com/ B.Ed.Recog by UGC/Govt. Asha Institute. Bangalore-560085. 9448460103/ 7093438248.

JOB OPPORTUNITIES

Part-Time Jobs

JOB OPPORTUNITY: Lost job our MNC provide business opportunity work from home, earn Rs. 30-35k Call 7019215243

Engg/ Production Technical

..........WANTED ....
World Largest & Most Successful EMS-MNC Co. Whitefield Road, ...Bangalore..........
..........FRESHER'S..........
..........ITI/ Diploma..........
...........Any Trade...........
10th, PUC, Degree. Attractive-Salary, Food, Transport, Incentive, Allowance ESI,PF, Available.
9901351208, 6361193258, 9513894552,
info@shabari.co.in

DH Classifieds
BOOK YOUR AD FOR SUNDAY & GET 50% OFF ON WEEKDAYS
For Lineage & Single/ Multi Column Classifieds Display ads
For more information Contact:
9880856233
9731810277
9886213331

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

ನಿಧನ ವಾರ್ತೆ

ಅಜಿತ್ ನಾಯಕ್

ಬೆಂಗಳೂರು: ಬ್ಯಾಂಕ್ ಆಫ್ ಬರೋಡಾದ ನಿವೃತ್ತ ಹಿರಿಯ ವ್ಯವಸ್ಥಾಪಕ ಅಜಿತ್ ನಾಯಕ್ (71) ಅವರು ಶನಿವಾರ ನಿಧನ ಹೊಂದಿದರು. ಅವರಿಗೆ ಪತ್ನಿ, ಪುತ್ರ ಹಾಗೂ ಪುತ್ರಿ ಇದ್ದಾರೆ.

ಲಂಚಮುಕ್ತ ಕರ್ನಾಟಕ ನಿರ್ಮಾಣ ವೇದಿಕೆ ಕಾರ್ಯಕಾರಿ ಸಮಿತಿಯ ಆಹ್ವಾನಿತ ಸದಸ್ಯರಾಗಿಯೂ ಅವರು ಕೆಲಸ ಮಾಡಿದ್ದರು. ಬೆಂಗಳೂರು ಅಪಾರ್ಟ್‌ಮೆಂಟ್ ಒಕ್ಕೂಟದಲ್ಲೂ ಸಕ್ರಿಯರಾಗಿ ರೇರಾ ಕಾಯ್ದೆಯಡಿ ನಡೆದ ಹೋರಾಟದಲ್ಲಿ ಪಾಲ್ಗೊಂಡಿದ್ದರು.

ಕೆ. ಗುರುರಾವ್

ಬೆಂಗಳೂರು: ಸಾರ್ವಜನಿಕ ಶಿಕ್ಷಣ ಇಲಾಖೆಯ ನಿವೃತ್ತ ನಿರ್ದೇಶಕ ಕೆ. ಗುರುರಾವ್ (91) ಅವರು ಅನಾರೋಗ್ಯದಿಂದಾಗಿ ಶನಿವಾರ ನಿಧನರಾದರು.

ಅವರಿಗೆ ಪತ್ನಿ, ಇಬ್ಬರು ಪುತ್ರರು ಹಾಗೂ ಇಬ್ಬರು ಪುತ್ರಿಯರು ಇದ್ದಾರೆ. ಮಾನ್ವಿ ತಾಲ್ಲೂಕಿನ ಕುರ್ಡಿ ಗ್ರಾಮದ ಗುರುರಾವ್, ಸಾರ್ವಜನಿಕ ಶಿಕ್ಷಣ ಇಲಾಖೆಯ ಬೆಂಗಳೂರು, ಮಂಡ್ಯ, ಕಲಬುರ್ಗಿ, ಬಳ್ಳಾರಿ ಹಾಗೂ ರಾಯಚೂರಿನಲ್ಲಿ ಕೆಲಸ ಮಾಡಿ ನಿವೃತ್ತರಾಗಿದ್ದರು.

ನಟ ಕೆ.ಡಿ. ಚಂದ್ರನ್

ಮುಂಬೈ (ಪಿಟಿಐ): ಖ್ಯಾತ ನಟ ಕೆ.ಡಿ. ಚಂದ್ರನ್ (84) ಅವರು ಭಾನುವಾರ ಹೃದಯಾಘಾತದಿಂದ ನಿಧನರಾದರು.

‘ಹಮ್ ಹೈ ರಹಿ ಪ್ಯಾರ್ ಕೆ’, ‘ಚೀನಾ ಗೇಟ್’, ‘ತೆರೆ ಮೇರೆ ಸಪ್ನೆ’ ಮುಂತಾದ ಜನಪ್ರಿಯ ಚಲನಚಿತ್ರಗಳಲ್ಲಿ ಅವರು ನಟಿಸಿದ್ದರು. ಹಲವು ಟಿ.ವಿ. ಕಾರ್ಯಕ್ರಮಗಳಲ್ಲಿಯೂ ನಟಿಸಿದ್ದರು.

ಮೇ 12ರಂದು ಚಂದ್ರನ್ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ, ಚಿಕಿತ್ಸೆಗೆ ಸ್ಪಂದಿಸದೆ ಭಾನುವಾರ ಬೆಳಿಗ್ಗೆ ನಿಧನರಾದರು ಎಂದು ಚಂದ್ರನ್ ಅವರ ಪುತ್ರಿ ಖ್ಯಾತ ನಟಿ ಮತ್ತು ನೃತ್ಯಗಾರ್ತಿ ಸುಧಾ ಚಂದ್ರನ್ ತಿಳಿಸಿದ್ದಾರೆ.

ಒಂದೇ ಮುಹೂರ್ತದಲ್ಲಿ ಅಕ್ಕ–ತಂಗಿ ವರಿಸಿದ್ದ ಭೂಪ

ಬಾಲ್ಯವಿವಾಹ: ಪ್ರಕರಣ ದಾಖಲು

ಪ್ರಜಾವಾಣಿ ವಾರ್ತೆ

ಕೋಲಾರ: ಜಿಲ್ಲೆಯ ಮುಳಬಾಗಿಲು ತಾಲ್ಲೂಕಿನ ವೇಗಮಡುಗು ಗ್ರಾಮದಲ್ಲಿ ಒಂದೇ ಮುಹೂರ್ತದಲ್ಲಿ ಅಕ್ಕ–ತಂಗಿಯನ್ನು ಮದುವೆಯಾಗಿದ್ದ ಉಮಾಪತಿ ಅವರ ವಿರುದ್ಧ ಬಾಲ್ಯವಿವಾಹ ನಿಷೇಧ ಕಾಯ್ದೆಯಡಿ ನಂಗಲಿ ಠಾಣೆಯಲ್ಲಿ ಭಾನುವಾರ ಪ್ರಕರಣ ದಾಖಲಾಗಿದೆ.

ಮುಳಬಾಗಿಲು ತಾಲ್ಲೂಕು ಚಿನ್ನಬಾಲೇಪಲ್ಲಿ ಗ್ರಾಮದ ಉಮಾಪತಿ ಅವರು ವೇಗಮಡುಗು ಗ್ರಾಮದ ಇಬ್ಬರು ಸಹೋದರಿಯರನ್ನು ಮೇ 7ರಂದು ಮದುವೆಯಾಗಿದ್ದರು. ಈ ಕುರಿತು ಪತ್ರಿಕೆಗಳಲ್ಲಿ ಪ್ರಕಟವಾದ ಸುದ್ದಿ ಆಧರಿಸಿ ಮುಳಬಾಗಿಲು ತಾಲ್ಲೂಕಿನ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಎಂ.ರಮೇಶ್ ಅವರು ಪರಿಶೀಲಿಸಿದಾಗ ತಂಗಿಯ ವಯಸ್ಸು 16 ಎಂಬ ಸಂಗತಿ ಗೊತ್ತಾಗಿದೆ. ಹೀಗಾಗಿ ರಮೇಶ್ ಅವರು ಬಾಲ್ಯವಿವಾಹ ಆರೋಪದಡಿ ಉಮಾಪತಿ ಸೇರಿದಂತೆ 7 ಮಂದಿ ವಿರುದ್ಧ ನಂಗಲಿ ಠಾಣೆಗೆ ದೂರು ಕೊಟ್ಟಿದ್ದರು.

ಉಮಾಪತಿ, ಅವರ ತಂದೆ ಚಿಕ್ಕಚನ್ನ ರಾಯಪ್ಪ ಮತ್ತು ತಾಯಿ ದೊಡ್ಡ ಲಕ್ಷ್ಮಮ್ಮ, ಬಾಲಕಿಯ ತಂದೆ ಮತ್ತು ತಾಯಿ, ವಿವಾಹದ ಆಮಂತ್ರಣ ಪತ್ರಿಕೆ ಮುದ್ರಿಸಿದ್ದ ಮುಳಬಾಗಿಲಿನ ಗಾಯತ್ರಿ ಆಫ್‌ಸೆಟ್ ಪ್ರಿಂಟರ್ಸ್ ಮಾಲೀಕರು, ಮದುವೆ ನಡೆದ ಚನ್ನರಾಯಸ್ವಾಮಿ ದೇವಾಲಯದ ಅರ್ಚಕರ ವಿರುದ್ಧ ಬಾಲ್ಯವಿವಾಹ ನಿಷೇಧ ಕಾಯ್ದೆ ಹಾಗೂ ಮಕ್ಕಳ ವಿರುದ್ಧದ ಲೈಂಗಿಕ ದೌರ್ಜನ್ಯ ತಡೆ ಕಾಯ್ದೆಯಡಿ ಪ್ರಕರಣ ದಾಖಲಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಪ್ರಕರಣ ದಾಖಲಾದ ನಂತರ ಆರೋಪಿಗಳು ತಲೆಮರೆಸಿಕೊಂಡಿದ್ದಾರೆ.

ಸುಲಿಗೆ; ಗೂಗಲ್ ಪೇ ಮೂಲಕ ಹಣ ವರ್ಗ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಳ್ಳಂದೂರು ಠಾಣೆ ವ್ಯಾಪ್ತಿಯಲ್ಲಿ ಕೇಬಲ್ ದುರಸ್ತಿ ಮಾಡುತ್ತಿದ್ದ ವೇಳೆ ಟೆಕ್ನಿಷಿಯನ್ ಹಾಗೂ ಅವರ ಜೊತೆಗಿದ್ದ ಚಾಲಕನನ್ನು ಸುಲಿಗೆ ಮಾಡಲಾಗಿದೆ.

‘ಮೇ 12ರಂದು ರಾತ್ರಿ ನಡೆದಿರುವ ಘಟನೆ ಸಂಬಂಧ ಚಾಲಕ ಸಿದ್ದರಾಮಗೌಡ ಪಾಟೀಲ ದೂರು ನೀಡಿದ್ದಾರೆ. ಅಪರಿಚಿತರ ವಿರುದ್ಧ ಪ್ರಕರಣ ದಾಖಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಸಿದ್ದರಾಮ ಅವರು ಟೆಕ್ನಿಷಿಯನ್ ಶರತ್ ಜೊತೆ ಕಾರಿನಲ್ಲಿ ಸ್ಥಳಕ್ಕೆ ಹೋಗಿದ್ದರು. ಶರತ್ ದುರಸ್ತಿ ಕೆಲಸದಲ್ಲಿ ನಿರತರಾಗಿದ್ದರು. ಅವರ ಬಳಿ ಬಂದಿದ್ದ ಆರೋಪಿಗಳು, ಚಾಕು ತೋರಿಸಿ ಹಣ ನೀಡುವಂತೆ ಬೆದರಿಸಿದ್ದರು. ಹಣವಿಲ್ಲವೆಂದು ಹೇಳಿದಾಗ, ಇಬ್ಬರ ಮೊಬೈಲ್ ಕಿತ್ತುಕೊಂಡು ಗೂಗಲ್ ಪೇ ಮೂಲಕ ಹಲವರ ಖಾತೆಗಳಿಗೆ ಹಣ ವರ್ಗಾಯಿಸಿಕೊಂಡು ಆರೋಪಿಗಳು ಹೊರಟು ಹೋಗಿದ್ದಾರೆ’ ಎಂದೂ ಮೂಲಗಳು ತಿಳಿಸಿವೆ.

‘ಮನೋಬಲ ಕಾಪಾಡಿಕೊಂಡರೆ ಗೆದ್ದು ಬಂದಂತೆ’

ಪ್ರಜಾವಾಣಿ ವಾರ್ತೆ

ಕೋವಿಡ್ ಗೆದ್ದವರ ಕಥೆ

ಬೆಂಗಳೂರು: ‘ಕೋವಿಡ್ ದೇಹವನ್ನು ಕಾಡುವುದರ ಜತೆಯಲ್ಲೇ ತೀವ್ರವಾದ ಮಾನಸಿಕ ತಳಮಳ ಸೃಷ್ಟಿಸುತ್ತದೆ. ಕೋವಿಡ್‌ನ ಪರಿಣಾಮಗಳನ್ನು ತಗ್ಗಿಸುವ ಚಿಕಿತ್ಸೆಯ ಭಾಗವಾಗಿ ಮನೋಸ್ಥೈರ್ಯ ಹೆಚ್ಚಿಸುವ ಕಡೆಗೂ ಗಮನ ನೀಡಿದರೆ ಆಮ್ಲಜನಕದ ಪ್ರಮಾಣದಲ್ಲಿ ಕುಸಿತ ಆಗದಂತೆ ತಡೆಯಲು ಸಾಧ್ಯ’

‘ಕಾರ್ಯನಿಮಿತ್ತ ಹೊರಗೆ ಓಡಾಡುತ್ತಿದ್ದೆ. ಏಪ್ರಿಲ್ ಮೂರನೇ ವಾರದಲ್ಲಿ ಒಂದು ದಿನ ಮೈ ಕೈ ನೋವು ಕಾಣಿಸಿಕೊಂಡಿತು. ತಕ್ಷಣವೇ ಮನೆಯಲ್ಲೇ ಪ್ರತ್ಯೇಕವಾಸ ಆರಂಭಿಸಿದೆ. ಅದೇ ದಿನ ಸಂಜೆ ಕೋವಿಡ್ ಪರೀಕ್ಷೆಗಾಗಿ ಗಂಟಲು ಮತ್ತು ಮೂಗಿನ ದ್ರವದ ಮಾದರಿ ನೀಡಿ ಬಂದಿದ್ದೆ. ಒಂದು ದಿನದ ಬಳಿಕ ವರದಿ ಬಂದಾಗ ಸೋಂಕು ದೃಢಪಟ್ಟಿತ್ತು. ಅಷ್ಟರಲ್ಲಾಗಲೇ ಅತಿಯಾದ ಜ್ವರ ಆವರಿಸಿಕೊಂಡಿತ್ತು’

‘ಕೋವಿಡ್ ಖಚಿತವಾಗುತ್ತಿದ್ದಂತೆಯೇ ಖಾಸಗಿ ಆಸ್ಪತ್ರೆಯೊಂದರ ‘ಹೋಂ ಐಸೋಲೇಷನ್ ಪ್ಯಾಕೇಜ್’ ತೆಗೆದುಕೊಂಡೆ. ಮಾತ್ರೆ, ಪಲ್ಸ್ ಆಕ್ಸಿಮೀಟರ್, ಉಷ್ಣಮಾಪಕ ಎಲ್ಲವನ್ನೂ ಮನೆಗೆ ತಲುಪಿಸಿದರು. ನಿಯಮಿತವಾಗಿ ನರ್ಸ್‌ಗಳು ಕರೆಮಾಡಿ ಮಾಹಿತಿ ಪಡೆಯುತ್ತಿದ್ದರು. ವೈದ್ಯರು ನಿತ್ಯವೂ ವಿಡಿಯೊ ಕಾಲ್ ಮೂಲಕ ನನ್ನನ್ನು ನೋಡಿ, ಮಾತನಾಡುತ್ತಿದ್ದರು. ಮೂರನೇ ದಿನದ ವೇಳೆಗೆ ಎಲ್ಲವೂ ಗುಣವಾದಂತೆ ಭಾಸವಾಯಿತು. ಐದನೇ ದಿನಕ್ಕೆ ಮತ್ತೆ ಜೋರು ಜ್ವರ, ಕೆಮ್ಮು, ಕಫ ಎಲ್ಲವೂ ಹೆಚ್ಚಾಯಿತು’

‘ಎಂಟರಿಂದ ಹತ್ತನೇ ದಿನ ಸೋಂಕು ಗರಿಷ್ಠ ಪ್ರಮಾಣಕ್ಕೆ ತಲುಪಬಹುದು ಎಂಬ ಮಾಹಿತಿ ಮೊದಲೇ ಇತ್ತು. ಪ್ರತಿ ಗಂಟೆಗೊಮ್ಮೆ ಆಮ್ಲಜನಕದ ಪ್ರಮಾಣ ಪರೀಕ್ಷಿಸಿಕೊಂಡು ಬರೆದಿಡುತ್ತಿದೆ. ವೈದ್ಯರು ಉಸಿರಾಟದ ಒಂದಷ್ಟು ವ್ಯಾಯಾಮಗಳನ್ನು ಹೇಳಿದ್ದರು. ಅದನ್ನು ಪಾಲಿಸುತ್ತಿದ್ದೆ. ಮಧ್ಯದಲ್ಲೇ ಎರಡು ಬಾರಿ ಮನೋರೋಗ ತಜ್ಞರು ಆಪ್ತ ಸಮಾಲೋಚನೆ ನಡೆಸಿದರು. ರಾತ್ರಿ ನಿದ್ದೆ ಮಾಡುವಾಗ ನಿರ್ದಿಷ್ಟ ಸಂಗೀತವೊಂದನ್ನು ಕೇಳುವಂತೆ ಸೂಚಿಸಿದರು. ಮನೋವೈದ್ಯರ ಆಪ್ತ ಸಮಾಲೋಚನೆ ನನಗೆ ಹೆಚ್ಚು ನೆರವಿಗೆ ಬಂತು’

‘ಪ್ರಾಥಮಿಕ ಹಂತದ ರೋಗ ಲಕ್ಷಣಗಳು ಕಾಣಿಸುತ್ತಿದ್ದಂತೆ ಪ್ರತ್ಯೇಕ ವಾಸಕ್ಕೆ ತೆರಳಿದರೆ ಮನೆಯಲ್ಲಿರುವ ಬೇರೆಯವರಿಗೂ ಸೋಂಕು ಹರಡದಂತೆ ತಡೆಯಬಹುದು. ನಮ್ಮ ಮನೆಯಲ್ಲಿ ನನ್ನ ಹೊರತಾಗಿ ಯಾರಿಗೂ ಸೋಂಕು ತಗುಲಿಲ್ಲ. ಮನೆಯಲ್ಲೇ ಪ್ರತ್ಯೇಕ ವಾಸದಲ್ಲಿ ಇರುವವರು ವೈದ್ಯರ ಸಲಹೆ ಆಧರಿಸಿ ನಿಯಮಿತವಾಗಿ ರಕ್ತ ತಪಾಸಣೆ ಮಾಡಿಸಿಕೊಳ್ಳುತ್ತಾ ಇರಬೇಕು. ರಕ್ತದಲ್ಲಿನ ಸಕ್ಕರೆಯ ಪ್ರಮಾಣದಲ್ಲಿ ಹೆಚ್ಚಳ ಆಗಿ ಸೋಂಕಿನಿಂದ ಗುಣಮುವಾಗುವುದು ವಿಳಂಬವಾಗುವುದನ್ನು ತಡೆಯಲು ಇದು ಅನುಕೂಲಕ್ಕೆ ಬರುತ್ತದೆ’

‘ಎದೆಗುಂದಬಾರದು. ಆಹಾರ ಪಡೆಯುವಾಗ, ಬಳಸಿದ ತಟ್ಟೆ ಮತ್ತು ಲೋಟಗಳನ್ನು ತೊಳೆದು ಇಡುವಾಗ ಎಚ್ಚರಿಕೆ ವಹಿಸಿದರೆ ಕುಟುಂಬವನ್ನೂ ಸೋಂಕಿನಿಂದ ರಕ್ಷಿಸಬಹುದು’

ಸುರೇಶ್ ರಾಥೋಡ್
ಆಮ್ ಆದ್ಮಿ ಪಕ್ಷದ ಬೆಂಗಳೂರು ನಗರ ಘಟಕದ ಉಪಾಧ್ಯಕ್ಷ

ಎಸ್‌ಯುಸಿಐನಿಂದ ಆನ್‌ಲೈನ್ ಪ್ರತಿಭಟನೆ

ಬೆಂಗಳೂರು: ಕೋವಿಡ್ ನಿರ್ವಹಣೆಯಲ್ಲಿ ಸರ್ಕಾರದ ನಿರ್ಲಕ್ಷ್ಯ ಖಂಡಿಸಿ ಸೋಷಿಯಲಿಸ್ಟ್ ಯೂನಿಟಿ ಸೆಂಟರ್ ಆಫ್ ಇಂಡಿಯಾ (ಕಮ್ಯುನಿಸ್ಟ್) ಸಂಘಟನೆಯ ಬೆಂಗಳೂರು ಜಿಲ್ಲಾ ಸಮಿತಿಯು ಭಾನುವಾರ ಆನ್‌ಲೈನ್ ಪ್ರತಿಭಟನೆ ನಡೆಸಿತು.

ಕೋವಿಡ್‌ನಿಂದ ಮೃತಪಟ್ಟವರ ಕುಟುಂಬಗಳಿಗೆ ಪರಿಹಾರ ನೀಡಬೇಕು, ಆಮ್ಲಜನಕ ವ್ಯವಸ್ಥೆ ಹಾಗೂ ಆಸ್ಪತ್ರೆಗಳಲ್ಲಿ ಹಾಸಿಗೆಗಳ ಸಮರ್ಪಕ ಹಂಚಿಕೆ ನಡೆಯಬೇಕು ಎಂಬ ಬೇಡಿಕೆಗಳನ್ನು ಸರ್ಕಾರ ಮುಂದಿಟ್ಟರು.

ಮನೆಗಳಿಂದಲೇ ಪ್ರತಿಭಟನೆಯಲ್ಲಿ ಭಾಗವಹಿಸಿದ್ದ ಮಹಿಳೆಯರು, ಕಾರ್ಮಿಕರು ಹಾಗೂ ಯುವಕರು ಫಲಕ ಪ್ರದರ್ಶಿಸಿ, ಸರ್ಕಾರದ ನಡೆ ಖಂಡಿಸಿದರು.

ಲಾಕ್‌ಡೌನ್ ಇರುವ ಕಾರಣ ಖಫನ್ ಸಿಗುತ್ತಿಲ್ಲ – ಪಿಪಿಇ ಕಿಟ್‌ಗಳ ಬೆಲೆ ಭರಿಸಲಾಗಲ್ಲ!

ಶವದ ಬಟ್ಟೆ ಸಿಗದೆ ಪರದಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಕೋವಿಡ್‌ನಿಂದ ಸಾವಿಗೀಡಾಗುವವರ ಸಂಖ್ಯೆ ಹೆಚ್ಚಾಗುತ್ತಿದ್ದಂತೆ, ಶವಸಂಸ್ಕಾರಕ್ಕೆ ಬೇಕಾದ ಅಗತ್ಯ ವಸ್ತುಗಳು ಸಿಗದೆ ಮೃತರ ಸಂಬಂಧಿಕರು ಪರದಾಡುತ್ತಿದ್ದಾರೆ.

‘ಖಫನ್ (ಬಿಳಿಯ ಬಟ್ಟೆ) ಹಾಕದೆ ದಫನ್ (ಅಂತ್ಯಕ್ರಿಯೆ) ಮಾಡಲಾಗುವುದೇ ಇಲ್ಲ. ಆದರೆ, ಇದಕ್ಕೆ ಬೇಕಾದ ಬಟ್ಟೆ ಸಿಗುತ್ತಿಲ್ಲ. ಈ ಬಟ್ಟೆಗಾಗಿಯೇ ದಿನಗಟ್ಟಲೇ ಕಾಯಬೇಕಾಗಿದೆ. ಲಾಕ್‌ಡೌನ್ ಇರುವುದರಿಂದ ಬಟ್ಟೆ ಅಂಗಡಿಗಳು ತೆರೆಯುತ್ತಿಲ್ಲ’ ಎಂದು ಮುಸ್ಲಿಂ ಮುಖಂಡರೊಬ್ಬರು ಹೇಳಿದರು.

‘ಮೊದಲು ಮಸೀದಿಯಲ್ಲಿಯೇ ಈ ಬಟ್ಟೆಗಳು ಸಿಗುತ್ತಿದ್ದವು. ಈಗ ಅಲ್ಲಿಯೂ ಖಾಲಿ ಆಗಿದೆ. ಹುಬ್ಬಳ್ಳಿ, ವಿಜಯಪುರದಂತಹ ಪ್ರದೇಶಗಳಲ್ಲಿಯೂ ಈ ಬಟ್ಟೆಗಳು ಸಿಗುತ್ತಿಲ್ಲ’ ಎಂದು ಅಂಜುಮನ್ ಸಂಸ್ಥೆಯ ಶಿರಾಜ್ ಅಹ್ಮದ್ ಕುಡಚಿವಾಲೆ ಹೇಳಿದರು.

‘ರಾಜಧಾನಿ ಮಾತ್ರವಲ್ಲದೆ, ರಾಜ್ಯದ ಬಹುತೇಕ ನಗರಗಳಲ್ಲಿ ಈ ಸಮಸ್ಯೆ ಉಂಟಾಗಿದೆ. ಶವಸಂಸ್ಕಾರಕ್ಕೆ ಬೇಕಾದ ಎಲ್ಲ ಸಾಮಗ್ರಿ ಒಂದು ಕಡೆ ಸಿಗುವಂತೆ ವ್ಯವಸ್ಥೆ ಮಾಡಬೇಕು. ಮುಖ್ಯಮಂತ್ರಿಗಳು ಎಲ್ಲ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ ಈ ಕುರಿತು ಸೂಚನೆ ನೀಡಬೇಕು’ ಎಂದು ಅವರು ಮನವಿ ಮಾಡಿದರು.

‘ಟ್ಯಾನರಿ ರಸ್ತೆಯಲ್ಲಿ ಶನಿವಾರ 56 ಶವಗಳಿಗೆ ಬಟ್ಟೆ ತೆಗೆದುಕೊಂಡು ಹೋಗಿದ್ದರೆ, ಮೈಸೂರು ರಸ್ತೆ ರಸ್ತೆಯಲ್ಲಿ 34 ಶವಗಳಿಗೆ ಒಯ್ದಿದ್ದಾರೆ. ಶವದ ಬಟ್ಟೆಗಳಿಗೆ ಕೊರತೆ ಇಲ್ಲ. ಆದರೆ, ಕೆಲವರು ಹೆಚ್ಚಿನ ಬೆಲೆಗೆ ಮಾರಾಟ ಮಾಡುತ್ತಿರುವುದರಿಂದ ತೊಂದರೆಯಾಗಿದೆ’ ಎಂದು ವರ್ತಕರೊಬ್ಬರು ಹೇಳಿದರು.

ಒಂದು ಶವಕ್ಕೆ 5 ಮೀಟರ್ ಬಟ್ಟೆ ಬೇಕಾಗುತ್ತದೆ. ಒಂದು ಮೀಟರ್‌ಗೆ ₹100ರಂತೆ ಮಾರಾಟ ಮಾಡುತ್ತಿದ್ದಾರೆ. ಕೆಲವರು ₹200 ದರವನ್ನೂ ಇಟ್ಟಿದ್ದಾರೆ.

ಕೋವಿಡ್‌ನಿಂದ ಮೃತಪಟ್ಟ ವ್ಯಕ್ತಿಯೊಬ್ಬರ ಸಂಬಂಧಿಕರು ಪಿಪಿಇ ಕಿಟ್ ಹಾಕಿಕೊಂಡು ಶವಸಂಸ್ಕಾರಕ್ಕೆ ನಿಂತಿದ್ದ ದೃಶ್ಯ – ಸಂಗ್ರಹ ಚಿತ್ರ

ಪಿಪಿಇ ಕಿಟ್ ದುಬಾರಿ

‘ಕೋವಿಡ್‌ನಿಂದ ಮೃತಪಟ್ಟವರ ಶವಸಂಸ್ಕಾರದಲ್ಲಿ ಪಾಲ್ಗೊಳ್ಳಬೇಕು ಎಂದರೆ ಪಿಪಿಇ ಕಿಟ್ ಧರಿಸಲೇಬೇಕು. ಆದರೆ, ಖಾಸಗಿ ಆಸ್ಪತ್ರೆ ಮತ್ತು ಅಂಗಡಿಗಳಲ್ಲಿ ₹2000 ಹೇಳುತ್ತಾರೆ. ನಾಲ್ಕೇ ಜನ ಸಂಸ್ಕಾರದಲ್ಲಿ ಪಾಲ್ಗೊಳ್ಳಬೇಕೆಂದರೂ ₹8000 ಖರ್ಚು ಮಾಡಬೇಕು. ಈ ಸಂಕಷ್ಟದ ಸಮಯದಲ್ಲಿ ಇಷ್ಟು ದುಡ್ಡು ವ್ಯಯಿಸುವುದು ಕಷ್ಟವಾಗುತ್ತದೆ. ಶವಸಂಸ್ಕಾರದಲ್ಲಿ ಪಾಲ್ಗೊಳ್ಳದೇ ಇರುವುದಕ್ಕೂ ಆಗುತ್ತಿಲ್ಲ’ ಎಂದು ಮೃತರ ಸಂಬಂಧಿಕರೊಬ್ಬರು ಅಳಲು ತೋಡಿಕೊಂಡರು.

‘ಪಿಪಿಇ ಕಿಟ್ ಒಂದರ ಮೂಲಬೆಲೆ ₹300. ಅಂಗಡಿಗಳಲ್ಲಿ ನಮ್ಮ ಲಾಭದ ಪ್ರಮಾಣ ಸೇರಿಸಿ ₹400ರಂತೆ ಮಾರಾಟ ಮಾಡುತ್ತೇವೆ. ಆದರೆ, ಶೇ 12ರಷ್ಟು ಜಿಎಸ್‌ಟಿ ಸೇರಿಸಿ ಗರಿಷ್ಠ ₹1000ಗೆ ಮಾರಾಟ ಮಾಡುತ್ತಾರೆ. ಅದರಲ್ಲಿಯೂ ಕೆಲವರು ₹2000ವರೆಗೆ ಕೊಡುತ್ತಿರುವುದರಿಂದ ಸಾರ್ವಜನಿಕರಿಗೆ ಕಷ್ಟವಾಗುತ್ತಿದೆ’ ಎಂದು ಮಾಸ್ಕ್ ಮತ್ತು ಪಿಪಿಇ ಕಿಟ್ ತಯಾರಕರಾದ ಫವಾಜ್ ಯು.ಟಿ ಹೇಳಿದರು.

‘ಮಾಸ್ಕ್‌ನ ಮೂಲಬೆಲೆ ಕೂಡ ₹4. ಆದರೆ, ಶೇ 150ರಂತೆ ಹೆಚ್ಚಿನ ಬೆಲೆಗೆ ಅಂದರೆ ಸಗಟು ವರ್ತಕರಿಗೆ ₹10 ಆಗುತ್ತಿದೆ. ಬೇಡಿಕೆ ಹೆಚ್ಚುತ್ತಿರುವುದರಿಂದ ಬೆಲೆಯೂ ಹೆಚ್ಚಾಗುತ್ತಿದೆ’ ಎಂದು ಅವರು ಹೇಳಿದರು.

ರಾಜ್ಯದಲ್ಲಿ ಡೆಂಗಿ ಜ್ವರ ನಿಯಂತ್ರಣದಲ್ಲಿ

ಬೆಂಗಳೂರು: ರಾಜ್ಯದಲ್ಲಿ ಡೆಂಗಿ ಜ್ವರವು ನಿಯಂತ್ರಣಕ್ಕೆ ಬಂದಿದ್ದು, ಈ ವರ್ಷ ನಾಲ್ಕೂವರೆ ತಿಂಗಳಲ್ಲಿ ಕೇವಲ 813 ಪ್ರಕರಣಗಳು ವರದಿಯಾಗಿವೆ.

ಈ ಜ್ವರಕ್ಕೆ 2019ರಲ್ಲಿ 18 ಸಾವಿರಕ್ಕೂ ಅಧಿಕ ಮಂದಿ ಬಳಲಿದ್ದರು. ಅವರಲ್ಲಿ 17 ಮಂದಿ ಮೃತಪಟ್ಟಿದ್ದರು. 10 ಸಾವಿರಕ್ಕೂ ಅಧಿಕ ಪ್ರಕರಣಗಳು ರಾಜಧಾನಿ ಬೆಂಗಳೂರಿನಲ್ಲೇ ವರದಿಯಾಗಿದ್ದವು. ಕೋವಿಡ್ ಕಾಣಿಸಿಕೊಂಡ ಬಳಿಕ ಕೈಗೊಂಡ ಮುನ್ನೆಚ್ಚರಿಕೆ ಕ್ರಮಗಳ ಪರಿಣಾಮ ಈ ಜ್ವರಕ್ಕೆ ಒಳಪಡುವವರ ಸಂಖ್ಯೆ ಇಳಿಕೆ ಕಂಡಿದೆ. ಕಳೆದ ವರ್ಷ 3,823 ಮಂದಿಯಲ್ಲಿ ಡೆಂಗಿ ಜ್ವರ ಕಾಣಿಸಿಕೊಂಡಿತ್ತು. ಅವರಲ್ಲಿ 5 ಮಂದಿ ಮೃತಪಟ್ಟಿದ್ದರು. ಈ ವರ್ಷ ಯಾವುದೇ ಸಾವು ಈವರೆಗೆ ವರದಿಯಾಗಿಲ್ಲ.





ಚಿಕಿತ್ಸಾ ಕೇಂದ್ರ: 32ಕ್ಕೆ ಏರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ರೋಗಿಗಳು ಪ್ರಾಥಮಿಕ ಹಂತದಲ್ಲಿಯೇ ನೇರವಾಗಿ ಬಂದು ಚಿಕಿತ್ಸೆ ಪಡೆಯಲು ಅನುಕೂಲವಾಗುವಂತೆ ಬಿಬಿಎಂಪಿಯು ನಗರದಲ್ಲಿ ಸ್ಥಾಪಿಸಿರುವ ನೇರ ಚಿಕಿತ್ಸಾ ಕೇಂದ್ರಗಳ (ಟ್ರಯಾಜ್ ಸೆಂಟರ್) ಸಂಖ್ಯೆ 32ಕ್ಕೆ ಏರಿದೆ.

ಬಿಬಿಎಂಪಿ ವ್ಯಾಪ್ತಿಯ 8 ವಲಯಗಳಲ್ಲಿ 26 ಕೇಂದ್ರಗಳನ್ನು ಈಗಾಗಲೇ ಸ್ಥಾಪಿಸಲಾಗಿತ್ತು. ಇದರ ಜೊತೆಗೆ ಹೆಚ್ಚುವರಿಯಾಗಿ 6 ಟ್ರಯಾಜ್ ಸೆಂಟರ್‌ಗಳನ್ನು ಸ್ಥಾಪಿಸಲಾಗಿದೆ.

ಈ ಕೇಂದ್ರಗಳಲ್ಲಿ ವೈದ್ಯರ ತಂಡವು ದಿನದ 24 ಗಂಟೆಯೂ ಕಾರ್ಯನಿರ್ವಹಿಸಲಿದೆ. ಕೋವಿಡ್ ಸೋಂಕಿತರ ವೈದ್ಯಕೀಯ ಸ್ಥಿತಿಯನ್ನು ನೇರವಾಗಿ ತಿಳಿದು ಔಷಧೋಪಚಾರ ವ್ಯವಸ್ಥೆಯನ್ನು ತಕ್ಷಣ ಒದಗಿಸಲಾಗುತ್ತದೆ.

ಇಲ್ಲಿ ಆಮ್ಲಜನಕ ಸೌಲಭ್ಯದ ಹಾಸಿಗೆಗಳಿದ್ದು, ಎಲ್ಲ ಪ್ರಾಥಮಿಕ ಆರೋಗ್ಯ ಸೌಲಭ್ಯಗಳ ವ್ಯವಸ್ಥೆ ಮಾಡಲಾಗಿದೆ. ಸೋಂಕಿನ ಸೌಮ್ಯ ಲಕ್ಷಣದ ರೋಗಿಗಳಿಗೆ ಚಿಕಿತ್ಸೆ ಆರೈಕೆ ನೀಡುವ ವ್ಯವಸ್ಥೆಯಿದೆ.

ನಗರದ ಕೋವಿಡ್ ಆರೈಕೆ ಕೇಂದ್ರ ಹಾಗೂ ಹೆರಿಗೆ ಆಸ್ಪತ್ರೆಗಳಲ್ಲಿ ಈ ಕೇಂದ್ರಗಳನ್ನು ತೆರೆಯಲಾಗಿದ್ದು, ಒಟ್ಟು 2,486 ಹಾಸಿಗೆಗಳಿವೆ. 1,995 ಸಾಮಾನ್ಯ ಹಾಗೂ 491 ಆಮ್ಲಜನಕ ವ್ಯವಸ್ಥೆಯ ಹಾಸಿಗೆಗಳಿವೆ.

ಹೆಚ್ಚುವರಿ 6 ಕೇಂದ್ರಗಳ ವಿವರ

ಕೇಂದ್ರದ ಹೆಸರು	ಹಾಸಿಗೆ ಸಾಮರ್ಥ್ಯ	ಸಹಾಯವಾಣಿ
ಬೈರಸಂದ್ರ ಯೋಗ ಕೇಂದ್ರ, ಜಯನಗರ	10	9480683463
ಸಾಗರ್ ಆಸ್ಪತ್ರೆ, ಕುಮಾರಸ್ವಾಮಿ ಬಡಾವಣೆ	51	9480683465
ಆಕ್ವಾವಿಲ್ಲಾ ಹೋಟೆಲ್, ಕೈಕೊಂಡ್ರಹಳ್ಳಿ	39	9480683466
ಕೀ ಹೌಸ್ ಹೋಟೆಲ್, ಕೆ.ಜೆ ಹಳ್ಳಿ	50	9480683471
ಜಿಂಕ್ ಹೋಟೆಲ್, ವೈಟ್ ಫೀಲ್ಡ್	50	9480683472
ಓಯೋ ಟೌನ್ ಹೌಸ್, ಮಹದೇವಪುರ	50	9480683474



ಮಾಸ್ಕ್ ಹಾಕದೆ ರೋಗಿಗಳಿಗೆ ಚಿಕಿತ್ಸೆ!

ಸಾರ್ವಜನಿಕರ ಆರೋಗ್ಯದ ಮೇಲೆ ದುಷ್ಪರಿಣಾಮ ಆರೋಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಮೂಡಲಪಾಳ್ಯ ವೃತ್ತದಲ್ಲಿರುವ ಸಾಗರ್ ಕ್ಲಿನಿಕ್‌ನಲ್ಲಿ ವೈದ್ಯರು, ಶುಶ್ರೂಷಕರು ಸೇರಿದಂತೆ ಯಾವುದೇ ವೈದ್ಯಕೀಯ ಸಿಬ್ಬಂದಿ ಮಾಸ್ಕ್ ಹಾಕದೆ, ಸ್ಯಾನಿಟೈಸರ್ ಬಳಸದೆ ರೋಗಿಗಳಿಗೆ ಚಿಕಿತ್ಸೆ ನೀಡುತ್ತಿದ್ದಾರೆ. ಇದರಿಂದ ಸಾರ್ವಜನಿಕರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರಲಿದೆ ಎಂದು ನಾಗರಿಕರು, ತಜ್ಞರು ಆತಂಕ ವ್ಯಕ್ತಪಡಿಸಿದ್ದಾರೆ.

‘ರೋಗಿಗಳಿಗೆ ಧೈರ್ಯ ತುಂಬಬೇಕು ಎಂದು ಸಾಗರ್ ಕ್ಲಿನಿಕ್‌ನ ಡಾ. ರಾಜು ಕೃಷ್ಣಮೂರ್ತಿ ಮತ್ತು ಅವರ ಸಿಬ್ಬಂದಿ ಮಾಸ್ಕ್ ಹಾಕದೆ, ಪಿಪಿಇ ಕಿಟ್ ಧರಿಸದೆ ರೋಗಿಗಳಿಗೆ ಚಿಕಿತ್ಸೆ ನೀಡುತ್ತಿದ್ದಾರೆ. ಆದರೆ, ಅವರ ಇಂತಹ ಅತಿಯಾದ ವಿಶ್ವಾಸದಿಂದ ಹಲವು ಜನ ಸೋಂಕಿತರಾಗುವ ಅಪಾಯವಿದೆ’ ಎಂದು ಶ್ರುತಿ ಭಾರದ್ವಾಜ್ ಆತಂಕ ವ್ಯಕ್ತಪಡಿಸಿದರು.

‘ಇಲ್ಲಿನ ವೈದ್ಯಕೀಯ ಸಿಬ್ಬಂದಿ ದಿನಕ್ಕೆ ನೂರಾರು ರೋಗಿಗಳ ತಪಾಸಣೆ ಮಾಡುತ್ತಾರೆ. ಆಗ ಸೋಂಕು ಇರದವರಿಗೂ ಸೋಂಕು ತಗುಲಬಹುದು’ ಎಂದು ಅರುಣ್ ಹೇಳಿದರು.

‘ಮಾಸ್ಕ್ ಧರಿಸುವುದರಿಂದ ಸೋಂಕು ಹರಡುವುದನ್ನು ಆದಷ್ಟು ತಡೆಗಟ್ಟಬಹುದು ಎಂದು ವಿಶ್ವದ ಅನೇಕ ದೇಶಗಳಲ್ಲಿ ಸಾಬೀತಾಗಿದೆ. ಡಾ. ರಾಜು ಅವರು ಸಾರ್ವಜನಿಕರನ್ನು ಸಂಕಷ್ಟದಲ್ಲಿ ಇಡುವುದರ ಜೊತೆಗೆ ಅವರ ಸಿಬ್ಬಂದಿಯ ಜೀವವನ್ನೂ ಅಪಾಯಕ್ಕೆ ಸಿಲುಕಿಸುತ್ತಿದ್ದಾರೆ’ ಎಂದು ಜಯಪ್ರಕಾಶ್ ದೂರಿದರು.

‘ದಿನಕ್ಕೆ 200ಕ್ಕೂ ಹೆಚ್ಚು ರೋಗಿಗಳು ಈ ಕ್ಲಿನಿಕ್‌ಗೆ ಬರುತ್ತಾರೆ. ನಿರ್ದಿಷ್ಟ ಅಂತರವನ್ನೂ ಇಲ್ಲಿ ಕಾಯ್ದುಕೊಳ್ಳುವುದಿಲ್ಲ. ಸೋಂಕು ವ್ಯಾಪಕವಾಗಿ ಹರಡುತ್ತಿರುವ ಈ ಸಂದರ್ಭದಲ್ಲಿ ಮಾತು, ನಗುವಿನಿಂದ ರೋಗ ವಾಸಿಯಾಗುತ್ತದೆ ಎಂದು ಹೇಳುವುದು ಮೂರ್ಖತನ’ ಎಂದು ಕ್ಲಿನಿಕ್‌ಗೆ ಭೇಟಿ ನೀಡಿದ್ದ ವ್ಯಕ್ತಿಯೊಬ್ಬರು ಹೇಳಿದರು.

‘ಮಾಸ್ಕ್ ಹಾಕದಿರುವುದು ವೈಯಕ್ತಿಕ ಆಯ್ಕೆ’

ಡಾ. ರಾಜು ಕೃಷ್ಣಮೂರ್ತಿ

‘ಮಾಸ್ಕ್ ಹಾಕಿಕೊಳ್ಳದೆ, ಸ್ಯಾನಿಟೈಸರ್ ಬಳಸದೆ ರೋಗಿಗಳಿಗೆ ಚಿಕಿತ್ಸೆ ನೀಡುತ್ತಿರುವುದು ನನ್ನ ವೈಯಕ್ತಿಕ ಆಯ್ಕೆ. ಹಾಗೊಂದು ವೇಳೆ ಮಾಸ್ಕ್ ಹಾಕದೆ ಇರುವುದಕ್ಕೆ ಅಪಾಯವಾಗುವುದಿದ್ದರೆ ಅದರ ಮೊದಲ ಪರಿಣಾಮ ನನ್ನ ಮೇಲೆಯೇ ಆಗುತ್ತದೆ. ಎಲ್ಲದಕ್ಕಿಂತ ಮುಖ್ಯವಾದುದು ರೋಗಿಗಳಿಗೆ ಧೈರ್ಯ ತುಂಬುವುದು. ಆ ಕೆಲಸವನ್ನು ಮಾಡುತ್ತಿದ್ದೇನೆ’ ಎಂದು ಡಾ. ರಾಜು ಕೃಷ್ಣಮೂರ್ತಿ ‘ಪ್ರಜಾವಾಣಿ’ಗೆ ಹೇಳಿದರು.

‘ರೋಗಿಗಳು ಮನೆಯಲ್ಲಿ ಮಾಸ್ಕ್ ಹಾಕುವುದು ಬೇಡ. ಹೊರಗಡೆ ಬಂದಾಗ ಹಾಕಬೇಕು ಎಂದೇ ಹೇಳುತ್ತಿದ್ದೇನೆ. ಕ್ಲಿನಿಕ್‌ನಲ್ಲಿ ವೈದ್ಯರು ಸೇರಿದಂತೆ ಐವರು ಕೆಲಸ ಮಾಡುತ್ತಾರೆ. ಈವರೆಗೆ ಯಾರಿಗೂ ಕೋವಿಡ್ ಪರೀಕ್ಷೆ ಮಾಡಿಸಿಲ್ಲ. ಈಗಾಗಲೇ ಅವರಿಗೂ ಸೋಂಕು ತಗುಲಿ ಹೋಗಿರಬಹುದು. ಆದರೆ, ಯಾರಿಗೂ ಅನಾರೋಗ್ಯ ಉಂಟಾಗಿಲ್ಲ’ ಎಂದೂ ಹೇಳಿದರು.

ವೈದ್ಯಕೀಯ ವಲಯದಲ್ಲಿ ಆಕ್ಷೇಪ

‘ವಿಕ್ಟೋರಿಯಾ ಆಸ್ಪತ್ರೆಯಲ್ಲಿ 5 ಸಾವಿರ ವೈದ್ಯಕೀಯ ಸಿಬ್ಬಂದಿ ಕೆಲಸ ಮಾಡುತ್ತಾರೆ. ಐಸಿಯುದಲ್ಲಿರುವ ಕೋವಿಡ್ ರೋಗಿಗಳಿಗೆ ಚಿಕಿತ್ಸೆ ನೀಡುತ್ತಾರೆ. ಅವರೆಲ್ಲ ಮಾಸ್ಕ್ ಹಾಕದೇ ಓಡಾಡುವುದಿಲ್ಲ. ನಮ್ಮಿಂದ ಸಾರ್ವಜನಿಕರಿಗೆ ಅಥವಾ ಇತರೆ ರೋಗಿಗಳಿಗೆ ಸೋಂಕು ಹರಡಬಾರದು ಎಂಬ ಉದ್ದೇಶವಿಂದ ಮಾಸ್ಕ್ ಧರಿಸುತ್ತಾರೆ. ಧರಿಸಲೇಬೇಕು’ ಎಂದು ವಿಕ್ಟೋರಿಯಾ ಆಸ್ಪತ್ರೆಯ ವೈದ್ಯಾಧಿಕಾರಿ ಡಾ. ಶಿವಕುಮಾರ್ ಹೇಳಿದರು.

‘ಯಾವುದೇ ರೋಗಿಗೆ ಧೈರ್ಯ ತುಂಬುವುದು ಸ್ವಾಗತಾರ್ಹ. ಆದರೆ, ಮಾಸ್ಕ್ ತೆಗೆದು ಧೈರ್ಯ ಹೇಳಬೇಕು ಎಂಬುದೇನೂ ಇಲ್ಲ. ಮಾಸ್ಕ್ ಹಾಕಲೇಬೇಕು ಎಂಬುದು ವೈಜ್ಞಾನಿಕವಾಗಿ ಸಾಬೀತಾಗಿರುವ ಈ ಸಂದರ್ಭದಲ್ಲಿ ಮಾಸ್ಕ್ ತೆಗೆದು ಚಿಕಿತ್ಸೆ ನೀಡುತ್ತೇವೆ ಎನ್ನುವುದು ಅಪಾಯಕಾರಿ ನಡೆ’ ಎಂದು ಕೋವಿಡ್ ತಾಂತ್ರಿಕ ಸಲಹಾ ಸಮಿತಿಯ ಸದಸ್ಯ ಡಾ.ಗಿರಿಧರ್ ಬಾಬು ಅಭಿಪ್ರಾಯಪಟ್ಟರು.

ಸಂಕ್ಷಿಪ್ತ ಸುದ್ದಿ

‘ಸರ್ಕಾರದ ಆದೇಶ ಕಾನೂನು ಬಾಹಿರ’

ಬೆಂಗಳೂರು: ‘ಚಿಕ್ಕಬಳ್ಳಾಪುರದ ರೋಗಿಗಳಿಗೆ ಖಾಸಗಿ ಆಸ್ಪತ್ರೆಯನ್ನು ಮೀಸಲಿಟ್ಟು ರಾಜ್ಯ ಸರ್ಕಾರ ಹೊರಡಿಸಿರುವ ಆದೇಶ ಅಮಾನವೀಯ’ ಎಂದು ಕಾಂಗ್ರೆಸ್ ಶಾಸಕ ಕೃಷ್ಣ ಭೈರೇಗೌಡ ಅಭಿಪ್ರಾಯಪಟ್ಟಿದ್ದಾರೆ.

ಈ ಬಗ್ಗೆ ಮುಖ್ಯಮಂತ್ರಿ ಯಡಿಯೂರಪ್ಪ ಅವರಿಗೆ ಪತ್ರ ಬರೆದಿರುವ ಅವರು ‘ಇದು ಕಾನೂನುಬಾಹಿರ ಆದೇಶ. ಕೆಲವರಿಗೆ ಮಾತ್ರ ವೈದ್ಯಕೀಯ ಸೌಲಭ್ಯ ಮೀಸಲಿಡುವುದಕ್ಕೆ ಕಾನೂನಿನಲ್ಲಿ ಅವಕಾಶವಿಲ್ಲ. ಕೂಡಲೇ ವೈದ್ಯಕೀಯ ಸೌಲಭ್ಯ ಎಲ್ಲರಿಗೂ ಸಿಗುವಂತೆ ಆದೇಶ ಮಾಡಬೇಕು’ ಎಂದಿದ್ದಾರೆ.

‘ನಮ್ಮ ಕ್ಷೇತ್ರದಲ್ಲಿರುವ (ಬ್ಯಾಟರಾಯನಪುರ) ಎಸ್ಟಾರ್ ಸಿಎಂಐ ಆಸ್ಪತ್ರೆಯ ಐಸಿಯು, ಆಮ್ಲಜನಕ ಸೌಲಭ್ಯದ ಹಾಸಿಗೆಗಳನ್ನು ಚಿಕ್ಕಬಳ್ಳಾಪುರ ಜಿಲ್ಲೆಗೆ ಮಾತ್ರ ನೀಡಬೇಕೆಂದು ಸರ್ಕಾರ ಆದೇಶಿಸಿದೆ. ಇದು ಅಮಾನವೀಯ’ ಎಂದು ಪತ್ರದಲ್ಲಿ ಅವರು ಉಲ್ಲೇಖಿಸಿದ್ದಾರೆ.

ಕೋವಿಡ್ ನಿರೋಧಕ 2–ಡಿಜಿ ಔಷಧಿ ಇಂದು ಬಿಡುಗಡೆ

ನವದೆಹಲಿ (ಪಿಟಿಐ): ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಯು (ಡಿಆರ್‌ಡಿಒ) ಕೋವಿಡ್ ಸೋಂಕಿನ ವಿರುದ್ಧ ಅಭಿವೃದ್ಧಿಪಡಿಸಿರುವ 2–ಡಯಾಕ್ಸಿ–ಡಿ–ಗ್ಲೂಕೋಸ್ (2–ಡಿಜಿ) ಔಷಧದ ಮೊದಲ ಬ್ಯಾಚ್ ಅನ್ನು ಸೋಮವಾರ ಕೇಂದ್ರ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಹಾಗೂ ಆರೋಗ್ಯ ಸಚಿವ ಹರ್ಷವರ್ಧನ್ ಅವರು ಬಿಡುಗಡೆ ಮಾಡುವರು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕೊರೊನಾದಿಂದ ತೀವ್ರತರವಾಗಿ ಬಳಲುತ್ತಿರುವ ರೋಗಿಗಳಿಗೆ ಮಧ್ಯಮ ಪ್ರಮಾಣದಲ್ಲಿ ಸಹಾಯಕ ಚಿಕಿತ್ಸೆಯಾಗಿ ತುರ್ತು ಬಳಕೆಗಾಗಿ 2–ಡಿಜಿ ಔಷಧವನ್ನು ಮೌಖಿಕವಾಗಿ ಬಳಸಲು ಡ್ರಗ್ಸ್ ಕಂಟ್ರೋಲರ್ ಜನರಲ್ ಆಫ್ ಇಂಡಿಯಾ (ಡಿಜಿಸಿಐ) ಅನುಮೋದಿಸಿದೆ ಎಂದು ರಕ್ಷಣಾ ಸಚಿವಾಲಯವು ಈ ತಿಂಗಳ ಆರಂಭದಲ್ಲೇ ತಿಳಿಸಿತ್ತು.

ಕೋವಿಡ್: ಬಳ್ಳಾರಿ, ಉತ್ತರ ಕನ್ನಡದಲ್ಲಿ ಹೆಚ್ಚು

ನವದೆಹಲಿ: ಕೊರೊನಾ ಸಾಂಕ್ರಾಮಿಕ ರೋಗದ ಪಾಸಿಟಿವ್ ಪ್ರಕರಣಗಳು ಹೆಚ್ಚು ವರದಿಯಾಗುತ್ತಿರುವ ದೇಶದ ಐದು ಜಿಲ್ಲೆಗಳ ಪೈಕಿ ಕರ್ನಾಟಕದ ಬಳ್ಳಾರಿ (ಶೇ 46.9) ಹಾಗೂ ಉತ್ತರ ಕನ್ನಡ (46.4) ಇವೆ.

ಪುದುಚೇರಿಯ ಮಾಹೆ (ಶೇ 60.3) ಅತಿ ಹೆಚ್ಚು ಪಾಸಿಟಿವ್ ಪ್ರಕರಣಗಳು ವರದಿಯಾಗುತ್ತಿವೆ. ರಾಜಸ್ಥಾನದ ಭರತ್‌ಪುರ ಶೇ 52 ಮತ್ತು ರಾಜಸ್‌ಮಂಡ್‌ನಲ್ಲಿ ಶೇ 50 ರಷ್ಟು ಪ್ರಕರಣಗಳು ವರದಿ ಆಗುತ್ತಿವೆ.

‘ಬಿಜೆಪಿ ದೂಷಣೆ ಸರಿಯಲ್ಲ’

ಬೆಂಗಳೂರು: ಕೋವಿಡ್ ರೋಗಿಗಳಿಗೆ ಔಷಧಿ ಮತ್ತು ಇತರ ಸೌಲಭ್ಯಗಳ ಅಕ್ರಮ ವಿತರಣೆಯ ಆರೋಪಕ್ಕೆ ಸಂಬಂಧಿಸಿದಂತೆ ದೆಹಲಿ ಹೈಕೋರ್ಟ್ ಆದೇಶದಂತೆ ಪೊಲೀಸರು ಯುವ ಕಾಂಗ್ರೆಸ್ ಮುಖಂಡ ಬಿ.ವಿ. ಶ್ರೀನಿವಾಸ್ ಅವರ ವಿಚಾರಣೆ ನಡೆಸಿದ್ದಾರೆ. ಈ ವಿಚಾರದಲ್ಲಿ ಬಿಜೆಪಿಯನ್ನು ದೂಷಿಸುವುದು ಸರಿಯಲ್ಲ ಎಂದು ಬಿಜೆಪಿ ರಾಜ್ಯ ಘಟಕದ ವಕ್ತಾರ ಗಣೇಶ್ ಕಾರ್ಣಿಕ್ ಹೇಳಿದ್ದಾರೆ.

ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ‘ದೆಹಲಿ ಪೊಲೀಸರು ಶ್ರೀನಿವಾಸ್ ಅವರಲ್ಲದೇ ಬಿಜೆಪಿ ಸಂಸದ ಗೌತಮ್ ಗಂಭೀರ್ ಹಾಗೂ ಆಮ್ ಆದ್ಮಿ ಪಕ್ಷದ ಮುಖಂಡ ದಿಲೀಪ್ ಪಾಂಡೆ ಅವರನ್ನೂ ವಿಚಾರಣೆ ನಡೆಸಿದ್ದಾರೆ. ಆದರೆ, ಶ್ರೀನಿವಾಸ್ ವಿಚಾರಣೆಯ ವಿಷಯದಲ್ಲಿ ಬಿಜೆಪಿ ಮೇಲೆ ಗೂಬೆ ಕೂರಿಸುವ ಪ್ರಯತ್ನ ಮಾಡುತ್ತಿರುವುದು ಖಂಡನೀಯ’ ಎಂದಿದ್ದಾರೆ.

ಕುಮಟಾ, ಹೊನ್ನಾವರದಲ್ಲಿ ಪರಿಹಾರ ಕೇಂದ್ರ • ಹಲವೆಡೆ ವಿದ್ಯುತ್ ಸಂಪರ್ಕ ಕಡಿತ • ರಸ್ತೆ–ಸೇತುವೆ ಕುಸಿತ

ಭಾರಿ ಗಾಳಿ: ಕರಾವಳಿಯಲ್ಲಿ ಅಪಾರ ನಷ್ಟ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಅಬ್ಬರಿಸುತ್ತಿರುವ ‘ತೌತೆ’ ಚಂಡಮಾರುತವು ಉತ್ತರ ಕನ್ನಡ ಜಿಲ್ಲೆಯ ಕಾರವಾರ, ಹೊನ್ನಾವರ, ಅಂಕೋಲಾ, ಭಟ್ಕಳದ ಮುರ್ಡೇಶ್ವರಗಳಲ್ಲಿ ಅಪಾರ ಹಾನಿಯುಂಟು ಮಾಡಿದೆ. ಹೊನ್ನಾವರ ಮತ್ತು ಕುಮಟಾ ತಾಲ್ಲೂಕುಗಳಲ್ಲಿ ಪರಿಹಾರ ಕೇಂದ್ರಗಳನ್ನು ತೆರೆಯಲಾಗಿದ್ದು, ನೂರಾರು ಮಂದಿ ಆಶ್ರಯ ಪಡೆದುಕೊಂಡಿದ್ದಾರೆ.

ಗೋವಾದ ಮಡಗಾಂ ಮತ್ತು ತಿವಿಮ್ ನಡುವೆ ಕೊಂಕಣ ರೈಲ್ವೆ ಹಳಿಗಳ ಮೇಲೆ ಐದು ಕಡೆ ಮರಗಳು ಬಿದ್ದಿದ್ದವು. ಇದರಿಂದ ತಿರುವನಂತಪುರ ಸೆಂಟ್ರಲ್-ಲೋಕಮಾನ್ಯ ತಿಲಕ್ ಟರ್ಮಿನಸ್ ನಡುವೆ ಸಂಚರಿಸುವ ರೈಲು (ಸಂಖ್ಯೆ 06346) ಮೂರು ತಾಸು ವಿಳಂಬವಾಗಿ ಸಾಗುತ್ತಿದೆ ಎಂದು ಕೊಂಕಣ ರೈಲ್ವೆ ಅಧಿಕಾರಿಗಳು ತಿಳಿಸಿದ್ದಾರೆ.

ಕಾರವಾರ ನಗರದಲ್ಲಿ 76 ವಿದ್ಯುತ್ ಕಂಬಗಳು, 14 ವಿದ್ಯುತ್ ಪರಿವರ್ತಕಗಳಿಗೆ ಹಾನಿಯಾಗಿದೆ. ಇದರಿಂದ ಶನಿವಾರ ಸಂಜೆ ವಿದ್ಯುತ್ ಸಂಪರ್ಕ ಕಡಿತವಾಗಿದ್ದು, ಭಾನುವಾರ ಸಂಜೆಯಾದರೂ ಸರಿಯಾಗಿರಲಿಲ್ಲ. ವಿದ್ಯುತ್ ಸಂಪರ್ಕ ಪುನರ್ ಸ್ಥಾಪಿಸಲು ಹೆಸ್ಕಾಂ ಸಿಬ್ಬಂದಿ ಹರಸಾಹಸ ಪಡುತ್ತಿದ್ದಾರೆ. ತಾಲ್ಲೂಕಿನ ಏಳು ಮನೆಗಳಿಗೆ ಭಾಗಶಃ ಹಾನಿಯಾಗಿದೆ. ಇದೇ ರೀತಿಯ ಸನ್ನಿವೇಶ ಅಂಕೋಲಾದಲ್ಲೂ ಕಂಡುಬಂತು.

ನಗರದಲ್ಲಿ ಶನಿವಾರ ರಾತ್ರಿ ಭಾರಿ ವೇಗದಲ್ಲಿ ಗಾಳಿ ಬೀಸಲು ಶುರುವಾಗಿದ್ದು, ಭಾನುವಾರ ಮಧ್ಯಾಹ್ನದವರೆಗೂ ಮುಂದುವರಿಯಿತು. ಮಧ್ಯಾಹ್ನದ ನಂತರ ಆಗಾಗ ಜೋರಾಗಿ ಮಳೆಯಾಯಿತು. ಗಾಳಿಯ ರಭಸಕ್ಕೆ ಸಮುದ್ರವೂ ಪ್ರಕ್ಷುಬ್ಧವಾಗಿದ್ದು, ಬೃಹತ್ ಅಲೆಗಳು ದಡಕ್ಕೆ ಅಪ್ಪಳಿಸುತ್ತಿವೆ. ಸಮುದ್ರದ ಈ ರೌದ್ರಾವತಾರವನ್ನು ನೋಡಿದ ಹಲವರು, 2008ರಲ್ಲಿ ಉಂಟಾಗಿದ್ದ ಸುನಾಮಿಯನ್ನು ನೆನಪಿಸಿಕೊಂಡರು.

ಭಟ್ಕಳದ ಮುರ್ಡೇಶ್ವರ ಸಮುದ್ರ ತೀರದಲ್ಲಿ ಪ್ರವಾಸಿಗರಿಗಾಗಿ ಇದ್ದ ದೋಣಿಗಳು, ಮನರಂಜನಾ ಸಾಮಗ್ರಿಗಳು ಹಾಗೂ ಹತ್ತಾರು ಗೂಡಂಗಡಿಗಳಿಗೆ ಹಾನಿಯಾಗಿದ್ದು ಲಕ್ಷಾಂತರ ಮೌಲ್ಯದ ವಸ್ತುಗಳು ನಷ್ಟವಾಗಿವೆ. ಹೊನ್ನಾವರ ತಾಲ್ಲೂಕಿನಲ್ಲಿ ಒಟ್ಟು 24 ಮನೆಗಳಿಗೆ ಹಾನಿಯಾಗಿದ್ದು ಮಾವಿನಕುರ್ವೆ ಪರಿಹಾರ ಕೇಂದ್ರ ತೆರೆಯಲಾಗಿದ್ದು 60 ಜನ ಆಶ್ರಯ ಪಡೆದಿದ್ದಾರೆ. ಅಂಕೋಲಾದಲ್ಲಿ ಮೂರು ಮನೆಗಳಿಗೆ ಹಾನಿಯಾಗಿದೆ. ಅಂದಾಜು1.39 ಹೆಕ್ಟೇರ್ ಪ್ರದೇಶದ ಕಲ್ಲಂಗಡಿ ಬೆಳೆ ನಾಶವಾಗಿದೆ. ಶಿರಸಿ, ಸಿದ್ದಾಪುರ, ಯಲ್ಲಾಪುರ-ದಲ್ಲಿ ರಾತ್ರಿಯಿಂದಲೇ ಧಾರಾಕಾರ ಮಳೆಯಾಗಿದ್ದು, ಹಾನಿಯಾದ ವರದಿಗಳಿಲ್ಲ.

ಬೆಳಗಾವಿ ನಗರವೂ ಸೇರಿದಂತೆ ಜಿಲ್ಲೆಯ ಬಹುತೇಕ ಕಡೆಗಳಲ್ಲಿ ದಿನವಿಡೀ ಜೋರು ಗಾಳಿ ಹಾಗೂ ಮಳೆ ಮುಂದುವರಿಯಿತು. ಖಾನಾಪುರ ತಾಲ್ಲೂಕಿನ ಪಾರವಾಡದಲ್ಲಿ ಜೋರು ಗಾಳಿ-ಮಳೆಯಿಂದಾಗಿ ಸರ್ಕಾರಿ ಶಾಲೆ ಹಾಗೂ ಕೆಲವು ಮನೆಗಳ ಹೆಂಚುಗಳು ಮತ್ತು ತಗಡಿನ ಶೀಟುಗಳು ಹಾರಿ ಹೋಗಿವೆ. ಬೆಳಗಾವಿ ತಾಲ್ಲೂಕಿನ ಖನಗಾಂವ ಕೆ.ಎಚ್. ಗ್ರಾಮದಲ್ಲಿ 4 ವಿದ್ಯುತ್ ಕಂಬಗಳು ಧರೆಗುರುಳಿದವು. ಬಹುತೇಕ ಕಡೆಗಳಲ್ಲಿ ವಿದ್ಯುತ್ ಕಡಿತಗೊಂಡಿದ್ದರಿಂದ ಜನರು ತೊಂದರೆ ಅನುಭವಿಸಿದರು.

ಹುಬ್ಬಳ್ಳಿ–ಧಾರವಾಡ ಅವಳಿ ನಗರದಲ್ಲಿಯೂ ಬೆಳಗಿನಿಂದ ಮಳೆ ಸುರಿದೆ.

ಗೋವಾದ ಹಲವೆಡೆ ತೌತೆ ಅಬ್ಬರಕ್ಕೆ ನೂರಾರು ಮರಗಳು ನೆಲಕ್ಕೆ ಉರುಳಿವೆ. ಪಣಜಿಯಲ್ಲಿ ನೆಲಕ್ಕೆ ಉರುಳಿದ ಮರವನ್ನು ತೆರವು ಮಾಡಿದ ಪೊಲೀಸ್ ಸಿಬ್ಬಂದಿ —ಎಎಫ್‌ಪಿ ಚಿತ್ರ

ತೌತೆ: ಮಹಾರಾಷ್ಟ್ರದಲ್ಲಿ ಭಾರಿ ಮಳೆ ಸಾಧ್ಯತೆ

ಮುಂಬೈ (ಪಿಟಿಐ): ‘ತೌತೆ’ ಚಂಡಮಾರುತವು ಸೋಮವಾರ ಮಧ್ಯಾಹ್ನದ ನಂತರ ಮಹಾರಾಷ್ಟ್ರ ಕರಾವಳಿಯನ್ನು ಹಾದುಹೋಗಲಿದ್ದು, ಮುಂಬೈ ಸೇರಿದಂತೆ ರಾಜ್ಯದ ಕರಾವಳಿ ಪ್ರದೇಶದಲ್ಲಿ ಭಾರಿ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಹೇಳಿದೆ.

ರಾಯಗಡ ಜಿಲ್ಲೆಯಲ್ಲಿ ಗರಿಷ್ಠ ಮಳೆಯಾಗುವ ಸಾಧ್ಯತೆ ಇದೆ. ಮುಂಬೈ, ಕೊಂಕಣ, ಠಾಣೆ ಮತ್ತು ಫಾಲ್ಘರ್‌ನಲ್ಲಿ ಭಾರಿ ಮಳೆಯಾಗಲಿದೆ. ಆದರೆ ಗಾಳಿಯು 200 ಕಿ.ಮೀ.ಗಿಂತಲೂ ಹೆಚ್ಚಿನ ವೇಗದಲ್ಲಿ ಬೀಸಲಿದ್ದು, ಭಾರಿ ಅಪಾಯ ತಂದೊಡ್ಡುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ಎಚ್ಚರಿಕೆ ನೀಡಿದೆ.

ಭಾನುವಾರ ಮುಂಬೈನಲ್ಲಿ ಮಳೆಯಾಗಿಲ್ಲ. ಆದರೆ ವೇಗವಾದ ಬಿರುಗಾಳಿ ಬೀಸಿದೆ. ನಗರದ ವಿವಿಧೆಡೆ ಹಲವು ಮರಗಳು ನೆಲಕ್ಕುರುಳಿವೆ. ಮುಂಬೈನಲ್ಲಿ ಕೋವಿಡ್ ಲಾಕ್‌ಡೌನ್ ಇರುವ ಕಾರಣ ರಸ್ತೆಗಳಲ್ಲಿ ಜನದಟ್ಟಣೆ ಇಲ್ಲ. ಆದರೆ, ತಗ್ಗಿನ ಪ್ರದೇಶದಲ್ಲಿ ಇರುವವರು ಎಚ್ಚರಿಕೆಯಿಂದ ಇರಬೇಕು ಎಂದು ಬೃಹನ್ ಮುಂಬೈ ಮಹಾನಗರಪಾಲಿಕೆ ಹೇಳಿದೆ.

ಗೋವಾದಲ್ಲಿ ವಿದ್ಯುತ್ ಕಂಬಗಳು ನೆಲಕ್ಕೆ: ತೌತೆ ಚಂಡಮಾರುತವು ಭಾನುವಾರ ಗೋವಾವನ್ನು ಪ್ರವೇಶಿಸಿದ್ದು, ರಾಜ್ಯದ ಎಲ್ಲೆಡೆ ಭಾರಿ ಮಳೆಯಾಗಿದೆ.

ಬಿರುಗಾಳಿ ಬೀಸಿದ ಕಾರಣ, ರಾಜ್ಯದ ವಿವಿಧೆಡೆ ನೂರಾರು ವಿದ್ಯುತ್ ಕಂಬಗಳು ನೆಲಕ್ಕುರುಳಿವೆ. ಇದರಿಂದ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಿದೆ.

ಕೇರಳ: ಕುಗ್ಗಿದ ಚಂಡಮಾರುತ ಪ್ರಭಾವ

ಕೊಚ್ಚಿ (ಪಿಟಿಐ): ತೌತೆ ಚಂಡಮಾರುತದ ಪ್ರಭಾವ ಕೇರಳದಲ್ಲಿ ಸ್ವಲ್ಪ ಕಡಿಮೆಯಾಗಿದೆ. ಚಂಡಮಾರುತವು ಗುಜರಾತ್ ಕಡೆಗೆ ಮುಖಮಾಡಿದ್ದರಿಂದ ರಾಜ್ಯದಲ್ಲಿ ಮಳೆ ಹಾಗೂ ಬಿರುಗಾಳಿಯ ಪ್ರಮಾಣ ಕಡಿಮೆಯಾಗಿದೆ.

ಭಾನುವಾರ ಬೆಳಿಗ್ಗೆ ಮಧ್ಯ ಮತ್ತು ಉತ್ತರ ಕೇರಳದ ಕೆಲವೆಡೆ ಮಾತ್ರ ಮಳೆಯಾಗಿದೆ. ಎಂಟು ಜಿಲ್ಲೆಗಳಲ್ಲಿ ಆರೆಂಜ್ ಅಲರ್ಟ್ ಘೋಷಿಸಲಾಗಿತ್ತು. ಬಿರುಗಾಳಿಯಿಂದ ರಾಜ್ಯದ ಹಲವೆಡೆ ಭಾರಿ ನಷ್ಟ ಸಂಭವಿಸಿದೆ. ಕೋಯಿಕ್ಕೋಡ್ ಹಾಗೂ ಎರ್ನಾಕುಳಂ ಜಿಲ್ಲೆಗಳಲ್ಲಿ ಸಾವುನೋವುಗಳು ಸಂಭವಿಸಿರುವುದೂ ವರದಿಯಾಗಿದೆ.

ರಾಜ್ಯದಲ್ಲಿ ಸೋಮವಾರದವರೆಗೂ ಭಾರಿ ಮಳೆ ಹಾಗೂ ಬಿರುಗಾಳಿ ಬೀಸುವ ಸಾಧ್ಯತೆ ಇದೆ ಎಂದು ಕೇರಳ ವಿಪತ್ತು ನಿರ್ವಹಣಾ ಸಂಸ್ಥೆಯು ಹೇಳಿದ್ದರೂ ಯಾವುದೇ ಜಿಲ್ಲೆಯಲ್ಲಿ ವಿಪರೀತ ಗಾಳಿಮಳೆಯಾಗಿರುವುದು ವರದಿಯಾಗಿಲ್ಲ.

ಜಲಾಶಯಗಳಿಗೆ ನೀರು: ಕಳೆದೆರಡು ದಿನಗಳಿಂದ ಸುರಿದ ಭಾರಿ ಮಳೆಯಿಂದಾಗಿ ಕೇರಳದ ಅನೇಕ ಜಲಾಶಯಗಳು ಭರ್ತಿಯಾಗುವ ಸ್ಥಿತಿಗೆ ಬಂದಿವೆ.

5 ದಿನ ‘ಯೆಲ್ಲೊ ಅಲರ್ಟ್’

ಪ್ರಜಾವಾಣಿ ವಾರ್ತೆ

ಬೆಂಗಳೂರು: ತೌತೆ ಚಂಡಮಾರುತ ತೀವ್ರಗೊಂಡಿರುವುದರಿಂದ ರಾಜ್ಯದ ಕರಾವಳಿ ಜಿಲ್ಲೆಗಳಲ್ಲಿ ಮೇ.21ರವರೆಗೆ ಗುಡುಗು, ಸಿಡಿಲು ಸಹಿತ ಧಾರಕಾರ ಮಳೆಯಾಗುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಕರಾವಳಿ ಜಿಲ್ಲೆಗಳಾದ ಉತ್ತರ ಕನ್ನಡ, ದಕ್ಷಿಣ ಕನ್ನಡ ಹಾಗೂ ಉಡುಪಿಯಲ್ಲಿ ಮೇ 21ರವರೆಗೆ ‘ಯೆಲ್ಲೊ ಅಲರ್ಟ್’ ಘೋಷಿಸಲಾಗಿದೆ.

ಮೀನುಗಾರರಿಗೆ ಎಚ್ಚರಿಕೆ:ಕರಾವ-ಳಿಯಲ್ಲಿ ಗಂಟೆಗೆ ಗರಿಷ್ಠ 90 ಕಿ.ಮೀ ವೇಗದಲ್ಲಿ ಗಾಳಿ ಬೀಸು ತ್ತಿದ್ದು, 6.3 ಮೀಟರ್‌ಗಳಷ್ಟು ಎತ್ತ ರದ ಅಲೆಗಳೂ ಏಳುತ್ತಿರುವುದರಿಂದ ಮೀನುಗಾರರು ಕಡಲಿಗೆ ಇಳಿಯಬಾರದು ಎಂದು ಇಲಾಖೆ ಎಚ್ಚರಿಕೆ ನೀಡಿದೆ.

ಉತ್ತರ ಒಳನಾಡಿನ ವಿಜಯಪುರ, ಹಾವೇರಿ, ಗದಗ, ಧಾರವಾಡ, ಬೆಳಗಾವಿ, ಬಾಗಲಕೋಟೆಯಲ್ಲಿ ಸೋಮವಾರ (ಮೇ 17) ಹೆಚ್ಚು ಮಳೆಯಾಗುವ ಮುನ್ಸೂಚನೆ ಇರುವುದರಿಂದ ‘ಯೆಲ್ಲೊ ಅಲರ್ಟ್’ ಘೋಷಿಸಲಾಗಿದೆ.

ದಕ್ಷಿಣ ಒಳನಾಡಿನ ಶಿವಮೊಗ್ಗ, ಚಿಕ್ಕಮಗಳೂರು, ಹಾಸನ, ಕೊಡಗು ಜಿಲ್ಲೆಗಳಲ್ಲಿ ‘ಆರೆಂಜ್ ಅಲರ್ಟ್’ ಘೋಷಿಸಲಾಗಿದೆ.

ಈ ಭಾಗದಲ್ಲಿ ಮೇ 19ರಿಂದ 21ರವರೆಗೆ ಮತ್ತೆ ಹೆಚ್ಚು ಮಳೆಯಾಗುವ ಸಾಧ್ಯತೆ ಇದೆ ಎಂದೂ ಮಾಹಿತಿ ನೀಡಿದೆ.

ಕಾರವಾರದ ಹಬ್ಬುವಾಡ ರಸ್ತೆಯಲ್ಲಿ ಭಾನುವಾರ ರಸ್ತೆಗೆ ಅಡ್ಡಲಾಗಿ ಬಿದ್ದ ಬೃಹತ್ ಮರವೊಂದನ್ನು ನಗರಸಭೆ ಹಾಗೂ ಅಗ್ನಿಶಾಮಕ ದಳದ ಸಿಬ್ಬಂದಿ ತೆರವು ಮಾಡುತ್ತಿರುವುದು

ಮಂಗಳೂರಿನ ಸಸಿಹಿತ್ಲು ಬೀಚ್ ರಸ್ತೆಯ ಅಂಗಡಿಗಳು ಸಂಪೂರ್ಣ ನಾಶವಾಗಿವೆ —ಪ್ರಜಾವಾಣಿ ಚಿತ್ರ/ ಗೋವಿಂದರಾಜ ಜವಳಿ

ಕರಾವಳಿಯಲ್ಲಿ ತಗ್ಗಿದ ಕಡಲ್ಕೊರೆತ

ಮಂಗಳೂರು: ಕರಾವಳಿ ಹಾಗೂ ಚಿಕ್ಕಮಗಳೂರಿನಲ್ಲಿ ಭಾನುವಾರ ಮಳೆಯ ಅಬ್ಬರ ಸ್ವಲ್ಪ ಕಡಿಮೆಯಾಗಿದೆ. ಹಲವೆಡೆ ಮನೆಗಳಿಗೆ ಹಾನಿಯಾಗಿದ್ದು, ವಿದ್ಯುತ್ ಕಂಬಗಳು, ಮರಗಳು ನೆಲಕ್ಕೆ ಉರುಳಿವೆ.

ಮಳೆಯಿಂದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 84 ಗ್ರಾಮಗಳಲ್ಲಿ ಹಾನಿ ಉಂಟಾಗಿದೆ. 14 ಮನೆಗಳಿಗೆ ಸಂಪೂರ್ಣ ಹಾನಿಯಾಗಿದ್ದು, 108 ಮನೆಗಳಿಗೆ ಭಾಗಶಃ ಹಾನಿಯಾಗಿದೆ. ಒಟ್ಟು 380 ಜನರನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಲಾಗಿದೆ.

‘ಎನ್‌ಡಿಆರ್‌ಎಫ್ ತಂಡ ಜಿಲ್ಲೆಗೆ ಬಂದಿದ್ದು, ತುರ್ತು ಸಂದರ್ಭದ ಕಾರ್ಯಾಚರಣೆಗೆ ಸನ್ನದ್ಧವಾಗಿದೆ. ಕರ್ನಾಟಕದಲ್ಲಿ 9 ರಿಂದ 10 ತಂಡಗಳನ್ನು ವಿವಿಧೆಡೆ ನಿಯೋಜಿಸಲಾಗಿದೆ’ ಎಂದು ಎನ್‌ಡಿಆರ್‌ಎಫ್‌ನ ರಾಜೇಶ್ ಪ್ರಸಾದ್ ಚೌಧರಿ ತಿಳಿಸಿದ್ದಾರೆ.

‘ಉಡುಪಿ ಜಿಲ್ಲೆಯಲ್ಲಿ ಶನಿವಾರ ಸುರಿದ ಬಿರುಗಾಳಿ ಸಹಿತ ಮಳೆಗೆ 36 ಮನೆಗಳಿಗೆ ಹಾನಿಯಾಗಿದ್ದು, ₹ 11 ಲಕ್ಷ ನಷ್ಟ ಅಂದಾಜಿಸಲಾಗಿದೆ. 105 ವಿದ್ಯುತ್ ಕಂಬಗಳು ಮುರಿದು ಬಿದ್ದಿದ್ದು, 8 ವಿದ್ಯುತ್ ಪರಿವರ್ತಕ ಸುಟ್ಟಿವೆ. 60 ಮಂದಿಯನ್ನು ಸ್ಥಳಾಂತರಿಸಲಾಗಿದ್ದು, 16 ಪುನರ್ವಸತಿ ಕೇಂದ್ರಗಳನ್ನು ತೆರೆಯಲಾಗಿದೆ’ ಎಂದು ಜಿಲ್ಲಾಧಿಕಾರಿ ಜಿ.ಜಗದೀಶ್ ತಿಳಿಸಿದ್ದಾರೆ.

ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲ್ಲೂಕಿನ ಬಿದರಹಳ್ಳಿ, ಬಿಳ್ಳೂರು, ಕುಶಾಲನಗರ, ಚೌಳಿಕೆರೆ ಎಸ್ಟೇಟ್‌ನಲ್ಲಿ 25ಕ್ಕೂ ಹೆಚ್ಚು ವಿದ್ಯುತ್ ಕಂಬಗಳು ಧರೆಗುರುಳಿವೆ. ಕೊಟ್ಟಿಗೆಹಾರ ಭಾಗದ ಜಾವಳಿ, ಮಲೆಮನೆ, ಕಲ್ಮನೆ ಹಾಗೂ ವಾಟೆಖಾನ್‌ನಲ್ಲಿ 10ಕ್ಕೂ ಹೆಚ್ಚು ವಿದ್ಯುತ್ ಕಂಬಗಳು ಬಿದ್ದಿವೆ. ಜಾವಳಿಯಲ್ಲಿ ಮನೆಯೊಂದರ ಮೇಲೆ ಮರ ಬಿದ್ದು ಹಾನಿಯಾಗಿದೆ. ಚಾರ್ಮಾಡಿ ಘಾಟಿ ಭಾಗ ಕೆಲವೆಡೆ ಮರಗಳ ಕೊಂಬೆಗಳು ಮುರಿದು ಬಿದ್ದಿವೆ.

ತಗ್ಗಿದ ಕಡಲ್ಕೊರೆತ: ಕರಾವಳಿಯಲ್ಲಿ ಭಾನುವಾರ ಕಡಲಿನ ಅಬ್ಬರ ತುಸು ಕಡಿಮೆಯಾಗಿದೆ. ಉಡುಪಿ, ದಕ್ಷಿಣ ಕನ್ನಡ ಜಿಲ್ಲೆಯ ಹಲವೆಡೆ ಕಡಲ ತೀರದ ರಸ್ತೆಗಳು ಸಂಪೂರ್ಣ ಕೊಚ್ಚಿಕೊಂಡು ಹೋಗಿವೆ. ಹಲವಾರು ಮನೆಗಳು, ಬೋಟ್‌ಗಳಿಗೆ ಹಾನಿಯಾಗಿದೆ.



ಬೆಳ್ತಂಗಡಿ ತಾಲ್ಲೂಕಿನ ಗರ್ಡಾಡಿ ಬಳಿ ಹಳ್ಳದಲ್ಲಿ ಶನಿವಾರ ನೀರುನಾಯಿಗಳ ಹಿಂಡು ಕಾಣಿಸಿಕೊಂಡಿತು

ಬೆಳ್ತಂಗಡಿ: ನೀರುನಾಯಿಗಳು ಪ್ರತ್ಯಕ್ಷ

ಉಜಿರೆ (ದಕ್ಷಿಣ ಕನ್ನಡ): ತೌತೆ ಚಂಡಮಾರುತದಿಂದಾಗಿ ಜಿಲ್ಲೆಯಲ್ಲಿ ಉತ್ತಮ ಮಳೆಯಾಗುತ್ತಿದ್ದು, ಹಳ್ಳ–ಕೊಳ್ಳಗಳು, ನದಿಗಳು ತುಂಬಿ ಹರಿಯುತ್ತಿವೆ. ಈ ಮಧ್ಯೆ ಬೆಳ್ತಂಗಡಿ ತಾಲ್ಲೂಕಿನ ಗರ್ಡಾಡಿ ಬಳಿ ಹಳ್ಳದಲ್ಲಿ ಶನಿವಾರ ಅಪರೂಪದ ನೀರುನಾಯಿಗಳ ಹಿಂಡು ಪ್ರತ್ಯಕ್ಷವಾಗಿದೆ.

‘ಕಳೆದ ಅಕ್ಟೋಬರ್‌ನಲ್ಲಿ ಹಳ್ಳದಲ್ಲಿ ರಾತ್ರಿಹೊತ್ತು ನೀರುನಾಯಿಗಳ ಹಿಂಡು ಪತ್ತೆಯಾಗಿತ್ತು. ಇದೀಗ ಹಗಲಿನಲ್ಲಿ 25ಕ್ಕಿಂತ ಅಧಿಕ ನೀರುನಾಯಿಗಳು ಫಲ್ಗುಣಿ ನದಿಯ ಸಂಪರ್ಕದ ಹಳ್ಳದಲ್ಲಿ ಕಂಡು ಬಂದಿರುವುದು ಅಚ್ಚರಿ ಮೂಡಿಸಿದೆ’ ಎಂದು ಸ್ಥಳೀಯರಾದ ಕುಬಳಬೆಟ್ಟು ಗುತ್ತು ನಿವಾಸಿ ಸಂಪತ್ ಕೊಂಬ ಹೇಳಿದ್ದಾರೆ.

ಹಳ್ಳದಲ್ಲಿ ಪತ್ತೆಯಾದ ನೀರು ನಾಯಿಗಳ ವಿಡಿಯೊ ಸಾಮಾಜಿಕ ಜಾಲ ತಾಣಗಳಲ್ಲಿ ವೈರಲ್ ಆಗಿದೆ.

ನಡ್ಡಾ ಜೊತೆ ಸಚಿವ ಹೆಬ್ಬಾರ್ ವಿಡಿಯೊ ಸಂವಾದ

ಯಲ್ಲಾಪುರ: ರಾಜ್ಯದ ಕರಾವಳಿ ಭಾಗದಲ್ಲಿ ಅಪ್ಪಳಿಸಿರುವ ತೌತೆ ಚಂಡಮಾರುತಕ್ಕೆ ಸಂಬಂಧಿಸಿದಂತೆ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರ ಅಧ್ಯಕ್ಷತೆಯಲ್ಲಿ ನಡೆದ ವಿಡಿಯೊ ಸಂವಾದದಲ್ಲಿ ಉತ್ತರ ಕನ್ನಡ ಜಿಲ್ಲಾ ಉಸ್ತುವಾರಿ ಹಾಗೂ ಕಾರ್ಮಿಕ ಖಾತೆ ಸಚಿವ ಶಿವರಾಮ ಹೆಬ್ಬಾರ್ ಪಾಲ್ಗೊಂಡರು.

ತೌತೆ ಚಂಡಮಾರುತದಿಂದಾಗಿ ಉತ್ತರಕನ್ನಡ ಜಿಲ್ಲೆಯ ಕರಾವಳಿ ಭಾಗದಲ್ಲಿ ಉಂಟಾಗಿರುವ ನಷ್ಟ ಹಾಗೂ ಪರಿಸ್ಥಿತಿಯನ್ನು ಎದುರಿಸಲು ಜಿಲ್ಲೆಯಲ್ಲಿ ಕೈಗೊಂಡ ಕ್ರಮಗಳ ಬಗ್ಗೆ ರಾಷ್ಟ್ರೀಯ ಅಧ್ಯಕ್ಷರಿಗೆ ಅವರು ಮಾಹಿತಿ ನೀಡಿದರು.

ವಿಡಿಯೊ ಸಂವಾದದಲ್ಲಿ ಬಿಜೆಪಿ ರಾಜ್ಯ ಉಸ್ತುವಾರಿ ಅರುಣ್ ಸಿಂಗ್, ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ, ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಹಾಗೂ ಗೋವಾ ಮುಖ್ಯಮಂತ್ರಿ ಪ್ರಮೋದ ಸಾವಂತ, ರಾಜ್ಯದ ಕರಾವಳಿ ಭಾಗದ ಶಾಸಕರು, ಸಂಸದರು ಹಾಜರಿದ್ದರು.

ಕೆಲ ವಿಮಾನಗಳ ಹಾರಾಟ ರದ್ದು

ಬೆಳಗಾವಿ: ಪ್ರತಿಕೂಲ ಪರಿಸ್ಥಿತಿಯಿಂದಾಗಿ ಇಲ್ಲಿನ ಸಾಂಬ್ರಾ ವಿಮಾನನಿಲ್ದಾಣ-ದಲ್ಲಿ ಕೆಲ ವಿಮಾನಗಳ ಹಾರಾಟ ರದ್ದುಗೊಳಿಸಲಾಯಿತು. ಹೈದರಾಬಾದ್, ಬೆಂಗಳೂರು, ತಿರುಪತಿ ಮಾರ್ಗಗಳಲ್ಲಿ ವಿಮಾನ ಸಂಚಾರ ರದ್ದುಗೊಳಿಸ-ಲಾಯಿತು. ಇಂದೋರ್, ಜೋಧಪುರ, ಮುಂಬೈ ಮಾರ್ಗಗಳಲ್ಲಿ ಹಾರಾಟ ನಡೆಸಿದವು ಎಂದು ವಿಮಾನನಿಲ್ದಾಣ ನಿರ್ದೇಶಕ ರಾಜೇಶಕುಮಾರ ಮೌರ್ಯ ತಿಳಿಸಿದರು.

ಶಿವಮೊಗ್ಗ: ಕೆಲವೆಡೆ ಜೋರು ಮಳೆ

(ಶಿವಮೊಗ್ಗ): ವಾಯುಭಾರ ಕುಸಿತದ ಪರಿಣಾಮ ಜಿಲ್ಲೆಯ ಎಲ್ಲೆಡೆ ಬೆಳಿಗ್ಗೆಯಿಂದ ಮೋಡ ಕವಿದ ವಾತಾವರಣ ಇದ್ದು, ಭಾನುವಾರ ಕೆಲವೆಡೆ ಮಳೆಯಾಗಿದೆ.

ತೀರ್ಥಹಳ್ಳಿ, ಹೊಸನಗರ ಭಾಗದಲ್ಲಿ ಜೋರು ಮಳೆಯಾಗಿದ್ದು, ಕೋಣಂದೂರು ಸಮೀಪದ ಉಂಬ್ಳೆಬೈಲಿನಲ್ಲಿ ಭತ್ತದ ಫಸಲು ನಾಶವಾಗಿದೆ. ಸೊರಬ, ಸಾಗರದಲ್ಲಿ ಸಾಧಾರಣ ಮಳೆಯಾಗಿದೆ. ಶಿಕಾರಿ-ಪುರದಲ್ಲಿ ಬೆಳಿಗ್ಗೆಯಿಂದಲೇ ತುಂತರು ಮಳೆಯಾಗಿದೆ.

ತೀರ್ಥಹಳ್ಳಿ ಭಾಗದಲ್ಲಿ ಜೋರು ಮಳೆಯಾಗುತ್ತಿರುವುದರಿಂದ ತುಂಗಾ ಜಲಾಶಯ ಭರ್ತಿಯಾಗುತ್ತಿದೆ. ಒಂದು ಸಾವಿರ ಕ್ಯುಸೆಕ್ ನೀರು ಹರಿದುಬ-ರುತ್ತಿದ್ದು, ಮುಂಜಾಗ್ರತಾ ಕ್ರಮವಾಗಿ ಜಲಾಶಯದಿಂದ ನದಿಗೆ 1,000 ಕ್ಯುಸೆಕ್ ನೀರು ಹರಿಸಲಾಗಿದೆ.

ಮಳೆ: ಕೊಡಗಿನಲ್ಲಿ ಅಪಾರ ಹಾನಿ

ಮಡಿಕೇರಿ: ಕೊಡಗು ಜಿಲ್ಲೆಯಲ್ಲಿ ಎರಡು ದಿನಗಳಿಂದ ಸುರಿದ ಭಾರಿ ಮಳೆ ಹಾಗೂ ಗಾಳಿಯಿಂದ ಅಪಾರ ಹಾನಿ ಸಂಭವಿಸಿದೆ.

ಭಾನುವಾರ ಮಧ್ಯಾಹ್ನ ತನಕವೂ ಅಬ್ಬರಿಸಿದ ಮಳೆ ಬಳಿಕ ಕೊಂಚ ಬಿಡುವು ನೀಡಿತು. ಕಾವೇರಿ ನದಿ ಸೇರಿದಂತೆ ಹಳ್ಳಗಳಲ್ಲಿ ನೀರಿನಮಟ್ಟ ಏರಿಕೆಯಾಗಿದೆ. ನಿರಂತರವಾಗಿ ಸುರಿದ ಮಳೆಯಿಂದ ಬತ್ತಿದ್ದ ತೊರೆ–ತೋಡುಗಳು ಜೀವ ಕಳೆ ಪಡೆದವು. ಭಾರಿ ಮಳೆಯಿಂದ ಕಾಫಿ ತೋಟದಲ್ಲಿ ಕೆಲಸಕ್ಕೆ ಅಡಚಣೆ ಉಂಟಾಯಿತು.

ಪೊನ್ನಂಪೇಟೆಯ ಹುದಿಕೇರಿ ಮುಖ್ಯರಸ್ತೆಯಲ್ಲಿ ಸೇತುವೆಯ ದಡ ಕಸಿದಿದೆ. ಬಲಮುರಿಯ ಕಿರುಸೇತುವೆಯ ಹಂತಕ್ಕೆ ಕಾವೇರಿ ನೀರಿನ ಹರಿವಿತ್ತು. ಬಲಮುರಿ-ಪಾರಾಣೆ ಸಂಪರ್ಕ ರಸ್ತೆಯಲ್ಲಿ ರಸ್ತೆ ಕುಸಿದು ವಾಹನ ಸಂಚಾರಕ್ಕೆ ಅಡ್ಡಿ ಉಂಟಾಯಿತು. ನಾಪೋಕ್ಲು ವ್ಯಾಪ್ತಿಯ ಅಲ್ಲಲ್ಲಿ ವಿದ್ಯುತ್ ಕಂಬಗಳ ಮೇಲೆ ಮರ ಉರುಳಿದ್ದು, ಗ್ರಾಮೀಣ ಭಾಗಕ್ಕೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಿದೆ. ಭೇತ್ರಿ -ಹೆಮ್ಮಾಡು ಬಳಿ ನಿರ್ಮಾಣ ಹಂತದಲ್ಲಿರುವ ಸೇತುವೆ ಕಾಮಗಾರಿ ಸಾಮಗ್ರಿಗಳು ನೀರಿನಲ್ಲಿ ಕೊಚ್ಚಿಕೊಂಡು ಹೋಗಿದ್ದು ನಷ್ಟವಾಗಿದೆ.

ಮೈಸೂರು ನಗರ ಹಾಗೂ ಗ್ರಾಮಾಂತರ ಪ್ರದೇಶದ ಕೆಲವೆಡೆ ಸಾಧಾರಣ ಮಳೆಯಾಯಿತು.

ಹಾಸನ ಜಿಲ್ಲೆಯ ಸಕಲೇಶಪುರ ಹಾಗೂ ಅರಕಲಗೂಡಿನಲ್ಲಿ ತುಂತುರು ಮಳೆಯಾಗಿದೆ.

ತೌತೆ ಮಾರುತದ ಅಬ್ಬರ: ಹಾನಿ ಅಪಾರ

ಒಂದನೇ ಪುಟದಿಂದ

ಗೋಡೆ ಕುಸಿತ, ಚಾವಣಿ ಹಾರಿ ಹೋಗಿರುವುದು ಸೇರಿದಂತೆ 220 ಕ್ಕೂ ಹೆಚ್ಚು ಮನೆಗಳಿಗೆ ಹಾನಿಯಾಗಿದೆ.

‘ಕರಾವಳಿಯ ಮೂರು ಜಿಲ್ಲೆಗಳಲ್ಲಿ ಅಪಾಯದ ಸ್ಥಳಗಳಲ್ಲಿದ್ದ 516 ಜನರನ್ನು ಸ್ಥಳಾಂತರ ಮಾಡಲಾಗಿದೆ. ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ 10 ಪರಿಹಾರ ಕೇಂದ್ರಗಳನ್ನು ತೆರೆದಿದ್ದು, 253 ಜನರಿಗೆ ಅಲ್ಲಿ ಆಶ್ರಯ ಕಲ್ಪಿಸಲಾಗಿದೆ’ ಎಂದು ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿ ಎನ್. ಮಂಜುನಾಥ್ ಪ್ರಸಾದ್ ತಿಳಿಸಿದ್ದಾರೆ.

ಸುಮಾರು 500 ವಿದ್ಯುತ್ ಕಂಬಗಳಿಗೆ ಹಾನಿಯಾಗಿದೆ. 27 ವಿದ್ಯುತ್ ಪರಿವರ್ತಕಗಳೂ ಹಾಳಾಗಿದ್ದು, 3,000 ಮೀಟರ್‌ಗಳಷ್ಟು ಉದ್ದದ ವಿದ್ಯುತ್ ಪೂರೈಕೆ ಮಾರ್ಗಗಳಿಗೆ ಹಾನಿ ಸಂಭವಿಸಿದೆ.

ಕೊಚ್ಚಿಹೋದ ಒಡ್ಡು: ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನೇತ್ರಾವತಿ ನದಿ ನೀರಿನ ಮಟ್ಟದಲ್ಲಿ ಏರಿಕೆಯಾಗಿದೆ. ಮಂಗಳೂರು ಸಮೀಪದ ಹರೇಕಳ-ಅಡ್ಯಾರ್ ಬಳಿ ‘ಬ್ರಿಜ್ ಕಂ ಬ್ಯಾರೇಜ್’ ನಿರ್ಮಾಣ ಕಾಮಗಾರಿಗಾಗಿ ನಿರ್ಮಿಸಿದ್ದ ಮಣ್ಣಿನ ಒಡ್ಡು ಕೊಚ್ಚಿಹೋಗಿದೆ. ಕಾಮಗಾರಿಗಾಗಿ ಸ್ಥಳದಲ್ಲಿ ಸಂಗ್ರಹಿಸಿದ್ದ ವಸ್ತುಗಳು ಮತ್ತು ಸಲಕರಣೆಗಳೂ ನೀರುಪಾಲಾಗಿವೆ.

ಕಾರವಾರ, ಅಂಕೋಲಾ, ಭಟ್ಕಳ ಮತ್ತು ಮುರ್ಡೇಶ್ವರದಲ್ಲಿ ಸಮುದ್ರ ತೀರದಲ್ಲಿದ್ದ ದೋಣಿಗಳು, ಗೂಡಂಗಡಿಗಳು ಮತ್ತು ಮನೆಗಳಿಗೆ ಹಾನಿಯಾಗಿದೆ.

ಬೆಳಗಾವಿ ನಗರ, ಖಾನಾಪುರ ಮತ್ತು ಸುತ್ತಮುತ್ತಲಿನ ಪ್ರದೇಶಗಳ-ಲ್ಲೂ ವ್ಯಾಪಕ ಮಳೆಯಾಗಿದೆ. ಹಲವೆಡೆ ಮನೆಗಳು, ಶಾಲಾ ಕಟ್ಟಡಗಳಿಗೆ ಹಾನಿಯಾಗಿದೆ.

ಚಂಡಮಾರುತ: ಮಾಹಿತಿ ಪಡೆದ ನಡ್ಡಾ

ಬೆಂಗಳೂರು: ರಾಜ್ಯದ ಕರಾವಳಿ ಭಾಗದಲ್ಲಿ ತೌತೆ ಚಂಡಮಾರುತದಿಂದ ಸಂಭವಿಸಿದ ಹಾನಿ ಕುರಿತು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ ನಡ್ಡಾ ರಾಜ್ಯ ಗೃಹ ಸಚಿವ ಬಸವರಾಜ ಬೊಮ್ಮಾಯಿ ಅವರಿಂದ ಮಾಹಿತಿ ಪಡೆದುಕೊಂಡಿದ್ದಾರೆ.

ಜೆ.ಪಿ. ನಡ್ಡಾ ಜೊತೆ ವಿಡಿಯೊ ಸಂವಾದದಲ್ಲಿ ಬಸವರಾಜ ಬೊಮ್ಮಾಯಿ ಭಾಗವಹಿಸಿದರು. ಉತ್ತರ ಕನ್ನಡ, ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ-ಲ್ಲಿನ ಸದ್ಯದ ಸ್ಥಿತಿಯ ಬಗ್ಗೆ ವಿವರಣೆ ನೀಡಿದ ಬೊಮ್ಮಾಯಿ, ‘ಚಂಡಮಾರುತ ಎದುರಿಸಲು ರಾಜ್ಯ ಸರ್ಕಾರ ಸರ್ವ ರೀತಿಯಲ್ಲಿಯೂ ಸಜ್ಜಾಗಿದೆ’ ಎಂದು ತಿಳಿಸಿದರು.

‘ಚಂಡಮಾರುತ ಎದುರಿಸಲು ಒಟ್ಟು ಒಂದು ಸಾವಿರ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ. ರಾಜ್ಯ ಮತ್ತು ಕೇಂದ್ರ ವಿಪತ್ತು ನಿರ್ವಹಣಾ ಪಡೆಯ ತಂಡಗಳನ್ನು ಕರಾವಳಿಯ ಮೂರೂ ಜಿಲ್ಲೆಗಳಿಗೆ ನಿಯೋಜಿಸಲಾಗಿದೆ’ ಎಂದೂ ಬೊಮ್ಮಾಯಿ ಮಾಹಿತಿ ನೀಡಿದರು.

ರಕ್ಷಣೆ–ಪರಿಹಾರ ಕಾರ್ಯ ನಿರ್ವಹಣೆಗೆ ಎನ್‌ಡಿಆರ್‌ಎಫ್‌ನ 79 ತಂಡ

ಪ್ರಜಾವಾಣಿ ವಾರ್ತೆ

ನವದೆಹಲಿ: ‘ತೌತೆ’ ಚಂಡಮಾರುತದಿಂದ ಬಾಧಿತ ವಾಗಿರುವ 5 ರಾಜ್ಯಗಳು ಮತ್ತು 3 ಕೇಂದ್ರಾಡಳಿತ ಪ್ರದೇಶಗಳಲ್ಲಿ ರಕ್ಷಣೆ ಮತ್ತು ಪರಿಹಾರ ಕಾರ್ಯಾಚರಣೆಗಾಗಿ ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆಯ (ಎನ್‌ಡಿಆರ್‌ಎಫ್) 79 ತಂಡಗಳನ್ನು ನಿಯೋಜಿಸಲಾಗಿದೆ. ಜೊತೆಗೆ 22 ತಂಡಗಳನ್ನು ಸನ್ನದ್ಧ ಸ್ಥಿತಿಯಲ್ಲಿ ಇರಿಸಲಾಗಿದೆ.

ಕೇಂದ್ರ ಸಂಪುಟ ಕಾರ್ಯದರ್ಶಿ ರಾಜೀವ್ ಗೌಬಾ ನೇತೃತ್ವದಲ್ಲಿ ನಡೆದ ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರದ ಸಭೆಯಲ್ಲಿ ಈ ಕುರಿತು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ವಿಡಿಯೊ ಕಾನ್ಫರೆನ್ಸ್ ಮೂಲಕ ನಡೆದ ಈ ಸಭೆಯಲ್ಲಿ ಕರ್ನಾಟಕ, ಗುಜರಾತ್, ಮಹಾರಾಷ್ಟ್ರ, ಗೋವಾ, ಕೇರಳ, ತಮಿಳುನಾಡು ರಾಜ್ಯಗಳ ಮುಖ್ಯ ಕಾರ್ಯದರ್ಶಿಗಳು, ಕೇಂದ್ರಾಡಳಿತ ಪ್ರದೇಶಗಳಾದ ಲಕ್ಷದ್ವೀಪ, ದಾದ್ರ-ನಗರ್‌ಹವೇಲಿ, ದಮನ್–ದಿಯು ಆಡಳಿತ ಸಲಹೆಗಾರರು ಮತ್ತು ಕೇಂದ್ರ ಸಚಿವಾಲಯಗಳ ಹಲವು ಕಾರ್ಯದರ್ಶಿಗಳೂ ಪಾಲ್ಗೊಂಡಿದ್ದರು.

ಜನರನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂ-ತರಿಸಬೇಕು. ಯಾವುದೇ ಜೀವಹಾನಿ ಆಗದಂತೆ ನೋಡಿಕೊಳ್ಳಬೇಕು ವಿದ್ಯುತ್, ದೂರವಾಣಿ, ಇತರ ಪ್ರಮುಖ ಸೇವೆಗಳನ್ನು ಮರುಸ್ಥಾಪಿಸಲು ಪೂರ್ವಭಾವಿಯಾಗಿ ಅಗತ್ಯ ಕ್ರಮ ತೆಗೆದುಕೊಳ್ಳಬೇಕು ಎಂದು ಗೌಬಾ ಸೂಚಿಸಿದ್ದಾರೆ. ಆಸ್ಪತ್ರೆಗಳು ಮತ್ತು ಕೋವಿಡ್ ಆಸ್ಪತ್ರೆಗಳ ನಿರ್ವಹಣೆ ಮತ್ತು ಆಮ್ಲಜನಕ ಪೂರೈಕೆಯಲ್ಲಿ ವ್ಯತ್ಯಯವಾಗದಂತೆ ರಾಜ್ಯ ಸರ್ಕಾರಗಳು ನೋಡಿಕೊಳ್ಳಬೇಕು ಎಂದಿದ್ದಾರೆ.

ಕರ್ನಾಟಕ ರಾಜ್ಯ ವೈದ್ಯಕೀಯ ಸರಬರಾಜು ನಿಗಮ ನಿಯಮಿತ (ರಿ.)
ಪಿ.ಹೆಚ್.ಐ ಕಟ್ಟಡ, ಎಸ್.ಜೆ.ಪಿ ಪಾಲಿಟೆಕ್ನಿಕ್ ಎದುರು, ಕೆ.ಆರ್.ಸರ್ಕಲ್, ಶೇಷಾದ್ರಿರಸ್ತೆ, ಬೆಂಗಳೂರು–560 001.
ದೂರವಾಣಿ ಸಂಖ್ಯೆ: +91–80–29619801 ಮಿಂಚ್ ಅಂಚೆ: md.ksmscl@gmail.com,
No. HFW/KSMSCL/COVID/IFQ/Syr/28/2021-22 Date: 16-05-2021
ದರಪಟ್ಟಿ ಪ್ರಕಟಣೆ
ಉಲ್ಲೇಖ: 1. ದರಪಟ್ಟಿ ಅಧಿಸೂಚನೆ ಸಂಖ್ಯೆ: HFW/KSMSCL/COVID/IFQ/Syr/28/2021-22, Dtd: 16.05.2021.
ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯ ಪಾರದರ್ಶಕತೆ ಅಧಿನಿಯಮ 1999 ಮತ್ತು ನಿಯಮ 2000 ರ4(ಎ) ಅಡಿಯಲ್ಲಿ ಈ ಕೆಳಕಂಡ ಔಷಧಿಯನ್ನು ಖರೀದಿಸಿ ಪೂರೈಸಲು ದರಪಟ್ಟಿಗಳನ್ನು ರಾಷ್ಟ್ರವ್ಯಾಪ್ತಿಯಲ್ಲಿ ಕರೆಯಲಾಗಿದೆ.
1. ಕೋವಿಡ್–19 ಚಿಕಿತ್ಸೆಗೆ ಅಗತ್ಯವಿರುವ Sterile disposable syringe with hypodermic needle 2ml-23Gx1" ಔಷಧವನ್ನು ಖರೀದಿಸುವ ಬಗ್ಗೆ.
ಕೆ.ಎಸ್.ಎಂ.ಎಸ್.ಸಿ.ಎಲ್ ವೆಬ್‌ಸೈಟ್ ಮುಖಾಂತರ: http://www.kdlws.kar.nic.in/ ನಲ್ಲಿ ತಾಂತ್ರಿಕ ವಿವರಣೆ, ನಿಯಮಾವಳಿ ಹಾಗೂ ಇತರೆ ಮಾಹಿತಿಯನ್ನು ದಿನಾಂಕ: 17.05.2021 ರಿಂದ 19.05.2021 ಒಳಗಾಗಿ ಪಡೆಯಬಹುದು. ಅರ್ಹ ಸಂಸ್ಥೆಗಳು ಆನ್‌ಲೈನ್ ಮೂಲಕ ದರಪಟ್ಟಿಯನ್ನು Password Protected PDF ನಲ್ಲಿ ಇ–ಮೇಲ್ ಐಡಿ ksdlwscovid-19.procurement@gmail.com ಗೆ ದಿನಾಂಕ: 19.05.2021ರವರೆಗೆ ಸಂಜೆ 5 ಗಂಟೆಯೊಳಗೆ ದರಪಟ್ಟಿಗಳನ್ನು ಸಲ್ಲಿಸಬಹುದು.
ಸಹಿ/–
ವ್ಯವಸ್ಥಾಪಕ ನಿರ್ದೇಶಕರು.
ಕೆ.ಎಸ್.ಎಮ್.ಎಸ್.ಸಿ.ಎಲ್.
DIPR/DDU/Zen/RO-377/2021-22
ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ
ಜಿಲ್ಲಾ ಶಸ್ತ್ರಚಿಕಿತ್ಸಕರು, ಜಿಲ್ಲಾ ಆಸ್ಪತ್ರೆ, ಯಾದಗಿರಿ
ದೂರವಾಣಿ : 08473–252434, ಮಿಂಚಂಚೆ: dsdhyadgiri@gmail.com
ಸಂಖ್ಯೆ: ಲೆಕ್ಕಪತ್ರ/ಜಿಆಯಾ/ಆಡಳಿತ/21/2021–22 ದಿನಾಂಕ:11–05–2021
:: ಟೆಂಡರ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಟ್) ::
ಜಿಲ್ಲಾ ಆಸ್ಪತ್ರೆ ಯಾದಗಿರಿ ಹೊರಗುತ್ತಿಗೆ ಆಧಾರದ ಮೇಲೆ ಮಾನವ ಸಂಪನ್ಮೂಲ ಒದಗಿಸಲು ಇ–ಪ್ರೋಕ್ಯೂರಮೆಂಟ್ ಟೆಂಡರ್ ದ್ವಿ–ಲಕೋಟೆಯಲ್ಲಿ ಆಹ್ವಾನಿಸಿರುವ ಬಗ್ಗೆ.
1) ಸಂಸ್ಥೆ : ಜಿಲ್ಲಾ ಶಸ್ತ್ರಚಿಕಿತ್ಸಕರು, ಜಿಲ್ಲಾ ಆಸ್ಪತ್ರೆ, ಯಾದಗಿರಿ, 2) ವಿವರ : ಹೊರಗುತ್ತಿಗೆ ನೌಕರರು ಒಟ್ಟು : 24, 3) ಒಟ್ಟು ಮೊತ್ತ ರೂ. 50,00,928/– ಟೆಂಡರ ಪ್ರಕ್ರಿಯೆ ವಿವರ : 1) ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರನ್ನು ದಿನಾಂಕ : 12–05–2021 ರಿಂದ 03–06–2021 ರವರೆಗೆ ಪಡೆಯಬಹುದಾಗಿದೆ. 2) ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಸ್ವೀಕರಿಸುವ (ಅಪ್‌ಲೋಡ್) ಕೊನೆಯ ದಿನಾಂಕ : 03–06–2021. ಸಮಯ ಸಾಯಂಕಾಲ 4–00 ಗಂಟೆಗೆ, 3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 05–06–2021 ರಂದು ಬೆಳಿಗ್ಗೆ 11–00 ಗಂಟೆಗೆ, 4) ಆರ್ಥಿಕ ಬಿಡ್ ತೆರೆಯುವ ದಿನಾಂಕ : 07–06–2021 ರಂದು ಬೆಳಿಗ್ಗೆ 11–30 ಗಂಟೆಗೆ.
ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ನೋಂದಾಯಿಸಿದ ಟೆಂಡರ್‌ದಾರರು ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಲು ಅರ್ಹರಾಗಿರುತ್ತಾರೆ. ಟೆಂಡರ್ ಮಾಹಿತಿಯನ್ನು https://www.eproc.karnataka.gov.in ನಲ್ಲಿ ಪಡೆಯಬಹುದಾಗಿದೆ. ಹೆಚ್ಚಿನ ವಿವರಗಳಿಗಾಗಿ ಕಛೇರಿ ಸಮಯದಲ್ಲಿ ಈ ಕೆಳಗೆ ಸಹಿ ಮಾಡಿದ ಅಧಿಕಾರಿಗಳನ್ನು ಖುದ್ದಾಗಿ ಅಥವಾ ದೂರವಾಣಿ ಸಂಖ್ಯೆ : 08473–252434 ನಲ್ಲಿ ಸಂಪರ್ಕಿಸಬಹುದು.
ಸಹಿ/– ಜಿಲ್ಲಾ ಶಸ್ತ್ರಚಿಕಿತ್ಸಕರು,
ಜಿಲ್ಲಾ ಆಸ್ಪತ್ರೆ, ಯಾದಗಿರಿ
ವಾ.ಸಾ.ಸಂ.ಇ/ಯಾದಗಿರಿ/40/ಎಂಸಿ&ಎ/2021–22

ಜಿಲ್ಲಾಧಿಕಾರಿಗಳ ಕಾರ್ಯಾಲಯ, ಬಳ್ಳಾರಿ
ಸಂಖ್ಯೆ: ಇತರೆ: 2021–22 ದಿನಾಂಕ: 16–05–2021
ಪತ್ರಿಕಾ ಪ್ರಕಟಣೆ
ಜಿಲ್ಲಾ ಆಡಳಿತ, ಬಳ್ಳಾರಿಯಿಂದ ಕೋವಿಡ್–19 ಸಾಂಕ್ರಾಮಿಕ ರೋಗವನ್ನು ತಡೆಗಟ್ಟುವ ಹಿನ್ನಲೆಯಲ್ಲಿ ಹಾಗೂ ಕೋವಿಡ್ ರೋಗಿಗಳಿಗೆ ಉತ್ತಮ ಮತ್ತು ಪರಿಣಾಮಕಾರಿ ಚಿಕಿತ್ಸೆಯನ್ನು ನೀಡುವ ಹಿನ್ನಲೆಯಲ್ಲಿ ಸಂಡೂರು ತಾಲೂಕಿನ ತೋರಣಗಲ್ಲು ಇಲ್ಲಿ 1000 ಹಾಸಿಗೆ ಕೋವಿಡ್ ಆಸ್ಪತ್ರೆ ಆರಂಭಿಸಲಾಗಿದ್ದು, ಸದರಿ ಆಸ್ಪತ್ರೆಯಲ್ಲಿ ಕಾರ್ಯನಿರ್ವಹಿಸಲು ವೈದ್ಯರು / ತಜ್ಞ ವೈದ್ಯರು ಅಗತ್ಯವಿದ್ದು ಈ ಹಿನ್ನಲೆಯಲ್ಲಿ 1000 ಹಾಸಿಗೆ ಕೋವಿಡ್ ಆಸ್ಪತ್ರೆ ತೋರಣಗಲ್ಲು ಇಲ್ಲಿ ಈ ಹುದ್ದೆಗಳನ್ನು ತಾತ್ಕಾಲಿಕವಾಗಿ ಗುತ್ತಿಗೆ ಆಧಾರದ ಮೇಲೆ 11 ತಿಂಗಳ ಅವಧಿಗಾಗಿ ಮಾತ್ರ ನೇಮಕಾತಿಯನ್ನು ಮಾಡಲಾಗುತ್ತಿದ್ದು ವಿವರಗಳು ಈ ಕೆಳಕಂಡಂತೆ ಇರುತ್ತವೆ. ಅರ್ಜಿಗಳನ್ನು ದಿನಾಂಕ: 17–05–2021 ರಿಂದ 20–05–2021 ರವರೆಗೆ ಜಿಲ್ಲಾ ಆರೋಗ್ಯ ಮತ್ತು ಕು.ಕ. ಅಧಿಕಾರಿಗಳ ಕಛೇರಿ ಬಳ್ಳಾರಿ ಇವರ ಕಛೇರಿ ವೇಳೆಯಲ್ಲಿ ಮುದ್ದಾಂ ಸಲ್ಲಿಸಲು ಹಾಗೂ ಮೂಲ ದಾಖಲಾತಿಗಳನ್ನು ಪರಿಶೀಲನೆಗೆ ಹಾಜರುಪಡಿಸಲು ಸೂಚಿಸುತ್ತಾ ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ: (08392) 276250 ಅಥವಾ ಕಛೇರಿಯ ಸಹಾಯಕ ಆಡಳಿತಾಧಿಕಾರಿಗಳು ಇವರ ದೂರವಾಣಿ ಸಂಖ್ಯೆಗೆ 8951656265 ಸಂಪರ್ಕಿಸಬಹುದು ಮತ್ತು ನೇಮಕಾತಿ ಹೊಂದಿ ಕರ್ತವ್ಯ ನಿರ್ವಹಿಸುವವರಿಗೆ ವಸತಿ ಮತ್ತು ಊಟದ ವ್ಯವಸ್ಥೆಯನ್ನು ಕಲ್ಪಿಸಲಾಗುತ್ತದೆ.
1000 ಹಾಸಿಗೆ ಕೋವಿಡ್ ಆಸ್ಪತ್ರೆ ತೋರಣಗಲ್ಲು ಇಲ್ಲಿಗೆ ಅವಶ್ಯವಿರುವ ಹುದ್ದೆಗಳು

ಕ್ರ. ಸಂ.	ಹುದ್ದೆಯ ವಿವರ	ಒಟ್ಟು ಹುದ್ದೆಗಳು	ವಿದ್ಯಾರ್ಹತೆ	ಮಾಸಿಕ ಸಂಚಿತ ವೇತನ ರೂ.
1	ಫಿಜಿಷಿಯನ್ / ಶ್ವಾಸಕೋಶ ತಜ್ಞರು (Pulmonologist / Chest Physician)	20	ಎಂ.ಬಿ.ಬಿ.ಎಸ್. ಸ್ನಾತಕೋತ್ತರ ಪದವಿ/ ಡಿಪ್ಲೋಮಾ (ಜನರಲ್ ಮೆಡಿಸಿನ್ ಅಥವಾ ತಜ್ಞತೆಗೆ ಅನುಸಾರವಾಗಿ	4,00,000/–
2	ಅರವಳಿಕೆ ತಜ್ಞರು	15	ಎಂ.ಬಿ.ಬಿ.ಎಸ್./ಸ್ನಾತಕೋತ್ತರ ಪದವಿ/ ಅಥವಾ ಡಿಪ್ಲೋಮಾ ಇನ್ ಅನಸ್ಥೇಷಿಯಾ (ತಜ್ಞತೆಗೆ ಅನುಸಾರ)	4,00,000/–
3	ವೈದ್ಯರು	30	ಎಂ.ಬಿ.ಬಿ.ಎಸ್. ಪದವೀಧರರಾಗಿರಬೇಕು	1,00,000/–

ವಿಶೇಷ ಸೂಚನೆ: 1) ಈ ನೇಮಕಾತಿಯು ಗುತ್ತಿಗೆ ಆಧಾರದ ಮೇಲೆ ಮಾತ್ರ ನೇಮಕಾತಿ ಆಗಿದ್ದು ಯಾವುದೇ ಕಾರಣಕ್ಕೂ ಖಾಯಂಗೊಳಿಸಲಾಗುವುದಿಲ್ಲ. (2) ಗುತ್ತಿಗೆ ಅವಧಿಯು 11 ತಿಂಗಳಿಗೆ ಮಾತ್ರ ಸೀಮಿತವಾಗಿರುತ್ತದೆ ಅಥವಾ ಜಿಲ್ಲಾ ಆಡಳಿತ ಒಪ್ಪಿದಲ್ಲಿ ಮುಂದುವರಿಸಲಾಗುವುದು. (3) ರಾಜ್ಯದ ಯಾವುದೇ ಜಿಲ್ಲೆಯ ಸರ್ಕಾರಿ ಆಸ್ಪತ್ರೆಗಳಲ್ಲಿ / ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಖಾಯಂ / ಗುತ್ತಿಗೆ ವೈದ್ಯರ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. (4) ನೇಮಕಾತಿ ಹೊಂದಿದ ವೈದ್ಯರುಗಳಿಗೆ ವಸತಿ ಮತ್ತು ಊಟದ ವ್ಯವಸ್ಥೆ ಇರುತ್ತದೆ.
ಸಹಿ/–
ಜಿಲ್ಲಾಧಿಕಾರಿಗಳು, ಬಳ್ಳಾರಿ

ನಿಧನ ವಾರ್ತೆ

ವಿ.ಎ. ದೇಶಪಾಂಡೆ



ಮೈಸೂರು: ಹಲವು ಗಣ್ಯರ ಪ್ರತಿಮೆ ರೂಪಿಸಿದ್ದ, ಇಲ್ಲಿನ ಚಾಮರಾಜೇಂದ್ರ ಸರ್ಕಾರಿ ದೃಶ್ಯ ಕಲಾ ಕಾಲೇಜಿನ (ಕಾವಾ) ನಿವೃತ್ತ ಡೀನ್ ವಿ.ಎ.ದೇಶಪಾಂಡೆ (66) ಶನಿವಾರ ರಾತ್ರಿ ನಿಧನರಾದರು.

ಕ್ಯಾನ್ಸರ್ ಪೀಡಿತರಾಗಿದ್ದ ಇವರಿಗೆ ಪತ್ನಿ, ಇಬ್ಬರು ಪುತ್ರರು ಇದ್ದಾರೆ. ಭಾನುವಾರ ಅಂತ್ಯಕ್ರಿಯೆ ನಡೆಯಿತು. ಬಾಗಲಕೋಟೆ ಜಿಲ್ಲೆ ಬಾದಾಮಿಯ ದೇಶಪಾಂಡೆ, 1983ರಲ್ಲಿ ಮೈಸೂರಿಗೆ ಬಂದು ಶಿಲ್ಪಕಲೆ ಕ್ಷೇತ್ರದಲ್ಲಿ ವಿಶೇಷ ಕೊಡುಗೆ ನೀಡಿದ್ದಾರೆ. ಮೈಸೂರು ರೈಲ್ವೆ ನಿಲ್ದಾಣದ ಎದುರಿನ ಬಾಬು ಜಗ ಜೀವನ್ ರಾಂ, ಮೈಸೂರು ವಿಶ್ವವಿದ್ಯಾಲಯದ ಹೆಬ್ಬಾಗಿಲಿನ ಎದುರಿನ ಕುವೆಂಪು, ಕುವೆಂಪುನಗರದ ವಿಶ್ವಮಾನವ ಉದ್ಯಾನದಲ್ಲಿನ ಕುವೆಂಪು, ಡಾ.ರಾಜ್‌ಕುಮಾರ್ ಉದ್ಯಾನದ ರಾಜ್‌ಕುಮಾರ್, ಗಾಂಧಿ ವೃತ್ತ-ದಲ್ಲಿರುವ ಗಾಂಧಿ ಪ್ರತಿಮೆಗಳನ್ನು ಅವರು ನಿರ್ಮಿಸಿದ್ದರು.

ಶೋಭಾ ರಂಜೋಳಕರ್

ಕಲಬುರ್ಗಿ: ಹಿರಿಯ ರಂಗಕಲಾವಿದೆ ಹಾಗೂ ಚಿತ್ರನಟಿ ಶೋಭಾ ರಂಜೋಳಕರ್ (67) ಅವರು ಇಲ್ಲಿನ ಖಾಸಗಿ ಆಸ್ಪತ್ರೆಯಲ್ಲಿ ಭಾನುವಾರ ಹೃದಯಾಘಾತದಿಂದ ನಿಧನರಾದರು. ಅವರಿಗೆ ಇಬ್ಬರು ಪುತ್ರರು ಇದ್ದಾರೆ.

ತೆಲಂಗಾಣದ ಕೋಡಂಗಲ್‌ನವರಾದ ಶೋಭಾ ಸೇಡಂನ ರಂಜೋಳ ಗ್ರಾಮದ ಎಂಜಿನಿಯರ್ ಭೀಮರಾವ ಕುಲಕರ್ಣಿ ಅವರನ್ನು ಮದುವೆಯಾಗಿ ಕಲಬುರ್ಗಿಯಲ್ಲಿ ನೆಲೆಸಿದ್ದರು. ರಂಗ ಮಾಧ್ಯಮ ಕಲಾತಂಡ ಹಾಗೂ ಸಂಗಮೇಶ್ವರ ಮಹಿಳಾ ಮಂಡಳದಿಂದ ಹಲ ನಾಟಕಗಳನ್ನು ನಿರ್ಮಿಸಿ, ಅಭಿನಯಿಸಿದ್ದರು. ಕಳೆದ ವರ್ಷ ಕಲಬುರ್ಗಿಯ-ಲ್ಲಿ ಎಲ್ಲ 35 ಪಾತ್ರಗಳಲ್ಲಿ ಮಹಿಳೆಯರೇ ಇದ್ದ ‘ಯುದ್ಧಭಾರತ’ ನಾಟಕ ಪ್ರದರ್ಶಿಸಿದ್ದರು. ಅನೇಕ ಚಲನಚಿತ್ರಗಳಲ್ಲೂ ಅವರು ನಟಿಸಿದ್ದರು.

ಮೈನುದ್ದೀನ್ ನಬಿವಾಲೆ

ಬಾಗಲಕೋಟೆ: ಜಿಲ್ಲಾ ವಕ್ಫ್ ಬೋರ್ಡ್ ಅಧ್ಯಕ್ಷ ಮೈನುದ್ದೀನ್ ನಬಿವಾಲೆ (57) ಭಾನುವಾರ ಇಲ್ಲಿನ ಖಾಸಗಿ ಆಸ್ಪತ್ರೆಯಲ್ಲಿ ಕೋವಿಡ್‌ನಿಂದ ನಿಧನರಾದರು.

ನವನಗರದ 38ನೇ ಸೆಕ್ಟರ್ ನಿವಾಸಿಯಾದ ಅವರಿಗೆ ಪತ್ನಿ, ಇಬ್ಬರು ಪುತ್ರರು ಹಾಗೂ ಇಬ್ಬರು ಪುತ್ರಿಯರು ಇದ್ದಾರೆ. ನವನಗರದ ಖಬರಸ್ಥಾನದಲ್ಲಿ ಅಂತ್ಯಕ್ರಿಯೆ ನೆರವೇರಿತು.

ಬಾಗಲಕೋಟೆಯ ಮುಸ್ಲಿಂ ಸಮಾಜದ ಪ್ರಮುಖರಾಗಿದ್ದ ನಬಿವಾಲೆ, ಈ ಹಿಂದೆ ಬಾಗಲಕೋಟೆ ಅಂಜುಮನ್ ಸಂಸ್ಥೆಯ ಅಧ್ಯಕ್ಷರಾಗಿ, ಕಾಂಗ್ರೆಸ್ ಅಲ್ಪಸಂಖ್ಯಾತರ ಜಿಲ್ಲಾ ಘಟಕದ ಅಧ್ಯಕ್ಷರಾಗಿ ಕೆಲಸ ಮಾಡಿದ್ದರು.

ಲಿಬರಲ್ ಸೈನ್ಸ್ ವಿಜ್ಞಾನ, ಕಲೆಯ ಸಮ್ಮಿಲನ

ಇತ್ತೀಚೆಗೆ ಭಾರತದಲ್ಲಿ ಜನಪ್ರಿಯವಾಗಿರುವ ಲಿಬರಲ್ ಸೈನ್ಸ್ ವಿಜ್ಞಾನ ಮತ್ತು ಸಾಮಾಜಿಕ ವಿಜ್ಞಾನ, ಕಲಾ ವಿಷಯಗಳನ್ನು ಒಟ್ಟುಗೂಡಿಸಿ ಕಲಿಯುವ ಒಂದು ವಿಶಿಷ್ಟ ಮಾದರಿ. ಇದು ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲೂ ನೆರವಿಗೆ ಬರುತ್ತದೆ.

ಸೀಮಾ ಬಿ.ಎಸ್.

ಸ್ವಾತಂತ್ರ್ಯ ಬಂದಾಗಿನಿಂದಲೂ ಶಿಕ್ಷಣ ಕ್ಷೇತ್ರದಲ್ಲಿ ಮಹತ್ತರ ಬದಲಾವಣೆಗಳು ಆಗುತ್ತಲೇ ಬಂದಿವೆ. ಪ್ರತೀ ದಶಕದಲ್ಲೂ ಆಯಾ ಸಾಮಾಜಿಕ ಬದಲಾವಣೆಗಳಿಗೆ ಅನುಗುಣವಾಗಿ ಕಲಿಕೆ, ಕಲಿಕಾ ವಿಧಾನಗಳು ಮಾರ್ಪಾಡಾಗುತ್ತಿವೆ. 21ನೇ ಶತಮಾನದಲ್ಲಂತೂ ವಿಜ್ಞಾನ ಕ್ಷೇತ್ರದಲ್ಲಿ ಅತ್ಯಂತ ವೇಗವಾಗಿ ಅಭಿವೃದ್ಧಿ, ಸಾಧನೆ ಕಂಡುಬರುತ್ತಿದೆ. ಇಂತಹ ಸಾಧನೆಗೆ ಅಂತ್ಯವಿಲ್ಲವೇನೋ ಅನ್ನುವಷ್ಟರ ಮಟ್ಟಿಗೆ ವಿಜ್ಞಾನ ಮತ್ತು ತಂತ್ರಜ್ಞಾನ ಗಮನ ಸೆಳೆಯುತ್ತಿವೆ. ಇಂತಹ ಸಂಧರ್ಭದಲ್ಲಿ ಮಾನವೀಯ ಮೌಲ್ಯಗಳನ್ನು ಕಳೆದುಕೊಳ್ಳದೇ, ಸಾಧನೆಯನ್ನೂ ಬಿಡದೆ, ಇವೆರಡನ್ನೂ ಸರಿದೂಗಿಸಿಕೊಂಡು ಹೋಗುವ ಮನೋಸ್ಥೈರ್ಯ ಹಾಗೂ ಉನ್ನತ ಶಿಕ್ಷಣವನ್ನು ನಮ್ಮ ಮುಂದಿನ ಪೀಳಿಗೆಗೆ ನೀಡಬೇಕಿದೆ. ಇದು ಲಿಬರಲ್ ಸೈನ್ಸ್ ಶಿಕ್ಷಣದಿಂದ ಸಾಧ್ಯವಾಗುತ್ತಿದೆ ಎನ್ನಬಹುದು.

ಲಿಬರಲ್ ಸೈನ್ಸ್‌ನಲ್ಲಿ ಮುಖ್ಯವಾಗಿ ಸಾಹಿತ್ಯ, ಇತಿಹಾಸ, ಭಾಷೆ, ಫಿಲಾಸಫಿ, ಗಣಿತ ಮತ್ತು ಜನರಲ್ ಸೈನ್ಸ್ ವಿಷಯಗಳಿರುತ್ತವೆ. ಇದರ ಜೊತೆ ಕೆಲವು ಕಡೆ ಮನಶ್ಶಾಸ್ತ್ರ, ಖಗೋಳ ಶಾಸ್ತ್ರ, ಸಂಗೀತವನ್ನೂ ಸೇರಿಸಲಾಗಿದೆ. ಮುಖ್ಯವಾಗಿ ವಿದ್ಯಾರ್ಥಿಗೆ ತನಗೆ ಬೇಕಾದ ವಿಷಯಗಳನ್ನು ಆಯ್ಕೆ ಮಾಡುವ ಸ್ವಾತಂತ್ರ್ಯವಿರುತ್ತದೆ. ಅಂದರೆ ಬಯಾಲಜಿಕಲ್ ಸೈನ್ಸ್, ಫಿಸಿಕಲ್ ಸೈನ್ಸ್, ಸೋಷಿಯಲ್ ಸೈನ್ಸ್ ಅಲ್ಲದೇ ಹ್ಯೂಮಾನಿಟೀಸ್‌ನಲ್ಲಿರುವ ವಿಷಯಗಳನ್ನು ಆಯ್ಕೆ ಮಾಡಿಕೊಳ್ಳಬಹುದು. ವಿದೇಶಿ ಕಾಲೇಜುಗಳು ಮತ್ತು ವಿಶ್ವವಿದ್ಯಾಲಯಗಳಲ್ಲಿ ಲಭ್ಯವಿದ್ದ ಈ ಪದವಿ ಮತ್ತು ಸ್ನಾತಕೋತ್ತರ ಕೋರ್ಸ್‌ಗಳು ಈಗ ಬೆಂಗಳೂರು ಸೇರಿದಂತೆ ದೇಶದ ವಿವಿಧ ಕಾಲೇಜುಗಳು ಮತ್ತು ವಿಶ್ವವಿದ್ಯಾಲಯಗಳಲ್ಲಿ ಕೂಡ ಲಭ್ಯ.

ಲಿಬರಲ್ ಸೈನ್ಸ್‌ನಲ್ಲಿ ಪದವಿ ಪಡೆದವರು ಪತ್ರಕರ್ತ, ಕಾಪಿ ರೈಟರ್, ಮ್ಯಾನೇಜರ್, ಎಚ್‌ಆರ್, ಗ್ರಂಥಾಲಯ ಅಧಿಕಾರಿಯಾಗಿಯಲ್ಲದೇ, ಜಾಹೀರಾತು ಕಂಪನಿಯಲ್ಲಿ, ತಂತ್ರಜ್ಞಾನ ಕಂಪನಿಯಲ್ಲಿ ಉದ್ಯೋಗಿಯಾಗಿ, ಕಾಲೇಜು ಶಿಕ್ಷಕರಾಗಿ ವೃತ್ತಿಗೆ ಸೇರಬಹುದು.

ಏನಿದು ಲಿಬರಲ್ ಸೈನ್ಸ್?

ವಿಜ್ಞಾನ ಮತ್ತು ಸಾಮಾಜಿಕ ವಿಜ್ಞಾನ, ಕಲಾ ವಿಷಯಗಳನ್ನು ಒಟ್ಟುಗೂಡಿಸಿ ಕಲಿಯುವ ಒಂದು ವಿಶಿಷ್ಟ ಮಾದರಿ ಈ ಲಿಬರಲ್ ಸೈನ್ಸ್. ವಿಜ್ಞಾನದ ವಿಷಯಗಳನ್ನು ಸಾಮಾಜಿಕ ವಿಜ್ಞಾನ ವಿಷಯಗಳೊಂದಿಗೆ ಸೇರಿಸಿ, ಒಂದು ವಿಷಯದಿಂದ ಇನ್ನೊಂದು ವಿಷಯಕ್ಕೆ ಇರುವ ಕೊಡು ಕೊಳ್ಳುವಿಕೆಯನ್ನು ಅರಿತು, ಉತ್ತಮ ಭಾಷಾ ಪ್ರಾವೀಣ್ಯತೆ, ವಿಮರ್ಶಾತ್ಮಕ ಚಿಂತನೆ, ವಿಶ್ಲೇಷಣಾತ್ಮಕ ತಾರ್ಕಿಕತೆ, ಉತ್ತಮ ಬರಹ ಹೀಗೆ ಜೀವನಕ್ಕೆ ಅಗತ್ಯವಿರುವ ಎಲ್ಲಾ ಕೌಶಲಗಳನ್ನು ಬೆಳೆಸಿಕೊಳ್ಳಲು ಬಲವಾದ ಅಡಿಪಾಯವನ್ನು ನೀಡುವ ಶಿಕ್ಷಣವೇ ಈ ಲಿಬರಲ್ ಸೈನ್ಸ್.

ಒಂದು ಕಾಲದಲ್ಲಿ ಮೂಲೆಗುಂಪಾಗಿ ಉಳಿದ ಲಿಬರಲ್ ಶಿಕ್ಷಣ ಇಂದು ಮುಖ್ಯವಾಗಿ ವಿಜ್ಞಾನ ಕ್ಷೇತ್ರದಲ್ಲಿ ಎಲ್ಲಿಲ್ಲದ ಬೇಡಿಕೆ ಪಡೆದಿದೆ. 2009 ರಿಂದ ಈಚೆಗೆ ಎಂಜಿನಿಯರಿಂಗ್ ಓದಿರುವ ಕೋಡಿಂಗ್, ಪ್ರೋಗ್ರಾಮಿಂಗ್.. ಹೀಗೆ ಟೆಕ್ನಾಲಜಿ ಓದಿರುವವರಿಗೆ ಮಾತ್ರ ಬೇಡಿಕೆ ಹೆಚ್ಚಿತ್ತು, ಆದರೀಗ ಕೆಲಸ ಮಾಡಲು ಕೇವಲ ಮಷೀನ್‌ನಂತೆ ಕೇಳುವ ಅಥವಾ ಕೋಡ್ ಬರೆಯುವ ಕೌಶಲವಿದ್ದರೆ ಸಾಲದು, ಜೊತೆಗೆ ಉತ್ಪಾದಿಸುವ ಉತ್ಪನ್ನ ಅಥವಾ ಎಂಡ್ ಪ್ರಾಡಕ್ಟ್ ಜನರಿಗೆ ಅನುಕೂಲವೋ ಅಥವಾ ಅನಾನುಕೂಲವೋ ಎಂದು 360 ಕೋನದಲ್ಲಿ ವಿಮರ್ಶಿಸುವ ನಿಪುಣರು ಬೇಕು ಎನ್ನುವುದು ಖ್ಯಾತ ಕಂಪನಿಗಳ ಸಿಇಒ ಗಳ ಅಭಿಪ್ರಾಯ. ಇದು ಸಾಧ್ಯವಾಗುವುದು ಲಿಬರಲ್ ಸೈನ್ಸ್ ಶಿಕ್ಷಣದಿಂದ.

ಕೃತಕ ಬುದ್ಧಿಮತ್ತೆ ಅಳವಡಿಕೆಯಲ್ಲಿ ಲಿಬರಲ್ ಸೈನ್ಸ್

‘ಹೇ ಗೂಗಲ್, ಹೇ ಅಲೆಕ್ಸಾ…’ ಇವೆಲ್ಲ ಚಿಕ್ಕ ಮಗುವಿಗೂ ಚಿರಪರಿಚಿತ. ಕೂತಲ್ಲೇ ಎಲ್ಲಾ ಕಾರ್ಯಗಳನ್ನು ಮಾಡುವ ಈ ಯಂತ್ರಗಳು ನಡೆಯುವುದೇ ಕೃತಕ ಬುದ್ಧಿಮತ್ತೆಯಿಂದ. ಇದು ನಮ್ಮ ಜೀವನದ ಪ್ರತಿಯೊಂದರಲ್ಲೂ ಹಾಸುಹೊಕ್ಕಾಗಲು ಸಿದ್ಧಗೊಳ್ಳುತ್ತಿದೆ. ಇದಕ್ಕೆ ಗಣಿತ ಮತ್ತು ಎಂಜಿನಿಯರಿಂಗ್ ಓದಿದ ನಿಪುಣರ ಜೊತೆಗೆ ಲಿಬರಲ್ ಸೈನ್ಸ್ ಅಂಡ್ ಆರ್ಟ್ಸ್ ಓದಿಕೊಂಡಿರುವ ಪದವೀಧರರೂ ಅಗತ್ಯವಿದ್ದಾರೆ ಎನ್ನುವುದು ಮೈಕ್ರೊಸಾಫ್ಟ್ ಸೇರಿ ಹಲವು ಕಂಪನಿಗಳ ಸಿಇಒಗಳ ಅಭಿಪ್ರಾಯ.

ಇನ್ನು ಈಗಾಗಲೇ ಜನಪ್ರಿಯವಾಗಿರುವ ಸ್ವಯಂ ಚಾಲಿತ ಕಾರ್‌ಗಳು ತಂತ್ರಜ್ಞಾನದ ಜೊತೆಗೆ, ಕಾರ್ ಓಡುವಾಗ ಪ್ರಯಾಣಿಕರ ಅಥವಾ ಪಾದಚಾರಿಗಳ ಜೀವನ ಮುಖ್ಯವೋ ಎಂಬಂತಹ ನೈತಿಕ ನಿರ್ಧಾರವನ್ನು ತೆಗೆದುಕೊಳ್ಳುವ ಸಾಮರ್ಥ್ಯವನ್ನು ಹೊಂದಿವೆ. ಅಂತಹ ಕೃತಕ ಬುದ್ಧಿಮತ್ತೆಯನ್ನು ಅಭಿವೃದ್ಧಿಪಡಿಸುವಲ್ಲಿ ನೈತಿಕ ಸಿದ್ಧಾಂತಗಳ ಜ್ಞಾನ ಅತ್ಯಗತ್ಯ. ಆದರೆ ತತ್ವ– ಚಿಂತನೆಗಳನ್ನು ಕಾರ್ಯಗತಗೊಳಿಸಲು ಕಂಪ್ಯೂಟರ್ ವಿಜ್ಞಾನದ ಜ್ಞಾನದ ಅಗತ್ಯವಿದೆ ಎಂಬುದು ಏಟ್ರಿಯಾ ಲಿಬರಲ್ ಸೈನ್ಸ್ ವಿಶ್ವವಿದ್ಯಾಲಯದ ಸಿಇಒ ಶಹೀಮ್ ರಹಿಮಾನ್ ಅಭಿಪ್ರಾಯ.

ಭಾಷೆ, ಕಲೆ, ಇತಿಹಾಸ, ಅರ್ಥಶಾಸ್ತ್ರ, ನೀತಿಶಾಸ್ತ್ರ, ತತ್ವಶಾಸ್ತ್ರ, ಮನೋವಿಜ್ಞಾನ ಮತ್ತು ಮಾನವ ಅಭಿವೃದ್ಧಿ ಕೋರ್ಸ್‌ಗಳು, ವಿಮರ್ಶಾತ್ಮಕ, ತಾತ್ವಿಕ ಮತ್ತು ನೈತಿಕತೆ ಆಧಾರಿತ ಕೌಶಲಗಳು ಕೃತಕ ಬುದ್ಧಿಮತ್ತೆಗೆ ಸಂಬಂಧಿಸಿದ ಸಮಸ್ಯೆಗಳ ಪರಿಹಾರ, ಅಭಿವೃದ್ಧಿ ಮತ್ತು ನಿರ್ವಹಣೆಗೆ ಸಹಕಾರಿಯಾಗಬಲ್ಲವು ಎಂದು ‘ದಿ ಫ್ಯೂಚರ್ ಕಂಪ್ಯೂಟೆಡ್’ ಎಂಬ ಪುಸ್ತಕದಲ್ಲಿ ಉಲ್ಲೇಖವಾಗಿದೆ.

ಕೇವಲ ಎಐ ಮಾತ್ರವಲ್ಲದೆ ಐಒಟಿ, ನ್ಯಾನೋ ಟೆಕ್ನಾಲಜಿ, ಎಆರ್/ವಿಆರ್, ರೊಬೊಟಿಕ್ಸ್... ಹೀಗೆ ಪ್ರತೀ ತಂತ್ರಜ್ಞಾನವನ್ನೂ ಗ್ರಾಹಕರಿಗೆ ಅನುಗುಣವಾಗುವಂತೆ ನಿರ್ಮಿಸಿದಾಗ ಮಾತ್ರ ಸಮಾಜದಲ್ಲಿರುವ ಸಮಸ್ಯೆಗಳು ಬಗೆಹರಿಯಲು ಸಾಧ್ಯ. ಹೀಗಾಗಿ ವಿಜ್ಞಾನ ಹಾಗೂ ವಿಜ್ಞಾನೇತರ ವಿಷಯಗಳ ಸಮ್ಮಿಲನ ಈಗಿನ ಅಗತ್ಯವಾಗಿದೆ.

(ಲೇಖಕಿ: ಸಹಾಯಕ ನಿರ್ದೇಶಕಿ, ಅಕಾಡೆಮಿಕ್ ವಿಭಾಗ, ಏಟ್ರಿಯಾ ವಿಶ್ವವಿದ್ಯಾಲಯ, ಬೆಂಗಳೂರು)

ಗಣಿತ, ವಿಜ್ಞಾನದ ಕಲಿಕೆ ಹೇಗೆ?

ಕೋಕಿಲಾ ಎಂ.ಎಸ್.

ಅಮ್ಮನಿಗೆ ಅಡುಗೆಯಲ್ಲಿ ಸಹಾಯ ಮಾಡುವಾಗ ಚಿಂಟುವಿನ ಕೈಯಲ್ಲಿದ್ದ ಮೊಟ್ಟೆ ಆಕಸ್ಮಿಕವಾಗಿ ಕೈಜಾರಿ ಕೆಳಗೆ ಬಿತ್ತು. ಮೊಟ್ಟೆ ಹಾಳಾಗಿದ್ದರಿಂದ ಕೆಲಸ ದುಪ್ಪಟ್ಟಾಯಿತಲ್ಲ ಎನ್ನುವ ಕಾರಣದಿಂದ ಅಮ್ಮನ ಕೋಪ ನೆತ್ತಿಗೇರಿತು. ತಕ್ಷಣವೇ ಆದ ಬೈಗುಳದ ಸುರಿಮಳೆ ಆರು ವರ್ಷದ ಚಿಂಟುವಿನ ಉತ್ಸಾಹಕ್ಕೆ ತಣ್ಣೀರೆರಚಿತ್ತು.

ಮಕ್ಕಳು ತಪ್ಪು ಮಾಡಿದಾಗ ಸಾಮಾನ್ಯವಾಗಿ ಬಹಳಷ್ಟು ಪೋಷಕರು ಮಾಡುವ ಕೆಲಸ ತಕ್ಷಣಕ್ಕೆ ಕೋಪಗೊಳ್ಳುವುದು. ಒಡೆದ ಮೊಟ್ಟೆಯನ್ನು ಮೊದಲಿನಂತೆ ಮಾಡಲು ಸಾಧ್ಯವಿಲ್ಲ, ನಿಜ. ಆದರೆ ಅದರಿಂದ ಖಂಡಿತವಾಗಿ ಮಗುವಿನಲ್ಲಿ ವಿಜ್ಞಾನದೆಡೆಗೆ ಆಸಕ್ತಿಯನ್ನು ಮೂಡಿಸಬಹುದು. ಉದಾಹರಣೆಗೆ ಮೊಟ್ಟೆಯ ಹೊರಗಿನ ಬಿಳಿಯ ಕವಚ, ಹಳದಿ ಭಾಗ (ಯೋಕ್) ಭ್ರೂಣವಾಗುವ ಪರಿ, ಅದರಲ್ಲಿ ಅಡಗಿರುವ ಪ್ರೊಟೀನ್ ಅಂಶ.. ಹೀಗೆ ಸಾಕಷ್ಟನ್ನು ಮಕ್ಕಳಿಗೆ ವಿವರಿಸುವ ಮೂಲಕ ಅವರಲ್ಲಿ ಆಸಕ್ತಿ ಮತ್ತು ಕುತೂಹಲವನ್ನು ಬೆಳೆಸಬಹುದು. ಆಗ ಬಹುಶಃ ನಮ್ಮ ಮಕ್ಕಳಿಗೆ ಗಣಿತ, ವಿಜ್ಞಾನವೆಂದರೆ ಬಹಳ ಕಷ್ಟದ ವಿಷಯ ಎನ್ನುವ ಸಮಸ್ಯೆ ಬಗೆಹರಿಯಬಹುದು.

ರಾಷ್ಟ್ರೀಯ ವಿಜ್ಞಾನ ಪ್ರತಿಷ್ಠಾನದ (ನ್ಯಾಷನಲ್ ಸೈನ್ಸ್ ಫೌಂಡೇಷನ್) ಶಿಕ್ಷಣ ತಜ್ಞರ ಪ್ರಕಾರ, ‘ಚಿಕ್ಕಮಕ್ಕಳಲ್ಲಿರುವ ಕುತೂಹಲ ಮತ್ತು ಎಲ್ಲವನ್ನೂ ಪರೀಕ್ಷಿಸಿ ಹೊಸತನ್ನು ಹುಡುಕುವ ಗುಣ ನೈಸರ್ಗಿಕವಾಗಿಯೇ ಅವರನ್ನು ಗಣಿತತಜ್ಞರು ಮತ್ತು ವಿಜ್ಞಾನಿಗಳನ್ನಾಗಿಸಿದೆ’. ಆದರೆ ಬೆಳೆಯುತ್ತಾ ಆ ಆಸಕ್ತಿ ಕಡಿಮೆಯಾಗುತ್ತದೆ. ಇನ್ನು ಅಮೆರಿಕದಲ್ಲಿ ನಡೆಸಿದ ಸಮೀಕ್ಷೆಯ ಪ್ರಕಾರ ನೂರರಲ್ಲಿ ಕೇವಲ ಇಪ್ಪತ್ತಾರು ಮಕ್ಕಳು ಮಾತ್ರ ವಿಜ್ಞಾನ ಮತ್ತು ಗಣಿತದಲ್ಲಿ ಆಸಕ್ತಿ ಉಳ್ಳವರಾಗಿರುತ್ತಾರಂತೆ. ಇದಕ್ಕೆ ಕಾರಣ, ಭಾಷಾವಾರು ವಿಷಯಗಳಂತೆ ನಾವದನ್ನು ಕಥೆಗಳ ಮೂಲಕ ಮನಸ್ಸಿಗೆ ತಟ್ಟುವಂತೆ ಹೇಳದೆ ಇರುವುದು. ಹೌದು ಗಣಿತದ ಸೂತ್ರಗಳಿರಲಿ ಅಥವಾ ವಿಜ್ಞಾನದ ವ್ಯಾಖ್ಯಾನಗಳಿರಲಿ ನೇರವಾಗಿಯೇ ಹೇಳಿಕೊಟ್ಟು ಕಂಠಪಾಠ ಮಾಡಿಸಿಬಿಡುತ್ತೇವೆ. ಅರ್ಥವಾಗದ ಪರಿಕಲ್ಪನೆ ಹೆಚ್ಚು ದಿನ ಮೆದುಳಲ್ಲಿ ಉಳಿಯುವುದಾದರೂ ಹೇಗೆ?

ವಿಜ್ಞಾನದೆಡೆಗೆ ಕುತೂಹಲ ಹುಟ್ಟಿಸುವುದು ಹೇಗೆ?

1. ಮಕ್ಕಳು ಕೇಳುವ ಪ್ರಶ್ನೆಗಳಿಗೆ ತಾಳ್ಮೆಯಿಂದ ವಿವರಿಸಿ. ದೊಡ್ಡವರೆಂದ ಮಾತ್ರಕ್ಕೆ ಎಲ್ಲವೂ ಗೊತ್ತಿರಲೇಬೇಕೆಂದಿಲ್ಲ. ಗೊತ್ತಿಲ್ಲದ್ದನ್ನು ತಿಳಿದು ವಿವರಿಸಿ. ಪ್ರಶ್ನಿಸುವ ಪ್ರವೃತ್ತಿ ನಿಮ್ಮ ಮಗುವಿನದ್ದಾಗಿರದಿದ್ದರೆ ನೀವೇ ಮುತುವರ್ಜಿವಹಿಸಿ ವಿವರಿಸಲು ಶುರುಮಾಡಿ. ಆಗ ಮಗು ನಿಧಾನವಾಗಿ ಪ್ರಶ್ನಿಸಲು ಪ್ರಾರಂಭಿಸುತ್ತದೆ.
2. ಮಗುವಿನೊಟ್ಟಿಗೆ ಹೊರಗಡೆ ಓಡಾಡುವಾಗ ಕಣ್ಣಿಗೆ ಕಾಣಿಸಿದ ಒಂದೆರಡು ವಸ್ತುಗಳನ್ನೋ, ಗಿಡಗಳನ್ನೋ ತೋರಿಸಿ ಅದೇನೆಂದು ತಿಳಿಸಿ. ಮತ್ತೆ ಮಗುವಿಗೆ ಅದೇ ರೀತಿ ಹೇಳಲು ಹೇಳಿ.
3. ನೀವು ಹೇಳಿದ್ದನ್ನು ಮಗು ಕಲಿಯುವುದಕ್ಕಿಂತ ನೀವು ಮಾಡುವುದನ್ನು ಮಗು ವೇಗವಾಗಿ ಮತ್ತು ನಿಖರವಾಗಿ ಕಲಿಯುತ್ತದೆ. ಹಾಗಾಗಿ ಇದು ಮಾಡು, ಅದು ಮಾಡು ಎನ್ನುವುದಕ್ಕಿಂತ ನೀವೂ ಅವರೊಟ್ಟಿಗೆ ಕೂತು ಮಾಡುವುದು ಒಳ್ಳೆಯದು.
4. ಸಾಧ್ಯವಾದಷ್ಟೂ ಶಾಲೆಯಲ್ಲಿ ಕೊಟ್ಟ ವಿಜ್ಞಾನ ಪ್ರಾಜೆಕ್ಟ್‌ಗಳನ್ನು ನಿಮ್ಮ ಮಗುವಿನಿಂದಲೇ ಮಾಡಿಸಿ. ನಿಮ್ಮ ಸಂಪೂರ್ಣ ಸಹಾಯವಿರಲಿ. ಆದರೆ ಹೊರಗಿನಿಂದ ಮಾಡಿಸಿ ತರುವುದು ಅಥವಾ ಅಂಗಡಿಯಿಂದ ರೆಡಿ ಇರುವುದನ್ನು ತರುವುದು ಸಲ್ಲ. ಮಗು ಬೆಳೆಯುತ್ತಾ ಅದನ್ನೇ ಮುಂದುವರೆಸುತ್ತದೆ.
5. ಪೋಷಕರೊಟ್ಟಿಗೆ ಕೂತು ಚಿತ್ರಗಳನ್ನು ಬರೆಯುವುದೆಂದರೆ ಮಕ್ಕಳಿಗೆ ಇಷ್ಟ. ಇದನ್ನು ಅವರಲ್ಲಿ ವಿಜ್ಞಾನದ ಆಸಕ್ತಿ ಹೆಚ್ಚಿಸಲು ಸುಲಭವಾಗಿ ಬಳಸಿಕೊಳ್ಳಬಹುದು. ಸಸ್ಯಗಳ, ಮರಗಳ, ಪ್ರಾಣಿ– ಪಕ್ಷಿಗಳ ಚಿತ್ರ ಬರೆದಿದ್ದರೆ ಅದರ ಭಾಗಗಳನ್ನು ಗುರುತಿಸುವ ಚಟುವಟಿಕೆ ಮಾಡಿಸಿ.
6. ಗಣಿತವನ್ನು ಅಂಕಿಗಳಂತೆ ಹೇಳಿಕೊಡದೆ ಮಗುವಿಗೆ ಇಷ್ಟವಾಗುವ ವಸ್ತುಗಳಿಗೆ ಅಂಕಿಗಳನ್ನು ಸೇರಿಸಿ ಹೇಳಿಕೊಡಿ. ಮಗು ಬೇಗನೇ ಕಲಿಯುತ್ತದೆ. ‘ನಿನ್ನಲ್ಲಿರುವ ಒಂದು ಸೇಬಿಗೆ ನನ್ನಲ್ಲಿರುವ ನಾಲ್ಕು ಸೇಬು ಸೇರಿಸಿದರೆ ಎಷ್ಟಾಯಿತು?’ ಎಂದರೆ ಮಗು ಕ್ಷಣಾರ್ಧದಲ್ಲಿ ‘ಐದು ಸೇಬುಗಳು’ ಎನ್ನುತ್ತದೆ. ಅದನ್ನೆ ನೀವು ಒಂದಕ್ಕೆ ನಾಲ್ಕನ್ನು ಕೂಡು ಅಂದರೆ ಮಗುವಿಗೆ ಮೊದಮೊದಲು ಕಷ್ಟವಾಗಬಹುದು.
7. ಮಗ್ಗಿ ಗೊತ್ತಿದ್ದರೆ ಎಂತಹ ಗಣಿತದ ಸಮಸ್ಯೆಯನ್ನಾದರೂ ಬಿಡಿಸಬಹುದು. ಆದರೆ ಮಕ್ಕಳು ಇಂದು ಕಲಿತ ಮಗ್ಗಿಯನ್ನು ನಾಳೆ ಮರೆತಿರುತ್ತಾರೆ. ಹಾಗಾಗಿ ಮಕ್ಕಳಿಗೆ ಮಗ್ಗಿಯ ಮಹತ್ವ ತಿಳಿಸಿ.

(ಲೇಖಕಿ: ತುಮಕೂರಿನ ವಿಶ್ವವಿದ್ಯಾಲಯ ಕಲಾ ಕಾಲೇಜಿನಲ್ಲಿ ಪ್ರಾಧ್ಯಾಪಕಿ)

ವಿದ್ಯಾರ್ಥಿ ವೇತನ ಕೈಪಿಡಿ

ಐಐಎಂ ಅಹಮದಾಬಾದ್ ಸೆಂಟರ್ ಫಾರ್ ಟ್ರಾನ್ಸ್‌ಪೋರ್ಟೇಶನ್ ಅಂಡ್ ಲಾಜಿಸ್ಟಿಕ್ಸ್ ಪೋಸ್ಟ್ ಡಾಕ್ಟೋರಲ್ ಫೆಲೋಶಿಪ್ 2021

ವಿವರ: ಅಹಮದಾಬಾದ್‌ನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್, ಪಿಎಚ್‌ಡಿ ಪದವೀಧರರಿಂದ ಸೆಂಟರ್ ಫಾರ್ ಟ್ರಾನ್ಸ್‌ಪೋರ್ಟೇಶನ್ ಅಂಡ್ ಲಾಜಿಸ್ಟಿಕ್ಸ್‌ನಲ್ಲಿ ಪೋಸ್ಟ್-ಡಾಕ್ಟೋರಲ್ ಫೆಲೋಶಿಪ್ 2021ಕ್ಕೆ ಅರ್ಜಿಗಳನ್ನು ಆಹ್ವಾನಿಸಿದೆ.

ಅರ್ಹತೆ: ಭಾರತ ಅಥವಾ ವಿದೇಶದಲ್ಲಿರುವ ಹೆಸರಾಂತ ವಿಶ್ವವಿದ್ಯಾಲಯದಿಂದ ಟ್ರಾನ್ಸ್‌ಪೋರ್ಟೇಶನ್ ಅಥವಾ ಲಾಜಿಸ್ಟಿಕ್ಸ್ ವಿಷಯದಲ್ಲಿ ಪಿಎಚ್‌ಡಿ ಪಡೆದ ಅಭ್ಯರ್ಥಿಗಳು ಈ ಫೆಲೋಶಿಪ್‌ಗೆ ಅರ್ಹರು.

ಆರ್ಥಿಕ ನೆರವು: ವಿಶ್ವವಿದ್ಯಾಲಯಗಳ ನಿಯಮಗಳಿಗೆ ಅನುಗುಣವಾಗಿ

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: ಮೇ 31, 2021

ಹೆಚ್ಚಿನ ಮಾಹಿತಿಗೆ: www.b4s.in/praja/APF8

ಎನ್‌ಐಯುಎ ಇಂಟರ್ನ್ ರಿಸರ್ಚ್ ಅಸಿಸ್ಟೆಂಟ್‌ಶಿಪ್ 2021

ವಿವರ: ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಅರ್ಬನ್ ಅಫೇರ್ಸ್ ನವದೆಹಲಿ ಸ್ನಾತಕೋತ್ತರ ಅಥವಾ ಪದವಿ ಪಡೆದವರಿಂದ ಇಂಟರ್ನ್ - ರಿಸರ್ಚ್ ಅಸಿಸ್ಟೆಂಟ್‌ಶಿಪ್ 2021ಗೆ ಅರ್ಜಿಗಳನ್ನು ಆಹ್ವಾನಿಸುತ್ತದೆ. ಫೆಲೋಶಿಪ್ ಅನ್ನು ‘ಸಿಟಿಜನ್-ಸೆಂಟ್ರಿಕ್ ಸ್ಮಾರ್ಟ್ ಗವರ್ನೆನ್ಸ್ (ಸಿಸಿಎಸ್ಜಿ) - ಸಿಡಿಜಿ - ಲಿವಿಂಗ್ ಲ್ಯಾಬ್’ ಎಂಬ ಸಂಶೋಧನಾ ಯೋಜನೆಗೆ ಉದ್ದೇಶಿಸಲಾಗಿದೆ.

ಅರ್ಹತೆ: ಎಲೆಕ್ಟ್ರಿಕಲ್ ಮತ್ತು ಕಮ್ಯೂನಿಕೇಷನ್ ಎಂಜಿನಿಯರಿಂಗ್, ಕಂಪ್ಯೂಟರ್ ಸೈನ್ಸ್, ದೂರಸಂಪರ್ಕ ಎಂಜಿನಿಯರಿಂಗ್, ನಗರ ಯೋಜನೆ, ವಾಸ್ತುಶಿಲ್ಪ, ಅರ್ಥಶಾಸ್ತ್ರ, ಅಭಿವೃದ್ಧಿ ಅಧ್ಯಯನಗಳು ಅಥವಾ ಇತರ ನಿಕಟ ಸಂಬಂಧಿತ ಕ್ಷೇತ್ರಗಳಲ್ಲಿ ಪದವಿ ಅಥವಾ ಸ್ನಾತಕೋತ್ತರ ಪದವಿ ಪಡೆದ ಅಭ್ಯರ್ಥಿಗಳು ಫೆಲೋಶಿಪ್‌ಗೆ ಅರ್ಹರು. ಅವರು 0-2 ವರ್ಷಗಳ ಕೆಲಸದ ಅನುಭವದೊಂದಿಗೆ ಇತ್ತೀಚಿನ ಪದವಿ ಪಡೆದಿರಬೇಕು

ಆರ್ಥಿಕ ನೆರವು: ತಿಂಗಳಿಗೆ ₹15,000 ಹಾಗೂ ಇತರ ಪ್ರಯೋಜನಗಳು

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 31 ಮೇ, 2021

ಅರ್ಜಿ ಸಲ್ಲಿಕೆ ವಿಧಾನ: ಆನ್‌ಲೈನ್ ಮೂಲಕ

ಹೆಚ್ಚಿನ ಮಾಹಿತಿಗೆ: www.b4s.in/praja/ANA8

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ವರ್ಗ ಸಮೀಕರಣಗಳು

(ಮುಂದುವರಿದ ಭಾಗ)

ಗಣಿತ | ಎಸ್ಸೆಸ್ಸೆಲ್ಸಿ

ಉದಾಹರಣೆ: ಒಂದು ಮೋಟಾರ್ ದೋಣಿಯ ಜವ ನಿಶ್ಚಲ ನೀರಿನಲ್ಲಿ 18 km/h ಆಗಿದೆ. ಆ ದೋಣಿಯು ಪ್ರವಾಹಕ್ಕೆ ಎದುರಾಗಿ 24 ಕಿ.ಮೀ ದೂರ ಚಲಿಸಲು ಅದು ಪ್ರವಾಹದೊಡನೆ ಮೊದಲಿನ ಸ್ಥಾನಕ್ಕೆ ಹಿಂದಿರುಗಲು ತೆಗೆದುಕೊಳ್ಳುವ ಸಮಯಕ್ಕಿಂತ ಒಂದು ಗಂಟೆ ಹೆಚ್ಚಾಗಿದೆ. ಹಾಗಾದರೆ ಪ್ರವಾಹದ ಜವವನ್ನು ಕಂಡು ಹಿಡಿಯಿರಿ.

ಪರಿಹಾರ: ಪ್ರವಾಹ ಜವವು x km/h ಆಗಿರಲಿ

ಆದ್ದರಿಂದ ಪ್ರವಾಹ ವಿರುದ್ಧ ದಿಕ್ಕಿನಲ್ಲಿ ದೋಣಿಯ ಜವ = (18-x)km/h ಮತ್ತು ಪ್ರವಾಹ ದಿಕ್ಕಿನಲ್ಲಿ ದೋಣಿಯ ಜವ = (18 + x)km/h

ಪ್ರವಾಹದ ವಿರುದ್ಧ ದಿಕ್ಕಿನಲ್ಲಿ ಚಲಿಸಲು ತೆಗೆದುಕೊಂಡ ಸಮಯ = $\frac{24}{18-x} hr$

ಅಂತೆಯೇ ಪ್ರವಾಹದ ದಿಕ್ಕಿನಲ್ಲಿ ಚಲಿಸಲು ತೆಗೆದುಕೊಂಡ ಸಮಯ: $\frac{24}{18+} hr$

$$\frac{24}{18-x} - \frac{24}{18+x} = 1$$

$$24(18+x)-24(18-x) = (18-x)\ (18+x)$$

$$x^2 + 48x - 324 = 0$$

$$a = 1, b = 48\ c = -324$$

$$x = \frac{-b \pm \sqrt{b^2 - 4ac}}{2a}$$

$$x = \frac{-48 \pm \sqrt{(-48)^2 - 4(1)(-324)}}{2\,(1)}$$

$$x = \frac{-48 \pm \sqrt{3600}}{2\,(1)}$$

$$x = \frac{-48 \pm 60}{2}$$

x ಇದು ಪ್ರವಾಹ ಜವವಾಗಿರುವುದರಿಂದ ಅದು ಋಣಾತ್ಮಕವಾಗಿರಲು ಸಾಧ್ಯವಿಲ್ಲ. ಆದ್ದರಿಂದ x = -54 ಎಂಬ ಮೂಲವನ್ನು ನಿರ್ಲಕ್ಷಿಸುತ್ತದೆ. ಪ್ರವಾಹದ ವೇಗವು 6km/h

ಮೂಲಗಳ ಸ್ವಭಾವ

$ax^2 + bx + c = 0$ ಸಮೀಕರಣದ ಮೂಲಗಳು

$$x = \frac{-b \pm \sqrt{b^2-4ac}}{2a} \text{ ಆಗಿವೆ.}$$

$b^2-4ac > 0$ ಆದರೆ ನಾವು ವಾಸ್ತವ ಮತ್ತು ಭಿನ್ನವಾದ ಮೂಲಗಳನ್ನು ಪಡೆಯುತ್ತೇವೆ.

$$\frac{-b}{2a} + \frac{\sqrt{b^2-4ac}}{2a}, \frac{-b}{2a} - \frac{\sqrt{b^2-4ac}}{2a}$$

b2-4ac < 0 ಆದರೆ ಆಗ

$$x = \frac{-b}{2a} \pm 0 \text{ ಅಂದರೆ } x = \frac{-b}{2a}, \frac{-b}{2a}$$

ಎಂಬ ಎರಡು ಸಮನಾದ ಮೂಲಗಳನ್ನು ಹೊಂದಿವೆ.

b^2-4ac < 0 ಆದರೆ ಆಗ ಯಾವುದೇ ವಾಸ್ತವ ಸಂಖ್ಯೆಯ ವರ್ಗವು b2-4ac ಆಗಿರಲು ಸಾಧ್ಯವಿಲ್ಲ. ಆದ್ದರಿಂದ ಇಂತಹ ಪ್ರಕರಣಗಳಲ್ಲಿ ವರ್ಗ ಸಮೀಕರಣವು ಯಾವುದೇ ವಾಸ್ತವ ಮೂಲಗಳನ್ನು ಹೊಂದಿರುವುದಿಲ್ಲ.

b2-4ac ಯ ಬೆಲೆಯು ax2 + bx + c = 0 ವರ್ಗ ಸಮೀಕರಣದ ಮೂಲಗಳು ವಾಸ್ತವ ಸಂಖ್ಯೆಗಳಾಗಿವೆಯೇ ಅಥವಾ ಇಲ್ಲವೇ ಎಂಬುದನ್ನು b2-4ac ಯನ್ನು ವರ್ಗ ಸಮೀಕರಣದ ಶೋಧಕ ಎನ್ನುತ್ತಾರೆ.

1) b^2-4ac > 0 ಎರಡು ಭಿನ್ನವಾದ ವಾಸ್ತವ ಮೂಲಗಳು ಹೊಂದಿರುತ್ತವೆ.
2) b^2- 4ac = 0 ಆದರೆ ಎರಡು ಸಮನಾದ ವಾಸ್ತವ ಮೂಲಗಳನ್ನು ಹೊಂದಿರುತ್ತವೆ.
3) b^2-4ac < 0 ಆದರೆ ಯಾವುದೇ ವಾಸ್ತವ ಮೂಲಗಳನ್ನು ಹೊಂದಿರುವುದಿಲ್ಲ.

ಉದಾಹರಣೆ: 2x2-4x + 3 = 0 ವರ್ಗ ಸಮೀಕರಣದ ಶೋಧಕವನ್ನು ಕಂಡುಹಿಡಿಯಿರಿ ಮತ್ತು ಇದರಿಂದ ಮೂಲಗಳ ಸ್ವಭಾವವನ್ನು ವಿವೇಚಿಸಿ.

ಪರಿಹಾರ: a = 2, b = 4 ಮತ್ತು c = 3 ಆಗಿದೆ.

b^2-4ac = (-4)2-4(2)(3)
= 16-24
= -8 < 0

ಆದ್ದರಿಂದ ದತ್ತ ಸಮೀಕರಣವು ವಾಸ್ತವ ಮೂಲಗಳನ್ನು ಹೊಂದಿಲ್ಲ.

ಉದಾಹರಣೆ: $3x^2 - 2x + {}^1\!/_3 = 0$

ಸಮೀಕರಣದ ಶೋಧಕವನ್ನು ಕಂಡುಹಿಡಿಯಿರಿ ಮತ್ತು ಇದರಿಂದ ಮೂಲಗಳ ಸ್ವಭಾವವನ್ನು ವಿವೇಚಿಸಿ. ಅವು ವಾಸ್ತವ ಸಂಖ್ಯೆಗಳಾಗಿದ್ದರೆ ಅವುಗಳನ್ನು ಕಂಡು ಹಿಡಿಯಿರಿ.

ಪರಿಹಾರ: $a = 3,\ b = -2$ ಮತ್ತು $c = {}^1\!/_3$ ಆಗಿದೆ

$$b^2 - 4ac = (-2)^2 - 4(3)\,{}^1\!/_3$$

= 4-4 = 0

ಆದ್ದರಿಂದ ದತ್ತ ಸಮೀಕರಣವು ಎರಡು ಸಮನಾದ ಮೂಲಗಳನ್ನು ಹೊಂದಿದೆ.

ಆದ್ದರಿಂದ ಮೂಲ $\frac{2}{6}$ ಅಂದರೆ $\frac{1}{3}$ ಆಗಿದೆ.

ಒಂದು ಘಟಕ ಕೋಶದಲ್ಲಿನ ಪರಮಾಣುಗಳ ಸಂಖ್ಯೆ

(ಮುಂದುವರಿದ ಭಾಗ)

ರಸಾಯನ ಶಾಸ್ತ್ರ | ದ್ವಿತೀಯ ಪಿಯುಸಿ



ಮೂರು ಆಯಾಮಗಳಲ್ಲಿ ನಿಕಟ ಜೋಡಣೆ

ಎಲ್ಲಾ ನೈಜ ವಿನ್ಯಾಸಗಳು ಮೂರು ಆಯಾಮದ ವಿನ್ಯಾಸಗಳಾಗಿವೆ.

1. ಎರಡು ಆಯಾಮದ ಚೌಕದ ನಿಕಟ ಜೋಡಣೆಯಿಂದ ಮೂರು ಆಯಾಮದ ನಿಕಟ ಜೋಡಣೆ: ಚೌಕ ನಿಕಟ ಜೋಡಣೆಯ ಎರಡನೇ ಪದರವನ್ನು ಮೊದಲನೆಯದರ ಮೇಲೆ ಇರಿಸುವಾಗ ಒಂದು ಅಡ್ಡಸಾಲು ಇನ್ನೊಂದಕ್ಕೆ ಪಕ್ಕದಲ್ಲಿ ಇರಿಸಿದಾಗ ಪಾಲಿಸುವ ನಿಯಮವನ್ನು ಅನುಸರಿಸುತ್ತೇವೆ. ಹಾಗೆಯೇ ನಾವು ಮತ್ತಷ್ಟು ಪದರಗಳನ್ನು ಒಂದರ ಮೇಲೊಂದು ಇಡಬಹುದು. ಮೊದಲ ಪದರದಲ್ಲಿ ಗೋಳಗಳ ಜೋಡಣೆಯ ವ್ಯವಸ್ಥೆಯು A ಆದರೆ ಎಲ್ಲ ಪದರಗಳು ಒಂದೇ ರೀತಿಯ ಜೋಡಣೆಯನ್ನು ಹೊಂದಿರುತ್ತವೆ.

ಹೀಗಾಗಿ ಈ ಜಾಲರಿಯ AAA... ವಿಧದ ಮಾದರಿಯನ್ನು ಹೊಂದಿದೆ. ಹೀಗಾಗಿ ರಚಿಸಲಾದ ಜಾಲರಿ ಸರಳ ಘನ ಜಾಲರಿ ಮತ್ತು ಅದರ ಘಟಕ

ಕೋಶವು ಆದಿಮ ಘನ ಕೋಶವಾಗಿದೆ



ಎರಡು ಆಯಾಮದ ಷಡ್ಭುಜೀಯ ನಿಕಟ ಜೋಡಣೆ ಪದರಗಳಿಂದ ಮೂರು ಆಯಾಮದ ನಿಕಟ ಜೋಡಣೆ

4. ಮೊದಲ ಪದರದ ಮೇಲೆ ಎರಡನೇ ಪದರವನ್ನು ಇರಿಸಿದಾಗ:

ಒಂದು ಪದರದ ಮೇಲೆ ಅದೇ ರೀತಿಯ ಪದರವನ್ನು ಇರಿಸೋಣ. ಅಂದರೆ ಎರಡನೇ ಪದರದ ಗೋಳಗಳನ್ನು ಮೊದಲ ಪದರದ ತಗ್ಗಿನಲ್ಲಿ ಇರಿಸಲಾಗಿದೆ.

ಮೊದಲ ಪದರದ ಎಲ್ಲಾ ತ್ರಿಕೋನ ಖಾಲಿ ಜಾಗಗಳು ಎರಡನೇ ಪದರದ ಗೋಳಗಳಿಂದ ಆವರಿಸಿಕೊಂಡಿರುವುದಿಲ್ಲ. ಇದು ವಿವಿಧ ಜೋಡಣೆಗಳಿಗೆ ಕಾರಣವಾಗುತ್ತದೆ. ಎರಡನೇ ಪದರದ ಗೋಳಗಳು ಮೊದಲ ಪದರದ ಖಾಲಿ ಜಾಗದ ಮೇಲೆ ಚತುರ್ಮುಖಿಯ ನಿರರ್ಥಕವನ್ನು ಉಂಟು ಮಾಡುತ್ತದೆ. ಈ ಖಾಲಿ ಜಾಗಗಳನ್ನು ಚತುರ್ಮುಖಿಯ ನಿರರ್ಥಕ ಎಂದು ಕರೆಯಲಾಗುತ್ತದೆ.

ಅವುಗಳನ್ನು T ಎಂದು ಗುರುತಿಸಲಾಗಿದೆ. ಖಾಲಿ ಜಾಗವು ಆರು ಗೋಳಗಳಿಂದ ಸುತ್ತುವರೆದಿದ್ದು ಮತ್ತು ಅವುಗಳನ್ನು ಅಷ್ಟಮುಖೀಯ ನಿರರ್ಥಕ ಎಂದು ಕರೆಯಲಾಗುತ್ತದೆ.





(ಪಾಠಗಳ ಸಂಯೋಜನೆ: ಆಕಾಶ್ ಇನ್‌ಸ್ಟಿಟ್ಯೂಟ್, ಬೆಂಗಳೂರು)

ಪ್ರಜಾವಾಣಿ ನೋಡಿಯೊ

ದ್ವಿತೀಯ ಪಿಯುಸಿ ರಸಾಯನಶಾಸ್ತ್ರ ವಿಭಾಗದ ‘ಮೆಟಲರ್ಜಿ_ಕಾನ್ಸಂಟ್ರೇಷನ್ ಆಫ್ ಓರ್ಸ್’ ಪಾಠವನ್ನು ಇಂಗ್ಲಿಷ್‌ನಲ್ಲಿ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.

https://bit.ly/3hr5aEE

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



❦ ಸುಭಾಷಿತ ❦
ಪ್ರತೀ ಸ್ನೇಹದ ಹಿಂದೆ ಒಂದು ಸ್ವಾರ್ಥ ಇದ್ದೇ ಇರುತ್ತದೆ. ಸ್ವಾರ್ಥರಹಿತ ಸ್ನೇಹವೇ ಇಲ್ಲ. ಇದು ಒಂದು ಕಹಿಸತ್ಯ.
–ಚಾಣಕ್ಯ

ಕಡಲತೀರದಲ್ಲಿ ತೀರದ ಸಂಕಟ ಬದುಕಿನ ಸುಭದ್ರತೆಗೆ ಬೇಕು ಮುನ್ನೋಟ

ದುರ್ಭಿಕ್ಷದಲ್ಲಿ ಅಧಿಕ ಮಾಸ ಎಂಬಂತೆ ಕೋವಿಡ್ ಕಾಳ್ಗಿಚ್ಚಿನ ಮಧ್ಯೆ ಚಂಡಮಾರುತವೂ ರಾಜ್ಯದ ಕರಾವಳಿಯ ಮೂರೂ ಜಿಲ್ಲೆಗಳಿಗೆ ಬಂದೆರಗಿದೆ. ಕೇರಳದಲ್ಲಿ ವ್ಯಾಪಕ ಅನಾಹುತಗಳನ್ನು ಸೃಷ್ಟಿಸಿದ ‘ತೌತೆ’ ಚಂಡಮಾರುತವು ಕಡಲತೀರಕ್ಕೆ ಸಮಾನಾಂತರವಾಗಿ ಸಾಗುತ್ತಿದ್ದು ಕರ್ನಾಟಕ, ಗೋವಾ, ಮಹಾರಾಷ್ಟ್ರ, ಗುಜರಾತ್ ಗಡಿಯವರೆಗೂ ಸಂಕಷ್ಟಗಳ ಬಿರುಗಾಳಿಯನ್ನೇ ಸೃಷ್ಟಿಸುತ್ತ ಹೋಗುತ್ತಿದೆ. ಜಡಿಮಳೆ, ಬಿರುಸಿನ ಗಾಳಿ, ಗಿಡಮರಗಳ ಪಲ್ಟಿ, ವಿದ್ಯುತ್ ವೈಫಲ್ಯವೇ ಮುಂತಾದ ಆಘಾತಗಳ ಜೊತೆಗೆ ಈಗಂತೂ ಸಾಂಕ್ರಾಮಿಕದ ತೀವ್ರತೆಯೂ ಹೆಚ್ಚಿರುವುದರಿಂದ ನೆರವಿಗೆ ಧಾವಿಸುವ ವ್ಯವಸ್ಥೆಗೂ ಏನೆಲ್ಲ ಅಡಚಣೆಗಳು ಎದುರಾಗಿವೆ. ಇಂಥ ಕಷ್ಟದ ಸಂದರ್ಭಗಳಲ್ಲಿ ತುರ್ತು ಸಹಾಯಕ್ಕೆ ಬರಬೇಕಾದ ‘ಕರಾವಳಿ ಕಾವಲು ಪಡೆ’ ಕೂಡ ತನ್ನ ದೋಣಿಗಳನ್ನಾಗಲೀ ವಿಮಾನಗಳನ್ನಾಗಲೀ ಹೊರಡಿಸಲಾಗದಷ್ಟು ತೀವ್ರ ಗಾಳಿ ಬೀಸುತ್ತಿರುತ್ತದೆ. ಇವೆಲ್ಲವೂ ಸೇರಿ ವಿಪತ್ತು ನಿರ್ವಹಣಾ ಪ್ರಾಧಿಕಾರಕ್ಕೆ ಅಷ್ಟೇ ಅಲ್ಲ, ಅದರೊಂದಿಗೆ ಕೈಜೋಡಿಸಬೇಕಾದ ಮೂರೂ ಜಿಲ್ಲೆಗಳ ಆಡಳಿತ ಯಂತ್ರಕ್ಕೂ ಕಠಿಣ ಸವಾಲು ಎದುರಾಗಿದೆ. ನಿರಂತರ ಗಾಳಿ ಹಾಗೂ ಜಡಿಮಳೆಯಿಂದಾಗಿ ಕರಾವಳಿಯ ಮೂರೂ ಜಿಲ್ಲೆಗಳಲ್ಲಿ ಆಸ್ತಿಪಾಸ್ತಿಯ ಗಣನೀಯ ನಷ್ಟ ವರದಿಯಾಗುತ್ತಿದೆ. ಬಂದರಿಗೆ ಸಂಪರ್ಕ ಕಲ್ಪಿಸುವ ರಸ್ತೆಗಳು ಕುಸಿದಿದ್ದು, ಕಡಲ ಕೊರೆತ ಪ್ರಕರಣಗಳೂ ಹೆಚ್ಚಾಗಿವೆ. ಲಾಕ್‌ಡೌನ್‌ನಿಂದಾಗಿ ದುಡಿಮೆಯ ಅವಕಾಶಗಳನ್ನೇ ಕಳೆದುಕೊಂಡಿರುವ ಶ್ರಮಿಕರ ಪಡಿಪಾಟಲು ಹೇಳತೀರದಷ್ಟಾಗಿದೆ. ಕಂದಾಯ ಸಚಿವರೇನೊ ‘ಹಣಕಾಸಿನ ತೊಂದರೆ ಇಲ್ಲ’ ಎಂದಿದ್ದಾರೆ. ಇಂಥ ಸಂದರ್ಭಗಳಲ್ಲಿ ಪರಿಹಾರ ರೂಪದಲ್ಲಿ ಹಣಕಾಸಿನ ವಿತರಣೆಯೂ ಆಗಬೇಕು. ಅದಕ್ಕಿಂತ ಹೆಚ್ಚಾಗಿ ಸಂಕಟ ನಿವಾರಣೆಯ ಸಮರತಂತ್ರ, ಚುರುಕಿನ ಕಾರ್ಯಾಚರಣೆ ಹಾಗೂ ಸ್ಥಳೀಯ ನಾಗರಿಕರನ್ನು ಪರಿಹಾರದ ಕೆಲಸಗಳಲ್ಲಿ ತೊಡಗಿಸಿಕೊಳ್ಳುವ ಕೌಶಲಗಳೇ ಮುಖ್ಯವಾಗುತ್ತವೆ. ಇದ್ದುದರಲ್ಲಿ ಕರಾವಳಿ ಜಿಲ್ಲೆಗಳಲ್ಲಿ ಸ್ವಯಂಸೇವಾ ಸಂಘಟನೆಗಳು ಹಾಗೂ ಮೀನುಗಾರರ ಸಂಘಗಳು ಕ್ರಿಯಾಶೀಲವಾಗಿದ್ದು ಸಂಕಷ್ಟ ಬಂದಾಗಲೆಲ್ಲ ಧಾವಿಸಿ ಬರುತ್ತವೆ. ಮತಭೇದ, ಜಾತಿಭೇದ, ವೃತ್ತಿಭೇದ ಮರೆತು ಎಲ್ಲರೂ ಒಂದಾಗಿ ನೆರವಿನ ಹಸ್ತ ಚಾಚುವ ಇಂಥ ಸದ್ಭಾವನೆಯು ಹಿಂದೆ ಅನೇಕ ಸಂದರ್ಭಗಳಲ್ಲಿ ವ್ಯಕ್ತವಾಗಿದೆ. ಕಷ್ಟದಲ್ಲಿದ್ದವರನ್ನು ಮೇಲಕ್ಕೆತ್ತುವ ಈ ಮಾನವೀಯ ಸಂವೇದನೆಯನ್ನು ಸಮರ್ಥವಾಗಿ ಬಳಸಿಕೊಳ್ಳುವ ವಿವೇಕವನ್ನು ಜಿಲ್ಲಾಡಳಿತಗಳು ಪ್ರದರ್ಶಿಸಬೇಕಾಗಿದೆ.

ಹಣಕಾಸು ಪರಿಹಾರದ ಜೊತೆಗೆ ಸಂಕಟ ನಿವಾರಣೆಯ ಸಮರತಂತ್ರ, ಚುರುಕಿನ ಕಾರ್ಯಾಚರಣೆ ಹಾಗೂ ಸ್ಥಳೀಯ ನಾಗರಿಕರನ್ನು ಪರಿಹಾರ ಕಾರ್ಯಗಳಲ್ಲಿ ತೊಡಗಿಸಿಕೊಳ್ಳುವ ಕೌಶಲ ಈ ಸಂದರ್ಭದಲ್ಲಿ ಮುಖ್ಯವಾಗುತ್ತದೆ

ಈಚಿನ ವರ್ಷಗಳಲ್ಲಿ ಹವಾಮಾನ ಮುನ್ಸೂಚನೆ ಸಾಕಷ್ಟು ನಿಖರವಾಗುತ್ತಿದೆ, ಮಾಹಿತಿ ಜಾಲವೂ ವ್ಯಾಪಕವಾಗಿ ವಿಸ್ತರಿಸಿರುವುದರಿಂದ ಚಂಡಮಾರುತದಂಥ ‘ನಿರೀಕ್ಷಿತ ಅವಘಡ’ಗಳಲ್ಲಿ ಸಾವುನೋವಿನ ಸಂಖ್ಯೆ ಗಣನೀಯವಾಗಿ ತಗ್ಗಿದೆ ನಿಜ. ಆದರೂ ಆಧುನಿಕ ಮಾನವನ ತಾಂತ್ರಿಕ ಜಾಣ್ಮೆಗೆ ಸವಾಲು ಹಾಕುವಂತೆ ಚಂಡಮಾರುತಗಳ ಆವರ್ತನ ಸಂಖ್ಯೆ ಹಾಗೂ ತೀವ್ರತೆ ಎರಡೂ ಹೆಚ್ಚುತ್ತಿವೆ. ಬಂಗಾಳ ಉಪಸಾಗರಕ್ಕೆ ಹೋಲಿಸಿದರೆ ಅರಬ್ಬೀ ಸಮುದ್ರದಲ್ಲಿ ಚಂಡಮಾರುತಗಳೇ ಇಲ್ಲವೆನ್ನುವಷ್ಟು ಅಪರೂಪವಾಗಿತ್ತು. ಈಚಿನ ವರ್ಷಗಳಲ್ಲಿ ಜಾಗತಿಕ ತಾಪಮಾನ ಏರಿಕೆಯ ಫಲವಾಗಿ ಸಮುದ್ರದ ಮೇಲ್ಪಾತಳಿಯ ಉಷ್ಣತೆಯೂ ಹೆಚ್ಚುತ್ತಿದೆ. ಹವಾಮಾನ ಇಲಾಖೆಯ ದಾಖಲೆಗಳ ಪ್ರಕಾರ, ಕಳೆದ ಮೂವತ್ತು ವರ್ಷಗಳ ಸರಾಸರಿ ಉಷ್ಣತೆಗಿಂತ 2018ರಿಂದ ಈಚೆಗೆ ಅರಬ್ಬೀ ಸಮುದ್ರದ ಉಷ್ಣತೆ 0.35 ಸೆಲ್ಸಿಯಸ್‌ನಷ್ಟು ಹೆಚ್ಚಾಗಿದೆ. ಅದರ ದುಷ್ಫಲದಿಂದಾಗಿ ಆಸ್ತಿಪಾಸ್ತಿ ನಷ್ಟ, ವಾಣಿಜ್ಯ ವ್ಯವಹಾರಗಳ ನಷ್ಟ, ದುಡಿಮೆಯ ದಿನಗಳ ನಷ್ಟವನ್ನು ಎಲ್ಲರೂ ಎದುರಿಸಬೇಕಾಗಿ ಬಂದಿದೆ. ಅದರಲ್ಲೂ ದುರ್ಬಲರ ಸಂಕಷ್ಟಗಳ ಪ್ರಮಾಣವೇ ಹೆಚ್ಚುತ್ತಿದೆ. ವಿಪತ್ತು ನಿರ್ವಹಣಾ ಪ್ರಾಧಿಕಾರವೇನೋ ಇಂಥ ದಿನಗಳಲ್ಲಿ ತ್ವರಿತವಾಗಿಯೇ ತಾತ್ಕಾಲಿಕ ಪರಿಹಾರ ಶಿಬಿರಗಳನ್ನು ಏರ್ಪಡಿಸುತ್ತದೆ. ಆದರೆ ಈ ಬಗೆಯ ನೆರವು ತತ್ಕಾಲಕ್ಕಷ್ಟೇ ಸೀಮಿತವಾಗಿದ್ದು, ದೀರ್ಘಕಾಲೀನ ಸಮಸ್ಯೆ ಮಾತ್ರ ಶಾಶ್ವತವಾಗಿ ಉಳಿದ ಅದೆಷ್ಟೊ ಉದಾಹರಣೆಗಳಿವೆ. 2019ರಲ್ಲಿ ಗಂಗಾವಳಿಯಲ್ಲಿ ಮಹಾಪೂರದಿಂದ ಮನೆ ಕಳೆದುಕೊಂಡವರಿಗೆ ಪೂರ್ಣ ಪ್ರಮಾಣದ ಪರಿಹಾರ ಈಗಲೂ ಸಿಕ್ಕಿಲ್ಲ. ಕರಾವಳಿಯ ಅನೇಕ ನಗರ- ಪಟ್ಟಣಗಳಲ್ಲಿ ಹೊರಚರಂಡಿ ವ್ಯವಸ್ಥೆ ಓಬೀರಾಯನ ಕಾಲದ್ದೇ ಇದೆ. ಉಡುಪಿಯಲ್ಲಿ ಸಾಮಾನ್ಯ ಮಳೆಯಲ್ಲೂ ಪ್ರವಾಹ ಉಕ್ಕಿ ಸಮುದ್ರ ತೀರದಲ್ಲಿ ತ್ಯಾಜ್ಯಗಳ ಮಹಾಪೂರ ವರ್ಷಗಟ್ಟಲೆ ಶೇಖರವಾಗಿರುತ್ತದೆ. ಸುಂಟರಗಾಳಿ, ಜಡಿಮಳೆ, ನೆರೆ, ಭೂಕುಸಿತದಂಥ ಹವಾಮಾನ ಸಂಬಂಧಿ ಸಂಕಟಗಳು ವರ್ಷವರ್ಷವೂ ಹೆಚ್ಚಲಿರುವುದರಿಂದ ಕರಾವಳಿಯ ಸೂಕ್ಷ್ಮ ಪರಿಸರವನ್ನು ಸುಭದ್ರಗೊಳಿಸುವ ಕೆಲಸಗಳು ಸಮರೋಪಾದಿಯಲ್ಲಿ ನಡೆಯಬೇಕಿತ್ತು. ಆದರೆ ಅದಕ್ಕೆ ತದ್ವಿರುದ್ಧವಾಗಿ, ಯುದ್ಧತೀವ್ರತೆಯಲ್ಲಿ ಕಟ್ಟಡ ನಿರ್ಮಾಣ, ಮೂಲಸೌಕರ್ಯಗಳ ಹೆಸರಿನಲ್ಲಿ ಅಸ್ಥಿರ ಯೋಜನೆಗಳು ದಾಂಗುಡಿ ಇಡುತ್ತಿವೆ. ಪ್ರಕೃತಿ ವಿಕೋಪಗಳಿಗಿಂತ ಅಭಿವೃದ್ಧಿಯ ಹಪಾಪಿಯ ದುಷ್ಫಲಗಳನ್ನೇ ನಾವು ಹೆಚ್ಚುಹೆಚ್ಚಾಗಿ ಎದುರಿಸಬೇಕಾಗಿದೆ.

ದಿನದ ಟ್ವೀಟ್

ಆದ್ಯತೆ ನೀಡಬೇಕಿದೆ

ಅಗತ್ಯ ಸೇವೆಗಳನ್ನು ಒದಗಿಸುವವರೂ ಮುಂಚೂಣಿ ಕಾರ್ಯಕರ್ತರೇ ಆಗಿರುತ್ತಾರೆ. ಬಹುತೇಕ ರಾಜ್ಯಗಳಲ್ಲಿ ಇಂತಹವರು ಇನ್ನೂ ಲಸಿಕೆ ಪಡೆದಿಲ್ಲ. ಲಾಕ್‌ಡೌನ್ ಅನ್ನು ಹಂತ ಹಂತವಾಗಿ ತೆರವುಗೊಳಿಸುವುದಕ್ಕೆ ಮುನ್ನ ಇವರಿಗೆ ಆದ್ಯತೆಯ ಮೇರೆಗೆ ಲಸಿಕೆ ಹಾಕಬಹುದು. ಅವರೆಂದರೆ: ಬಸ್- ಟ್ಯಾಕ್ಸಿ ಚಾಲಕರು, ತರಕಾರಿ, ಹಾಲು, ಹಣ್ಣು ಮಾರಾಟಗಾರರು, ಸ್ವಚ್ಛತಾ ಕಾರ್ಮಿಕರು, ಬ್ಯಾಂಕಿಂಗ್ ಸಿಬ್ಬಂದಿ.

ವಂದನಾ ಸಿಂಗ್, ನವದೆಹಲಿಯ ಯುವತಿ

25 ವರ್ಷಗಳ ಹಿಂದೆ

ಶುಕ್ರವಾರ, 17-5-1996

- **ಮಹಾಜನ್‌ಗೆ ರಕ್ಷಣಾ ಖಾತೆ, ಜಸವಂತ ಸಿಂಗ್‌ಗೆ ಹಣಕಾಸು ಖಾತೆ**

ನವದೆಹಲಿ, ಮೇ 16 (ಯುಎನ್‌ಐ, ಪಿಟಿಐ)– ಕೇಂದ್ರದಲ್ಲಿ ಪ್ರಥಮ ಬಾರಿಗೆ ರಚನೆಯಾದ ಭಾರತೀಯ ಜನತಾ ಪಕ್ಷ–ಶಿವಸೇನೆ ನೇತೃತ್ವದ ಸಮ್ಮಿಶ್ರ ಸರ್ಕಾರದ ಮುಖ್ಯಸ್ಥ, ಬಿಜೆಪಿ ನಾಯಕ ಅಟಲ್ ಬಿಹಾರಿ ವಾಜಪೇಯಿ ಅವರು ಭಾರತದ ಹನ್ನೊಂದನೇ ಪ್ರಧಾನ ಮಂತ್ರಿಯಾಗಿ ಇಂದು ಪ್ರಮಾಣವಚನ ಸ್ವೀಕರಿಸಿದರು.

ವಾಜಪೇಯಿ ಜತೆಗೆ ಹನ್ನೊಂದು ಸಂಪುಟ ದರ್ಜೆ ಸಚಿವರು ಪ್ರಮಾಣವಚನ ಸ್ವೀಕರಿಸಿದ್ದಾರೆ. ಮಹತ್ವದ ರಕ್ಷಣಾ ಮತ್ತು ಸಂಸದೀಯ ವ್ಯವಹಾರ ಖಾತೆಯನ್ನು ಪ್ರಮೋದ್ ಮಹಾಜನ್, ಜಸವಂತ ಸಿಂಗ್ ಹಣಕಾಸು ಖಾತೆಯನ್ನು ನೋಡಿಕೊಳ್ಳುವರು. ಕರ್ನಾಟಕದ ವಿ.ಧನಂಜಯ ಕುಮಾರ್ ಅವರಿಗೆ ನಾಗರಿಕ ವಿಮಾನಯಾನ ಮತ್ತು ಪ್ರವಾಸೋದ್ಯಮ ಖಾತೆ ದೊರೆತಿದೆ.

- **‘ಕುದುರೆ ವ್ಯಾಪಾರ’: ರಂಗದ ಶಂಕೆ**

ನವದೆಹಲಿ, ಮೇ 16 (ಯುಎನ್‌ಐ)– ಬಹುಮತ ಸಾಬೀತಿಗೆ ವಾಜಪೇಯಿ ಅವರಿಗೆ 15 ದಿನಗಳ ಅವಧಿ ನೀಡಿದ್ದು ‘ಕುದುರೆ ವ್ಯಾಪಾರ’ಕ್ಕೆ ಕಾರಣವಾಗುತ್ತದೆ, ಆದ್ದರಿಂದ ಇನ್ನು ಕೆಲವೇ ದಿನಗಳಲ್ಲಿ ಸಂಸತ್ ಅಧಿವೇಶನ ಕರೆಯಬೇಕು ಎಂದು ತೃತೀಯ ರಂಗದ ನಾಯಕರು ಕೋರಿದ್ದಾರೆ.

50 ವರ್ಷಗಳ ಹಿಂದೆ

ಸೋಮವಾರ, 17-5-1971

- **ಪಕ್ಷಾಂತರ ಶಿಕ್ಷಾರ್ಹಗೊಳಿಸಿ ಸುಗ್ರೀವಾಜ್ಞೆ: ಎಸ್ಸೆನ್ ಬಯಕೆ**

ಮುನ್ನಿನಗರ, ಮೇ 16– ಪಕ್ಷಾಂತರವನ್ನು ಶಿಕ್ಷಾರ್ಹವೆಂದು ಘೋಷಿಸಬೇಕು- ಸಂಸ್ಥಾ ಕಾಂಗ್ರೆಸ್ ಅಧ್ಯಕ್ಷ ಪೀಠವನ್ನು ಇದೀಗ ತ್ಯಜಿಸಿರುವ ಎಸ್.ನಿಜಲಿಂಗಪ್ಪನವರ ಅಭಿಪ್ರಾಯವಿದು. ಇದಕ್ಕಾಗಿ ರಾಷ್ಟ್ರಪತಿ ಸುಗ್ರೀವಾಜ್ಞೆ ಹೊರಡಿಸಬೇಕೆಂಬುದೂ ಅವರ ಕಳಕಳಿ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ನಿಜಲಿಂಗಪ್ಪನವರು, ಪಕ್ಷಾಂತರವು ಚುನಾವಣೆಯ ಬಳಿಕ ಒಳ್ಳೆ ಸಂಪಾದನೆಯ ವಿಷಯವಾಗಿದೆಯೆಂದೂ ನುಡಿದರು.

- **ಸಾದಿಕ್ ಅಲೀ: ಸಂಸ್ಥಾ ಕಾಂಗ್ರೆಸ್ ‘ಹಂಗಾಮಿ’ ಅಧ್ಯಕ್ಷ**

ಮುನ್ನಿನಗರ, ಮೇ 16– ಸಂಸ್ಥಾ ಕಾಂಗ್ರೆಸ್ಸಿನ ಪ್ರಧಾನ ಕಾರ್ಯದರ್ಶಿ ಸಾದಿಕ್ ಅಲೀ ಅವರು ಇಂದು ಪಕ್ಷದ ‘ಹಂಗಾಮಿ’ ಅಧ್ಯಕ್ಷರಾಗಿ ಸರ್ವಾನುಮತದಿಂದ ಚುನಾಯಿತರಾದರು. ನಿವೃತ್ತರಾದ ಅಧ್ಯಕ್ಷ ನಿಜಲಿಂಗಪ್ಪನವರ ಈ ನಾಮಕರಣವನ್ನು ಎಐಸಿಸಿ ಒಪ್ಪಿಕೊಂಡು, ಹೊಸ ಅಧ್ಯಕ್ಷರ ಆಯ್ಕೆ ಸಂಬಂಧದಲ್ಲಿ ತಲೆದೋರಿದ್ದ ಬೃಹತ್ ತೊಡಕನ್ನು ದಾಟಲು ದಾರಿ ಮಾಡಿತು.

ಜನರ ಜೀವಕ್ಕಿಂತ ನಿಮ್ಮ ನಾಯಕರ ವರ್ಚಸ್ಸು ಕಾಪಾಡುವುದೇ ನಿಮಗೆ ಮುಖ್ಯವೇ?

ದನಿಯೆತ್ತಿ ಕಠಿಣ ಪ್ರಶ್ನೆ ಕೇಳಿ

ವಿಶ್ಲೇಷಣೆ

ಟಿ.ಎಂ.ಕೃಷ್ಣ

ಪ್ರಿಯ ಬಿಜೆಪಿ ಸದಸ್ಯರೇ,

ನಾನು ಈ ದೇಶದ ಪ್ರಜೆಯಾಗಿ ನಿಮಗೆ ಪತ್ರ ಬರೆಯುತ್ತಿದ್ದೇನೆ. ನಿಮಗಿಂತ ಭಿನ್ನವಾದ ಸಮಾಜೋ-ರಾಜಕೀಯ ನಿಲುವುಗಳ ವ್ಯಕ್ತಿಯಾಗಿ ಇದನ್ನು ಬರೆಯುತ್ತಿರುವೆ. ನಾನು ಮತ್ತು ನೀವು ರಾಜಿಯಾಗಲು ಸಾಧ್ಯವೇ ಇಲ್ಲದಂತೆ ವಾಗ್ವಾದ ನಡೆಸಿದರೂ, ನಾವು ಪರಸ್ಪರ ಗೌರವದಿಂದ ಇರಲು ಸಾಧ್ಯವಾಗಬೇಕು. ಏಕೆಂದರೆ, ಮಾನವತೆ ಎನ್ನುವುದು ನನ್ನ-ನಿಮ್ಮ ಆದರ್ಶವಾಗಿರಬೇಕು. ನಾನು ಈ ಬಗೆಯ ಸಹ-ಪೌರತ್ವದ ನೆಲೆಯಲ್ಲಿ, ನಾವೆಲ್ಲರೂ ಭಾರತವೆಂಬ ನಮ್ಮ ಈ ದೇಶವನ್ನು ಪ್ರೀತಿಸುತ್ತೇವೆ ಎಂಬ ನಂಬುಗೆಯಲ್ಲಿ ಬರೆಯುತ್ತಿರುವೆ.

ದೇಶವೀಗ ಪ್ರಪಾತದ ಅಂಚಿನಲ್ಲಿದೆ. ಪ್ರತಿದಿನ ಸಾವಿರಾರು ಜನ ಸಾಯುತ್ತಿದ್ದಾರೆ; ನಮ್ಮ ಕಣ್ಣೋಟದ ಆಚೆ ಸತ್ತವರು ಲೆಕ್ಕಕ್ಕೇ ಸಿಗದೆ ಇನ್ನೆಷ್ಟಿದ್ದಾರೋ. ಆರೋಗ್ಯವಂತರನ್ನು ಸುರಕ್ಷಿತವಾಗಿ ಇರಿಸಲೂ ನಾವು ಹೆಣಗುತ್ತಿದ್ದೇವೆ. ಹಿಂದೆಂದೂ ಕಂಡಿರದ ಈ ಕತ್ತಲಕೂಪದಿಂದ ಹೊರಬರುವ ದಾರಿಯನ್ನು ಹುಡುಕಬೇಕಿದೆ. ಅಂದರೆ ನಾವು ನಮ್ಮ ಮೂರ್ಖತನಗಳನ್ನು ಗುರುತಿಸಿ, ಸನ್ನಿವೇಶವನ್ನು ಇನ್ನಷ್ಟು ಹದಗೆಡಿಸಿದ ನಮ್ಮ ನಿಸ್ಸೀಮ ನಿರ್ಲಕ್ಷ್ಯವನ್ನು ಗುರುತಿಸಬೇಕಿದೆ. ಕೋವಿಡ್ ಇಲ್ಲವಾದ ನಂತರ ವಿಶ್ಲೇಷಣೆ ಮಾಡೋಣವೆಂದು ಕಾಯಲಾಗದು. ಆಗಿರುವ ಲೋಪಗಳನ್ನು ತಿದ್ದುವ ಕೆಲಸವನ್ನು ಈಗಿಂದೀಗಲೇ, ಈ ಕ್ಷಣದಲ್ಲಿ ಮಾಡಬೇಕಿದೆ. ಈ ಮಹಾಮಾರಿಯೊಂದಿಗೆ ಸೆಣಸಲು ವೈಜ್ಞಾನಿಕವಾದ, ಕಾಳಜಿಪೂರ್ವಕವಾದ ರೀತಿಯಲ್ಲಿ ಕಾರ್ಯೋನ್ಮುಖವಾಗುವುದು ನಮ್ಮ ಕೈಯಲ್ಲಿಯೇ ಇತ್ತು ಮತ್ತು ಈಗಲೂ ಇದೆ. ಜನರ ಜೀವ ಅತೀವ ಗಂಡಾಂತರದಲ್ಲಿದೆ.

ನರೇಂದ್ರ ಮೋದಿ ಅವರು ನಿಮ್ಮ ಪಕ್ಷದ ನಾಯಕರಷ್ಟೇ ಅಲ್ಲ; ಅವರು ನಮ್ಮ ಪ್ರಧಾನಮಂತ್ರಿ. ಈ ಸಾಂವಿಧಾನಿಕ ಹುದ್ದೆಗೆ ಮಹತ್ವವಿರಬೇಕು. ನೀವು ಅವರನ್ನು ನಿಮ್ಮ ಪಕ್ಷದ ರಾಜಕೀಯ ತತ್ವಗಳ ಸಂರಕ್ಷಕ ಎಂದಷ್ಟೇ ನೋಡದೆ, ಇಡೀ ದೇಶದ ನಾಯಕರೆಂದು ಕಾಣಬೇಕಿದೆ. ಮೋದಿಯವರು ಇತ್ತೀಚಿನ ದಶಕಗಳಲ್ಲಿ ನಿಮ್ಮ ಪಕ್ಷ ಕಂಡ ಅತ್ಯಂತ ಪ್ರಭಾವಿ ನಾಯಕ ಎಂಬುದನ್ನಾಗಲೀ ಅಥವಾ ಸಂಸತ್ತಿನಲ್ಲಿ ನಿಮ್ಮ ಪಕ್ಷಕ್ಕೆ ಎರಡು ಸಲ ಪೂರ್ಣ ಬಹುಮತ ತಂದುಕೊಟ್ಟವರು ಎಂಬುದನ್ನಾಗಲೀ ಸದ್ಯಕ್ಕೆ ಪಕ್ಕಕ್ಕೆ ಇಡಿ.

ಮೋದಿಯವರು ಬೇರಾವುದೇ ರಾಜಕೀಯ ಪಕ್ಷಕ್ಕೆ ಸೇರಿದವರಾಗಿದ್ದರೆ, ಸಾವಿರಾರು ವಲಸೆ ಕಾರ್ಮಿಕರು ಕುಡಿಯುವ ನೀರಿಗೂ ಗತಿಯಿಲ್ಲದೆ, ಹುಟ್ಟೂರು ತಲುಪಿದರೆ ಸಾಕೆಂದು ವಾರಗಟ್ಟಲೆ ಬರಿಗಾಲಿನಲ್ಲಿ, ಸೈಕಲಿನಲ್ಲಿ ಹೋಗುವ ಪರಿಸ್ಥಿತಿಯನ್ನು ಪ್ರಧಾನಿಯವರು ತಂದಿಟ್ಟಾಗ, ನೀವು ತಣ್ಣಗೆ ನಿಂತಿರುತ್ತಿದ್ದಿರಾ? ಇಷ್ಟು ಹದಗೆಟ್ಟ ನಿರ್ವಹಣೆ, ಅವಿವೇಕದ ನಿರ್ಧಾರಗಳಿಗೆ ಪ್ರಧಾನಿ ಮತ್ತು ಅವರ ನೇತೃತ್ವದ ಸರ್ಕಾರವನ್ನು ದೂಷಿಸುತ್ತಿರಲಿಲ್ಲವೇ? ಜನರು ಕೆಲವೇ ಖಾಸಗಿ ಕಂಪನಿಗಳ ಕೃಪೆಗಾಗಿ ಕಾಯುವಂತಾಗಿದ್ದು, ಲಸಿಕೆ ಕಾರ್ಯಕ್ರಮವು ಹೀಗೆ ಎಡವುತ್ತಿರುವುದು ಯಾರ ಉಸ್ತುವಾರಿಯಲ್ಲಿ ಎಂದು ಪ್ರಶ್ನಿಸುತ್ತಿರಲಿಲ್ಲವೇ? ಆಮ್ಲಜನಕ ಪೂರೈಸುವಂತೆ ಕೇಂದ್ರಕ್ಕೆ ಸುಪ್ರೀಂ ಕೋರ್ಟ್ ಸೂಚನೆ ನೀಡಬೇಕಾಗಿದೆ ಎಂದು ತಿಳಿದು ನಿಮಗೆ ಆಘಾತವಾಗುತ್ತಿರಲಿಲ್ಲವೇ?

ಕೆಲವು ರಾಜ್ಯಗಳ ಕೋವಿಡ್ ಅಂಕಿ-ಅಂಶದಲ್ಲಿನ ಏರುಪೇರು ಕುರಿತು ಸರ್ಕಾರವು ತನಿಖೆ ನಡೆಸಬೇಕೆಂದು ನೀವು ಆಗ್ರಹಿಸುತ್ತಿರಲಿಲ್ಲವೇ? ತಜ್ಞರು ನೀಡಿದ ಅತಿಮುಖ್ಯವಾದ ವೈಜ್ಞಾನಿಕ ಸಲಹೆಗಳನ್ನೇ ಆಡಳಿತದಲ್ಲಿನ ಅವೈಜ್ಞಾನಿಕ ಧೋರಣೆಯು ಬದಿಗೆ ಸರಿಸಿತು ಎಂದು ಹೇಳಿಯುತ್ತಿರಲಿಲ್ಲವೇ? ಇಂತಹ ಮಹಾ ವಿಪತ್ತಿನ ಸಮಯದಲ್ಲಿ, ಸಚಿವರು ಸಾಮಾಜಿಕ ಮಾಧ್ಯಮಗಳ ಟೀಕಾಕಾರರ ಬಾಯಿ ಮುಚ್ಚಿಸಲೆತ್ನಿಸುತ್ತ, ತಮ್ಮ ವರ್ಚಸ್ಸು ನಿರ್ವಹಣೆಯ ಸರ್ಕಸ್ಸಿನಲ್ಲಿ ಮುಳುಗಿದ್ದರೆ, ಕೇಂದ್ರ ಸರ್ಕಾರವು ಸೆಂಟ್ರಲ್ ವಿಸ್ತಾದ ನಿರ್ಮಾಣದಲ್ಲಿ ಮಗ್ನವಾಗಿದೆ.

ವಿವಾದಾತ್ಮಕ ರೀತಿಯಲ್ಲಿ ವಿಧಾನಸಭೆ ಚುನಾವಣೆಗಳನ್ನು ನಡೆಸಿದ ಬಗೆಯನ್ನು ಬದಿಗಿಡೋಣ. ಸೋಂಕಿತರ ಸಂಖ್ಯೆ ದಿನೇದಿನೇ ಏರುಮುಖವಾಗಿದ್ದಾಗ, ಖುದ್ದು ಪ್ರಧಾನಿಯೇ ತಮ್ಮ ಚುನಾವಣಾ ಪ್ರಚಾರ ಭಾಷಣಕ್ಕೆ ಸಾವಿರಾರು ಜನರು ಸೇರಿದ್ದಾರೆಂದು ಸಂಭ್ರಮಿಸಿದ್ದು ಆಘಾತ ತರಲಿಲ್ಲವೇ? ಪ್ರಧಾನಿಯವರೇ ಹೀಗೆ ನಡೆದುಕೊಂಡಾಗ, ಕೋವಿಡ್ ಮಾರ್ಗಸೂಚಿಗಳನ್ನು ಅನುಸರಿಸುತ್ತಿಲ್ಲ ಎಂದು ದೇಶದ ಜನರನ್ನು ನಾವು ದೂಷಿಸಬಹುದೇ?

ಅಂತರರಾಷ್ಟ್ರೀಯ ಮಾಧ್ಯಮಗಳು ನಮ್ಮ ಘನತೆಗೆ ಮಸಿ ಬಳಿಯಲು ಮಾತ್ರ ಆಸಕ್ತಿ ತೋರುತ್ತವೆ ಎಂಬ ವಾದವನ್ನು ನೀವು ಒಪ್ಪುತ್ತೀರಿ ಎಂಬುದನ್ನು ನನಗೆ ನಂಬುವುದಕ್ಕೆ ನಿಜಕ್ಕೂ ಆಗುತ್ತಿಲ್ಲ. ನೂರಾರು ಚಿತ್ರಗಳು, ದತ್ತಾಂಶಗಳು, ಜನರ ಸಾವುನೋವಿನ ಕಥೆಗಳು ಎಲ್ಲವೂ ನಿಜವೇ; ಅಲ್ಲಿ ಚಿತೆಯ ಮೇಲೆ ಉರಿಯುತ್ತಿರುವುವು ನಿಜವಾದ ದೇಹಗಳೇ. ಜನರು ಉಸಿರಾಡುವುದಕ್ಕೆ ಒದ್ದಾಡುತ್ತಿದ್ದಾರೆ, ಸಹಾಯಕ್ಕಾಗಿ ಸರ್ಕಾರವನ್ನಲ್ಲ, ಇನ್ನುಳಿದ ಸಹನಾಗರಿಕರಿಗೆ ಮೊರೆಯಿಡುತ್ತಿದ್ದಾರೆ. ಈ ಯಾವುದೂ ನಿಮ್ಮನ್ನು ಕಿಂಚಿತ್ತೂ ತಟ್ಟುತ್ತಿಲ್ಲವೇ? ಈ ಮಹಾಮಾರಿಯ ಹೊಡೆತದಲ್ಲಿ ನೀವು ಮತ್ತು ನಾನು ಹಲವಾರು ಗೆಳೆಯರನ್ನು ಕಳೆದುಕೊಂಡಿದ್ದೇವೆ; ಇಷ್ಟಾಗಿಯೂ ಈ ಕಟುವಾಸ್ತವಕ್ಕೆ ಕೇಂದ್ರ ಸರ್ಕಾರವೇ ಜವಾಬ್ದಾರಿ ಎಂದು ಒಪ್ಪಿಕೊಳ್ಳಲು ನೀವು ಸಿದ್ಧರಿಲ್ಲ. ಜನರ ಜೀವ ಉಳಿಸುವುದಕ್ಕಿಂತ ನಿಮ್ಮ ನಾಯಕರ ವರ್ಚಸ್ಸು ಕಾಪಾಡುವುದೇ ನಿಮಗೆ ಮುಖ್ಯವೇ? ನಿಮ್ಮ ಪಕ್ಷವು ಆಂತರಿಕ ಪ್ರಜಾಪ್ರಭುತ್ವದ ಬಗ್ಗೆ ಮಾತನಾಡುತ್ತದೆ, ಆದರೆ ಅದು ಈಗ ಕ್ರಿಯೆಯಲ್ಲಿ ಏಕೆ ಕಾಣಿಸುತ್ತಿಲ್ಲ?

ರಾಜ್ಯ ಸರ್ಕಾರಗಳು ಕರ್ತವ್ಯಲೋಪ ಎಸಗಿವೆ ನಿಜ. ಆದರೆ ಕೋವಿಡ್ ಪಿಡುಗನ್ನು ನಿಭಾಯಿಸುವ ಜವಾಬ್ದಾರಿ ಕೇಂದ್ರದ್ದಾಗಿದೆ. 2020ರ ಮಾರ್ಚ್‌ನಲ್ಲಿ ವಿಕೋಪ ನಿರ್ವಹಣಾ ಕಾಯ್ದೆಯನ್ನು ಬಳಸಿಕೊಂಡಿತು. ನಂತರದ ತಿಂಗಳುಗಳಲ್ಲಿ, ಸಹಕಾರ ಒಕ್ಕೂಟ ವ್ಯವಸ್ಥೆಯ ತತ್ವಗಳು ಎಲ್ಲಿಯೂ ಕಾಣಲಿಲ್ಲ; ಯಾವುದೇ ರಾಜ್ಯಕ್ಕಿಂತ ಹೆಚ್ಚು ಪ್ರಭಾವಶಾಲಿಯಾಗಿರುವ ಕೇಂದ್ರವು ಸೇತುವೆಯಾಗುವ ಜವಾಬ್ದಾರಿ ಹೊರಬೇಕಿದೆ. ಆದರೆ ಪ್ರಧಾನಿಯವರು ಈ ದಿಸೆಯಲ್ಲಿ ಮಾತನಾಡಿದ್ದನ್ನು ನಾವು ಕೇಳಲಿಲ್ಲ.

ದೇಶದ ಪ್ರತಿಯೋರ್ವ ಪ್ರಜೆಯನ್ನೂ ರಕ್ಷಿಸಲಾಗುವುದು, ತಮ್ಮೆಲ್ಲ ಕ್ರಮಗಳಿಗೆ ತಾವೇ ಜವಾಬ್ದಾರಿ ಹೊರುವುದಾಗಿ ಪ್ರಧಾನಿಯವರು ಪದೇಪದೇ ಹೇಳಿದ್ದಾರೆ. ಮಧ್ಯಮವರ್ಗದ ಹಿನ್ನೆಲೆಯಿಂದ ಬಂದ ತಮಗೆ ದೇಶದ ಸಾಮಾಜಿಕ ಸ್ತರದಲ್ಲಿ ಅತ್ಯಂತ ಕೆಳಮೆಟ್ಟಿಲಿನಲ್ಲಿರುವವರು ಅನುಭವಿಸುವ ಕಷ್ಟಗಳ ಅರಿವಿದೆ ಎಂದವರು ಎದೆ ತಟ್ಟಿಕೊಂಡಿದ್ದರು. ಆದರೆ ನಮ್ಮೊಂದಿಗೆ ಬಾಲಿಶವಾಗಿ ವರ್ತಿಸುತ್ತಿರುವ ವ್ಯಕ್ತಿಯ ಮಾತನ್ನು ನಾವೀಗ ಕೇಳುತ್ತಿದ್ದೇವೆ. ಅವರ ‘ಮನ್ ಕಿ ಬಾತ್’ನಲ್ಲಿ ಮೊದಲೇ ಅನುಮೋದನೆ ಪಡೆದ ಪ್ರಶ್ನೆಗಳಿಗೆ ಮಾತ್ರವೇ ಉತ್ತರಿಸುತ್ತಾರೆ ಹಾಗೂ ಪೂರ್ವಯೋಜಿತ ಪ್ರಶ್ನೋತ್ತರದ ಮಾಧ್ಯಮ ಸಂದರ್ಶನಗಳಲ್ಲಿ ಮಾತ್ರವೇ ಭಾಗವಹಿಸುತ್ತಾರೆ. ಮುಕ್ತವಾದ ಪತ್ರಿಕಾಗೋಷ್ಠಿಯನ್ನು ನಡೆಸಿರಿ ಎಂದು ನೀವು ಏಕೆ ಅವರನ್ನು ಕೇಳುವುದಿಲ್ಲ? ಮೋದಿಯವರನ್ನು ಹೊರತುಪಡಿಸಿದರೆ, ವಿಶ್ವದ ಬೇರೆಲ್ಲ ನಾಯಕರು ಮಾಧ್ಯಮವನ್ನು ಮುಕ್ತವಾಗಿ ಎದುರಿಸುತ್ತಾರೆ.

ಕೋವಿಡ್ ಕಾಯಿಲೆಯು ದೇಶದ ಹೊಸ್ತಿಲಿನಲ್ಲಿ ಇದ್ದಾಗಲೇ ಮೋದಿಯವರು ಎಲ್ಲ ರಾಜಕೀಯ ಪಕ್ಷಗಳನ್ನು ಸೇರಿಸಿ, ನಿರ್ಧಾರ ಮತ್ತು ಕ್ರಮ ಕೈಗೊಳ್ಳುವ ಹೊರೆಯನ್ನು ಹಂಚಿಕೊಳ್ಳಬಹುದಿತ್ತು. ಶತಮಾನದಲ್ಲೊಮ್ಮೆ ಬರಬಹುದಾದ ಮಹಾಮಾರಿಯನ್ನು ನಿಭಾಯಿಸಲು ಯಾರೂ ಪೂರ್ವಸಿದ್ಧತೆ ಮಾಡಿಕೊಂಡಿರುವುದಿಲ್ಲ ನಿಜ. ಆದರೆ ಎಲ್ಲರೂ ಒಟ್ಟಾಗಿ ಸೇರಿ ಇದನ್ನು ಎದುರಿಸಬಹುದಿತ್ತು. ನಾವು ಚುನಾಯಿಸುವುದು ಸಂಸತ್ತಿನ ಸದಸ್ಯರನ್ನೇ ವಿನಾ ರಾಜಕೀಯ ಪಕ್ಷಗಳನ್ನಲ್ಲ ಎಂಬುದನ್ನು ನಾಗರಿಕರಾದ ನಾವೂ ಮರೆತೆವು. ಓರ್ವ ಪ್ರಧಾನಿಯಲ್ಲಿ ಕಾಣಬೇಕು ಎಂದು ನೀವು ಹೇಳುವ ಮುತ್ಸದ್ದಿತನವನ್ನು ಮೋದಿಯವರು ಪ್ರದರ್ಶಿಸಬಹುದಿತ್ತು.

ಕಠಿಣ ಪ್ರಶ್ನೆಗಳನ್ನು ಕೇಳಲು ಸರಿಯಾದ ಸಮಯ ಎಂಬುದಿಲ್ಲ. ನೀವು ಮೌನವಾಗಿರುವ ಪ್ರತಿದಿನವೂ ಇನ್ನಷ್ಟು ಜನರು ಸಾಯುತ್ತಾರೆ. ಇನ್ನಾದರೂ ಅತ್ಯಂತ ತುರ್ತಾಗಿ, ಸಕಾರಾತ್ಮಕವಾದ, ವೈಜ್ಞಾನಿಕವಾದ ಆಡಳಿತಾತ್ಮಕ ಕ್ರಮಗಳನ್ನು ತೆಗೆದುಕೊಳ್ಳದಿದ್ದರೆ, ನಮಗೆ ಅತ್ಯಂತ ಕರಾಳ, ದುರ್ದಿನಗಳು ಕಾದಿವೆ.

ನಿಮಗೆ ಭಾರತದ ಕುರಿತು ಕಾಳಜಿ ಇದ್ದರೆ, ನೀವೀಗ ಗಟ್ಟಿ ದನಿಯಲ್ಲಿ ಮಾತನಾಡುವಿರಿ...

ಲೇಖಕ: ಕರ್ನಾಟಕ ಶಾಸ್ತ್ರೀಯ ಸಂಗೀತ ಗಾಯಕ, ಚಿಂತಕ
(ಲೇಖನದ ಇಂಗ್ಲಿಷ್ ಅವತರಣಿಕೆಯು ದಿ ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಯಲ್ಲಿ ಪ್ರಕಟವಾಗಿದೆ)

ಚುರುಮುರಿ

ಬೆಡ್ ಬವಣೆ

• ಸಿ.ಎನ್.ರಾಜು

‘ಗಿರಿ, ನಮಗೊಂದು ಬೆಡ್ ಕೊಡಿಸೋ...’ ಎನ್ನುತ್ತಾ ಬಂದರು ಶಾರದಮ್ಮ.

‘ಲಾಕ್‌ಡೌನ್ ಮುಗಿದ ಮೇಲೆ ನನ್ನ ಫ್ರೆಂಡ್ ಅಂಗಡಿಯಲ್ಲಿ ಸುಖನಿದ್ರೆ ಬೆಡ್ ಕೊಡಿಸ್ತೀನಿ ಬಿಡಿ ಆಂಟಿ’ ಅಂದ ಗಿರಿ.

‘ರೀ, ಆಂಟಿ ಕೇಳ್ತಿರೋದು ಮನೆ ಬೆಡ್ ಅಲ್ಲ, ಮೆಡಿಕಲ್ ಬೆಡ್, ಯಾವುದಾದ್ರೂ ಆಸ್ಪತ್ರೆಯ ಬೆಡ್ ಕೊಡ್ಸಿ’ ಅಂದಳು ಅನು.

‘ನಿಮ್ಮನೇಲಿ ಯಾರಿಗಾದ್ರೂ ಕೊರೊನಾ ಅಟ್ಯಾಕ್ ಆಗಿದೆಯಾ?’

‘ಬಿಡ್ತು ಅನ್ನು, ಎಲ್ರೂ ಆರೋಗ್ಯವಾಗಿದ್ದೀವಿ. ಮುಂದೆ ಅಟ್ಯಾಕ್ ಆಗೊಲ್ಲ ಅಂತ ಏನ್ ಗ್ಯಾರಂಟಿ? ಕಾಯಿಲೆ ಬಂದಮೇಲೆ ಪರದಾಡುವ ಬದಲು ಈಗಲೇ ಬೆಡ್ಡು, ಆಕ್ಸಿಜನ್ ರಿಸರ್ವ್ ಮಾಡಿಕೊಳ್ಳೋದು ಒಳ್ಳೆಯದಲ್ವಾ?’

‘ನಿಜ ಆಂಟಿ, ಕುಟುಂಬಕ್ಕೊಂದು ರೇಷನ್ ಕಾರ್ಡ್ ಇರುವಂತೆ ಮನೆಗೆರಡು ಆಕ್ಸಿಜನ್ ಬೆಡ್ ಇಟ್ಟುಕೊಂಡಿರಬೇಕು. ಮೊನ್ನೆ ಮಗಳ ಮದುವೆ ಮಾಡಿದ ಸರೋಜಮ್ಮ, ಮಗಳು-ಅಳಿಯನಿಗೆ ಡಬಲ್ ಕಾಟಿನ ಆಕ್ಸಿಜನ್ ಬೆಡ್ ಕೊಟ್ಟರಂತೆ’.

‘ಆಕ್ಸಿಜನ್ ಬೆಡ್ ಮೇಲೆ ಮಲಗುವಂಥ ಯಾವ ರೋಗ ಇತ್ತಂತೆ ಅವರಿಗೆ?’

‘ಅವರ ಬೆಡ್ ರೂಮ್‌ನಲ್ಲಿ ಉಸಿರು ಕಟ್ಟುವ ವಾತಾವರಣವಂತೆ. ಕಿಟಕಿ, ಬಾಗಿಲು ತೆಗೆದರೂ ಫ್ಯಾನು ಹಾಕಿದ್ರೂ ಗಾಳಿ ಸುಳಿಯಲ್ಲವಂತೆ’.

‘ಆಕ್ಸಿಜನ್ ಸಿಲಿಂಡರ್‌ನ ಬೆನ್ನಿಗೆ ಕಟ್ಟಿಕೊಂಡು ಓಡಾಡುವ ಪರಿಸ್ಥಿತಿ ಬರ್ತದೆ... ನಮ್ಮ ಆರೋಗ್ಯ, ಸೌಕರ್ಯವನ್ನು ನಾವೇ ನೋಡಿಕೊಳ್ಳಬೇಕು, ಸರ್ಕಾರವನ್ನು ನಂಬಿಕೊಳ್ಳಲಾಗಲ್ಲ’ ಅಂದ ಗಿರಿ.

‘ಒಡವೆ, ಆಸ್ತಿ ಗಳಿಸಿದ್ರೆ ಸಾಲದು, ಆಕ್ಸಿಜನ್ ಬೆಡ್ ಸಂಪಾದಿಸಿಕೊಂಡ್ರೆ ಕೊರೊನಾ ಬಂದಾಗ ಅವರಿವರ ಬಳಿ ಅಂಗಲಾಚುವುದು ತಪ್ಪುತ್ತದೆ ಅಲ್ವಾ ಆಂಟಿ’ ಅಂದಳು ಅನು.

‘ಕೊರೊನಾ ನಮ್ಮನ್ನು ಬಿಟ್ಟುಹೋಗುವಂತೆ ಕಾಣಲ್ಲ. ನಿಮ್ಮ ಮಗನನ್ನ ಮೆಡಿಕಲ್ ಓದಿಸಿ, ಮನೇಲಿ ಆಕ್ಸಿಜನ್ ಬೆಡ್ ಇಟ್ಟುಕೊಂಡು ನಿಮ್ಮ ಆರೋಗ್ಯವನ್ನು ನೀವೇ ಕಾಪಾಡಿಕೊಳ್ಳಿ...’ ಎಂದು ಹೇಳಿ ಶಾರದಮ್ಮ ಹೊರಟರು.

ಸಂಗತ

ಹೊನ್ನು ಬಿತ್ತಿದ್ದೇವೆ, ಪೊರೆಯೋಣ!

ಕಾಲದ ಒತ್ತಡ, ಜನರೇಷನ್ ಗ್ಯಾಪ್ ಅನ್ನು ಅರ್ಥೈಸಿಕೊಂಡು ಬೆಳೆಯುವ ಭವಿಷ್ಯದ ಕುಡಿಗಳನ್ನು ತಿದ್ದುವ ನೈತಿಕತೆಯನ್ನು ಸಮಾಜ ಉಳಿಸಿಕೊಳ್ಳುವುದು ಮುಖ್ಯ

• ಸತೀಶ್ ಜಿ.ಕೆ. ತೀರ್ಥಹಳ್ಳಿ

ಜಗತ್ತು ವಿಸ್ತರಿಸುತ್ತಿದೆ. ಆಕಾಶಕಾಯಗಳು ದೂರದೂರ ಸರಿಯುತ್ತಿವೆ. ಜೀವ ವಿಕಾಸಗೊಳ್ಳುತ್ತಲೇ ಇದೆಯಾದರೂ ಅನುಬಂಧಗಳು ಸಡಿಲಗೊಳ್ಳುತ್ತಾ ಸಾಗಿವೆ. ವಿಜ್ಞಾನ- ತಂತ್ರಜ್ಞಾನಗಳಂತೆ ಮೈಮನಸುಗಳಿಗೂ ಈಗ ನೂರ್ಮಡಿ ವೇಗ. ಎಲ್ಲೆಡೆ ಗೆಲ್ಲುವ, ನಿಸರ್ಗಚಕ್ರವನ್ನು ತಿರುಚುವ ಧಾವಂತ. ಕಾರಣ, ಇದು ವೇಗದ ಜಮಾನ!

ಯೌವನವೊಂದು ಸಂದಿಗ್ಧ ಕಾಲ. ಪ್ರೌಢ ಹಂತ ದಾಟಿಯಾದ ಮೇಲೆ ಬದುಕು ಕಲಿಸುವ ಕುಲುಮೆಯಾಗಿ, ಸ್ಪರ್ಧಾ ಜಗತ್ತಿನ ಬೆಳಕಿಂಡಿಯಾಗಿ ನಿಲ್ಲಬೇಕಿರುವುದು ಕಾಲೇಜು ಶಿಕ್ಷಣ. ವಿದ್ಯಾರ್ಥಿ ಕೇಂದ್ರಿತ ಶಿಕ್ಷಣ ಪದ್ಧತಿಯಲ್ಲಿ ವಿದ್ಯಾರ್ಥಿಯ ಸರ್ವತೋಮುಖ ಪ್ರಗತಿಗೀಗ ವಿಪುಲ ಅವಕಾಶಗಳಿವೆ. ಜ್ಞಾನಾರ್ಜನೆ, ವಿಷಯದ ತಾತ್ವಿಕ ಅಧ್ಯಯನಕ್ಕೆ ಸರ್ಕಾರ- ಸ್ವಯಂಸೇವಾ ಸಂಸ್ಥೆಗಳ ಪ್ರೇರಣೆ- ಪ್ರೋತ್ಸಾಹಗಳಿಗೇನೂ ಕೊರತೆಯಿಲ್ಲ.

ಕೊಠಾರಿ ಶಿಕ್ಷಣ ಸುಧಾರಣಾ ಆಯೋಗವು ‘ದೇಶದ ಭವಿಷ್ಯವು ತರಗತಿ ಕೋಣೆಗಳಲ್ಲಿ ರೂಪುಗೊಳ್ಳುತ್ತದೆ...’ ಎಂದು ಹೇಳಿತ್ತು. ಆದರೆ, ಹದಗೊಂಡ ನೆಲದಲ್ಲಿ ಶ್ರಮ ಬಿತ್ತಿ ಯಶಸ್ಸಿನ ಫಸಲುಣ್ಣಬೇಕಾದ ಕೃಷಿಕನೀಗ ಅಲ್ಲಿ ಕಾಣೆಯಾಗುತ್ತಿದ್ದಾನೆ. ಅವನಲ್ಲಿ ಕಲಿಕೆಗಿಂತ ಅನ್ಯವಿಚಾರಗಳೇ ಮುಂಚೂಣಿಯಲ್ಲಿವೆ ಅನ್ನುವುದು ವಿದ್ಯಾರ್ಥಿಗಳ ಮೇಲಿನ ಗಂಭೀರ ಆರೋಪ.

ಯುವ ಮನಸುಗಳ ಅಸಹಜ ನಡೆಗೆ ಇರಬಹುದಾದ ಕಾರಣಗಳನ್ನು ವಿಭಿನ್ನ ಆಯಾಮಗಳಲ್ಲಿ ಚಿಕಿತ್ಸಕ ದೃಷ್ಟಿಯಲ್ಲಿ ಗ್ರಹಿಸಬೇಕಿದೆ. ಕೊರೊನಾ ಕಾಲದಲ್ಲಂತೂ ತುರ್ತು ಎಂಬಂತೆ ಕೈಸೇರಿದ ಬೈಕು- ಮೊಬೈಲುಗಳ ಗೀಳು- ಮೋಜಲ್ಲಿ ಅಜಾಗರೂಕವಾಗಿ ಆಹ್ವಾನಿಸಿದ ಅಪಘಾತಗಳ ಚಿತ್ರ, ಸಂಯಮ ಕಳೆದುಕೊಂಡು ಮೊರೆಹೋದ ಆತ್ಮಹತ್ಯೆಗಳಲ್ಲಿ ಎಳೆಯ ಜೀವಗಳು ಅರಳುವ ಮೊದಲೇ ಅಂತ್ಯಗೊಂಡದ್ದು, ಮಹಾನಗರಗಳಿಗೆ ಸೀಮಿತವಾಗಿದ್ದ ಮಾದಕವಸ್ತು ಜಾಲ ಈಗೀಗ ಮಲೆನಾಡಲ್ಲೂ ಲೀಲಾಜಾಲ. ಯುವಕರಲ್ಲಿ ಹೆಚ್ಚುತ್ತಿರುವ ಮಾದಕವ್ಯಸನ, ಸಿಗರೇಟ್- ಮದ್ಯ ಸೇವನೆ, ಮೊಬೈಲ್ ಗೇಮ್‌ನಲ್ಲಿಯ ಮೈಮರೆವು ದಿನಬೆಳಗಾದರೆ ಹೆತ್ತವರನ್ನು ಬೆಚ್ಚಿಬೀಳಿಸುತ್ತದೆ.

ಮನೋವಿಜ್ಞಾನದ ಪ್ರಕಾರ, ‘ವರ್ತನೆಯಲ್ಲಾಗುವ ಬದಲಾವಣೆಯೇ ಕಲಿಕೆ’. ಆದರೆ ಕಲಿಕೆಯು ಬುದ್ಧಿ-ಭಾವಗಳ ಪರಿಧಿಯನ್ನು ವಿಸ್ತರಿಸುವ, ಜೀವನ ಕೌಶಲಗಳನ್ನು ಹರಿತಗೊಳಿಸುವ, ಅನ್ನದ ಮೂಲ ಹುಡುಕುವ, ಬದುಕಿನ ಮೌಲ್ಯಗಳನ್ನು ಒಳಗೊಳ್ಳುವಲ್ಲಿ ಸೋಲುತ್ತಿರುವುದು ಸ್ಪಷ್ಟ.

ಆದರ್ಶರಹಿತ ಸಮಾಜದಲ್ಲಿ ಹಣವೆಂಬುದು ಇನ್ನಿಲ್ಲದ ಮಾನ್ಯತೆ ಪಡೆಯುತ್ತಿರುವಾಗ, ಬೆವರುಬಸಿವ ಅಪ್ಪನ ಬಿಡಿಗಾಸು ಕೇವಲವೆನಿಸಿ, ಸತ್ಯ-ನಿಷ್ಠೆಗಳು ಅಪ್ರಸ್ತುತವೆನಿಸುತ್ತವೆ. ಬೆರಳತುದಿಯಲ್ಲಿ ಬ್ರಹ್ಮಾಂಡವೇ ತೆರೆದುಕೊಳ್ಳುತ್ತಿರುವ ಹೊತ್ತಿನಲ್ಲಿ ತರಗತಿಯ ಪಾಠಗಳು ಸಪ್ಪೆಸಪ್ಪೆ. ಕುಟುಂಬದ ಸಂಬಂಧ- ಆಚರಣೆಗಳಲ್ಲೂ ಒಲವಿಲ್ಲ. ವಿದ್ಯಾರ್ಥಿನೆಲೆಯಲ್ಲಿ ತಿಳಿಗೊಳ ಕದಡುತ್ತಿರುವುದಕ್ಕೆ ಕಾರಣಗಳಿವೆ. ಯುವಮನಸುಗಳ ಎದುರಿಗೆ ಆದರ್ಶಗಳಿಲ್ಲ. ಕೇವಲ ಆದಾಯ ಪ್ರಮಾಣಪತ್ರಕ್ಕೆಂದು ಕಚೇರಿ ಮೆಟ್ಟಿಲೇರಿದವನಿಗಾಗುವ ಕಹಿ ಅನುಭವಗಳು ತರಗತಿಯ ಆದರ್ಶಗಳನ್ನೆಲ್ಲ ಮಣ್ಣುಪಾಲು ಮಾಡಲು ಸಾಕಾಗುತ್ತವೆ.

ಮೂಲಭೂತ ಅಗತ್ಯಗಳಾದ ಆಹಾರ, ಆರೋಗ್ಯ ಮತ್ತು ವಿದ್ಯಾಕ್ಷೇತ್ರಗಳು ಲಾಭಕೋರರ ಕೈವಶವಾಗಿವೆ. ಬಲಿಷ್ಠರಾದವರು ಅನಾಚಾರ, ವೈಭೋಗಗಳಲ್ಲಿ ಮುಳುಗೇಳುತ್ತಿರುವ ವಿಚಾರ ತಿಳಿಯುವ ಕುದಿಮನಸುಗಳಲ್ಲಿ ಭ್ರಮನಿರಸನ. ಬಿಸಿರಕ್ತಗಳ ಹೃದಯ ಬೆಸೆಯಬೇಕಾದ ಹೊತ್ತಲ್ಲಿ ಅವುಗಳ ಮನಸು ಒಡೆಯುವ ಪ್ರಕ್ರಿಯೆಗಳು ಸದಾ ಚಾಲ್ತಿಯಲ್ಲಿರುತ್ತವೆ. ತಾರುಣ್ಯವೆಂದರೆ ಮೊದಲೇ ಗೊಂದಲದ ಗೂಡು. ಯುವಕರನ್ನು ಮುತ್ತಿಕೊಳ್ಳುತ್ತಿರುವ ವಿಷಮ ಪ್ರಭಾವಳಿಗಳಿಂದ ಬಿಡಿಸಿಕೊಳ್ಳುವ ದಾರಿ ಹುಡುಕಬೇಕಿದೆ. ಎಲ್ಲ ಕಾಲಕ್ಕೂ ದೇಶದ ಆಸ್ತಿಯೂ ಶಕ್ತಿಯೂ ಆಗಿರುವ ಯುವಜನತೆ, ಬೆಳಕಿನ ಬೀಜಗಳಾಗಿ ಮೊಳೆಯಬೇಕು. ನಾಳಿನ ಭರವಸೆಗಳಾಗಿ ಬೆಳೆಯಬೇಕು.

ಯುವಸಮೂಹವನ್ನು ದೂರುತ್ತಾ ಕೂತರೆ ಪ್ರಯೋಜನವಿಲ್ಲ. ಸಮಸ್ಯೆಯ ತಾಯಿಬೇರು ಇರುವುದು ಸಾಮಾಜಿಕ ಮತ್ತು ಕೌಟುಂಬಿಕ ವ್ಯವಸ್ಥೆಯಲ್ಲಿ. ಬೆಳೆಯುವ ಭವಿಷ್ಯದ ಕುಡಿಗಳನ್ನು ‘ಹೊನ್ನ ಬಿತ್ತೇವ ಹೊಲಕೆಲ್ಲಾ...’ ಎಂಬಂತೆ ಆಸ್ಥೆಯಿಂದ ಪೊರೆಯಬೇಕು. ಅದು ಜಾಗೃತ ಸಮಾಜದ ಜವಾಬ್ದಾರಿಯೂ ಹೌದು. ಸಮಾಜವೀಗ ಜಾತಿ, ಹಣ, ಸ್ವಾರ್ಥ, ಭ್ರಷ್ಟಾಚಾರ, ಬಾಹ್ಯ ಸೌಂದರ್ಯಗಳ ಬೆನ್ನುಬೀಳದೆ, ತನ್ನ ಸಂತತಿಯನ್ನು ತಿದ್ದುವ ನೈತಿಕತೆಯನ್ನು ಉಳಿಸಿಕೊಳ್ಳುವುದು ಮುಖ್ಯ.

ಅಕ್ಷರಗಳ ಅರಿವನ್ನಷ್ಟೇ ಮಕ್ಕಳಿಗಿತ್ತರೆ ಸಾಲದು, ಸಂಸ್ಕಾರದ ತಳಹದಿಯ ಮೇಲೆ ಬದುಕು ಕಟ್ಟಿಕೊಡಬೇಕು. ಪ್ರೀತಿಯ ತುಂತುರನ್ನು ಅಲ್ಲಿ ಸದಾಕಾಲ ಹನಿಸಬೇಕು. ಮಕ್ಕಳಿಗೆ ಕ್ರೀಡೆ, ಸಾಹಿತ್ಯ-ಸಂಗೀತ, ಪುಸ್ತಕ ಓದುವಂತಹ ಆರೋಗ್ಯಕರ ಹವ್ಯಾಸಗಳ ಹುಚ್ಚು ಹಿಡಿಸಬೇಕಿದೆ. ಸಾವಧಾನದ-ಧ್ಯಾನದ ಮಹತ್ವವನ್ನು ಮನಗಾಣಿಸುವುದು ಈಗ ಮೊದಲಿಗಿಂತ ಹೆಚ್ಚು ಅಗತ್ಯ.

ತಮ್ಮದೇ ಆರೋಗ್ಯ, ನೆಮ್ಮದಿ, ಬಾಂಧವ್ಯ ಮರೆತು ಸಂಪತ್ತು ಕ್ರೋಡೀಕರಣಕ್ಕೆ ಹಗಲಿರುಳು ಹೊಯ್ದಾಡುವ ಪೋಷಕವರ್ಗದ ಆತ್ಮಾವಲೋಕನಕ್ಕೆ ಇದು ಸಕಾಲ. ಹಿರಿಯರೆಲ್ಲ ಸರಳ ಜೀವನವಿಧಾನ ಮತ್ತು ಸಮಷ್ಟಿ ಪ್ರಜ್ಞೆಯಲ್ಲಿ ಮಾನವೀಯ ಮೌಲ್ಯಗಳಿಗೆ ಆದ್ಯತೆ ನೀಡಿದಲ್ಲಿ ಮಾತ್ರ ಕನಸಿನ ನಾಳೆಗಳಲ್ಲಿ ಕರುಳಕುಡಿಗಳು ಸಾರ್ಥಕವಾಗಿ, ಸಂತುಷ್ಟರಾಗಿ ಬಾಳುವುದು ಸಾಧ್ಯವಾದೀತು.

ವಾಚಕರ ವಾಣಿ

ವಕೀಲರ ಭವನ ಸದುಪಯೋಗವಾಗಲಿ

ಕೊರೊನಾ ಸೋಂಕಿನ ತೀವ್ರತೆ ಹೆಚ್ಚಾಗಿರುವುದರಿಂದ ಅಧೀನ ನ್ಯಾಯಾಲಯಗಳು ವಿಡಿಯೊ ಕಾನ್ಫರೆನ್ಸಿಂಗ್ ಮತ್ತು ಆನ್‌ಲೈನ್ ಮೂಲಕ ಪ್ರಕರಣಗಳ ವಿಚಾರಣೆ ನಡೆಸಲು ಹೈಕೋರ್ಟ್ ಅವಕಾಶ ಮಾಡಿಕೊಟ್ಟಿದೆ. ಇದರಿಂದ ವಕೀಲರು ನ್ಯಾಯಾಲಯಕ್ಕೆ ಬರದೆ ತಮ್ಮ ಮನೆ, ಕಚೇರಿಯಿಂದ ವಿಚಾರಣೆಯಲ್ಲಿ ಭಾಗವಹಿಸುತ್ತಿದ್ದಾರೆ. ಹೈಕೋರ್ಟ್ ಶಾಖೆಗಳಲ್ಲಿ, ವಿಭಾಗ ಮಟ್ಟದಲ್ಲಿ, ಜಿಲ್ಲಾ ಮಟ್ಟದಲ್ಲಿರುವ ನ್ಯಾಯಾಲಯಗಳಿಗೆ ಹೊಂದಿಕೊಂಡಂತೆ ವಿಶಾಲವಾದ ಹಾಗೂ ತಾಲ್ಲೂಕು ಮಟ್ಟದಲ್ಲೂ ಸಾಕಷ್ಟು ದೊಡ್ಡದಾದ ವಕೀಲರ ಭವನಗಳಿವೆ. ಕೋವಿಡ್ ಹಾವಳಿ ನಿಲ್ಲುವವರೆಗೂ ರೋಗಿಗಳ ಸೂಕ್ತ ಚಿಕಿತ್ಸೆಗೆ ಅವಕಾಶ ಮಾಡಿಕೊಡಲು ವಕೀಲರ ಭವನಗಳನ್ನು ಒದಗಿಸುವುದು ಮಾನವೀಯತೆಯ ದೃಷ್ಟಿಯಿಂದ ಅವಶ್ಯಕವಾದುದು. ಈ ದಿಸೆಯಲ್ಲಿ ವಕೀಲರ ಪರಿಷತ್ತಿನ ಸದಸ್ಯರು ವಕೀಲರ ಸಂಘಗಳ ಪದಾಧಿಕಾರಿಗಳ ಮನವೊಲಿಸಲು ಮುಂದಾಗಬೇಕು.

ಬಸವರಾಜ ಹುಡೇದಗಡ್ಡಿ, ಮೈಸೂರು

ಸಾಂಸ್ಕೃತಿಕ ಸಾಂತ್ವನ ಕೇಂದ್ರ ಅಗತ್ಯ

ಕೋವಿಡ್ ಕಾರಣದಿಂದ ವಿಧಿಸಿರುವ ಲಾಕ್‌ಡೌನ್ ವಿಸ್ತರಣೆಯಾಗುವಂತೆ ಕಾಣುತ್ತಿದೆ. ಇಂತಹ ಕ್ಲಿಷ್ಟಕರ ವಾತಾವರಣದಲ್ಲಿ ರಂಗಭೂಮಿ, ಚಲನಚಿತ್ರ, ಕಿರುತೆರೆ, ಜಾನಪದ, ಆರ್ಕೆಸ್ಟ್ರಾ, ಮ್ಯಾಜಿಕ್ ಸೇರಿದಂತೆ ವಿವಿಧ ಕಲಾಪ್ರಕಾರಗಳ ಕಲಾವಿದರ ವರಮಾನ ನಿಂತುಹೋಗಿದೆ. ಈ ಸಂದರ್ಭದಲ್ಲಿ ರಾಜ್ಯ ಸರ್ಕಾರ ಪ್ರತೀ ಜಿಲ್ಲೆಗೂ ಸಾಂಸ್ಕೃತಿಕ ಸಾಂತ್ವನ ಕೇಂದ್ರ ಸ್ಥಾಪಿಸಬೇಕು. ಈ ಮೂಲಕ ಕೋವಿಡ್ ತಪಾಸಣೆ, ಲಸಿಕೆ ನೀಡುವಿಕೆ, ಆದ್ಯತೆ ಮೇರೆಗೆ ರೇಷನ್ ವಿತರಣೆಯಂತಹ ಅಗತ್ಯ ಸೌಲಭ್ಯಗಳನ್ನು ಕಲ್ಪಿಸಲು ತುರ್ತು ಕ್ರಮ ಕೈಗೊಳ್ಳಬೇಕಿದೆ.

ಆರ್.ವೆಂಕಟರಾಜು, ಬೆಂಗಳೂರು

ಹೀಗಿದೆ ನೋಡಿ...

ಸರ್ಕಾರಿ ಕಚೇರಿಗಳಲ್ಲಿ
ಸಾವಿರಾರು ಹುದ್ದೆಗಳು
ಖಾಲಿ ಬಿದ್ದಿದ್ದರೂ
ನೋ ಟೆನ್ಷನ್,
ಆದರೆ...
ವಿಧಾನಸೌಧದಲ್ಲಿ ಮಾತ್ರ
ಒಂದು ಸ್ಥಾನ ತೆರವಾದರೂ
ತಡವೇ ಇಲ್ಲದೆ ನಡೆಯುತ್ತದೆ
ಬೈ ಎಲೆಕ್ಷನ್!

ಜೆ.ಬಿ.ಮಂಜುನಾಥ
ಪಾಂಡವಪುರ

ಬೇಕಿದೆ ಆಮ್ಲಜನಕ ಬಸ್ ಸೇವೆ

ಬೆಂಗಳೂರಿನಲ್ಲಿ ಬಿಎಂಟಿಸಿ ವತಿಯಿಂದ ಪ್ರಾರಂಭಿಸಲಾದ ಆಕ್ಸಿಜನ್ ಬಸ್ ಸೇವೆಯು ಯಶಸ್ವಿಯಾಗಿರುವುದರಿಂದ, ಈ ಸೇವಾ ಸೌಲಭ್ಯವನ್ನು ರಾಜ್ಯದ ಎಲ್ಲ ಜಿಲ್ಲಾ ಕೇಂದ್ರಗಳಿಗೂ ರಾಜ್ಯ ಸರ್ಕಾರ ವಿಸ್ತರಿಸಬೇಕು. ಬಹುತೇಕ ಎಲ್ಲ ಆಸ್ಪತ್ರೆಗಳಲ್ಲೂ ಕೋವಿಡ್ ರೋಗಿಗಳ ದಟ್ಟಣೆ ಹೆಚ್ಚಾಗಿರುವುದರಿಂದ, ರೋಗಿಗಳು ಹೊಸದಾಗಿ ಬಂದು ಸೇರಿದಾಗ ಅವರಿಗೆ ಆಸ್ಪತ್ರೆಯಲ್ಲಿ ಆಮ್ಲಜನಕ ನೀಡುವುದು ವಿಳಂಬವಾಗುತ್ತಿದೆ. ಅಷ್ಟೇ ಅಲ್ಲ, ಆಸ್ಪತ್ರೆಯಲ್ಲಿ ಸ್ಥಳಾಭಾವದಿಂದ ರೋಗಿಗಳಿಗೆ ಅಲ್ಲಿ ಕುಳಿತು ಕಾಯುವುದಕ್ಕೂ ಕಷ್ಟವಾಗುತ್ತಿದೆ. ಇದನ್ನೆಲ್ಲ ತಪ್ಪಿಸಲು ಸಾರ್ವಜನಿಕರಿಗೆ ಬಸ್ಸಿನಲ್ಲಿಯೇ ತುರ್ತು ಆಮ್ಲಜನಕ ಸೌಲಭ್ಯ ಒದಗಿಸಿದರೆ ಉಪಯುಕ್ತ ಎನಿಸುತ್ತದೆ. ಆಮ್ಲಜನಕ ಪೂರೈಸಲು ಅನುಕೂಲವಾಗುವಂತೆ ವಿಶೇಷವಾಗಿ ವಿನ್ಯಾಸಗೊಳಿಸಿದ ಕೆಎಸ್‌ಆರ್‌ಟಿಸಿ ಬಸ್ಸುಗಳನ್ನು ಎಲ್ಲಾ ಜಿಲ್ಲೆಗಳ ಸರ್ಕಾರಿ ಆಸ್ಪತ್ರೆಗಳ ಆವರಣದಲ್ಲಿ ಇರಿಸಬೇಕು. ಈ ಬಸ್ಸುಗಳಲ್ಲಿ ತುರ್ತಾಗಿ ಅಗತ್ಯ ಆಮ್ಲಜನಕ ಪಡೆದುಕೊಳ್ಳಲು ಸಾಧ್ಯವಾಗುವಂತೆ ಎಲ್ಲ ವೈದ್ಯಕೀಯ ಉಪಕರಣಗಳನ್ನೂ ಅಳವಡಿಸಬೇಕು. ಈಗಾಗಲೇ ಬಹಳಷ್ಟು ಖಾಸಗಿ ಸಂಸ್ಥೆಗಳು ಇಂತಹ ಸಹಕಾರ ನೀಡಲು ಮುಂದೆ ಬಂದಿವೆ. ಇದನ್ನು ಸರ್ಕಾರ ಸದುಪಯೋಗ ಪಡಿಸಿಕೊಳ್ಳಬೇಕು.

ವಿಜಯಕುಮಾರ್ ಎಚ್.ಕೆ., ರಾಯಚೂರು

ನಾವೂ ಇಚ್ಛಾಶಕ್ತಿ ತೋರೋಣ

ಕಳೆದ ವರ್ಷ ಅಮೆರಿಕ ದೇಶವನ್ನು ಹೈರಾಣಾಗಿಸಿದ್ದ ಕೋವಿಡ್ ಸಾಂಕ್ರಾಮಿಕ, ಅಲ್ಲಿನ ಸರ್ಕಾರದ ಇಚ್ಛಾಶಕ್ತಿಯ ಫಲವಾಗಿ ಈಗ ಸಹಜ ಸ್ಥಿತಿಯತ್ತ ಮರಳುತ್ತಿದೆ. ಆ ದೇಶದ ಅಧ್ಯಕ್ಷ ಮತ್ತು ಉಪಾಧ್ಯಕ್ಷರು ಇತ್ತೀಚೆಗೆ ಜಂಟಿ ಸುದ್ದಿಗೋಷ್ಠಿ ನಡೆಸಿ, ದೇಶದ ಪ್ರಸ್ತುತ ಕೋವಿಡ್ ಬೆಳವಣಿಗೆಯ ಬಗ್ಗೆ ಸಂತೋಷ ಹಂಚಿಕೊಂಡಿದ್ದಾರೆ. ಕೋವಿಡ್ ನಿಯಂತ್ರಣಕ್ಕೆ ಎರಡು ಡೋಸ್ ಲಸಿಕೆ ಪಡೆದವರು ಇನ್ನು ಮುಂದೆ ಮಾಸ್ಕ್ ಧರಿಸಬೇಕಿಲ್ಲ, ಅಂತರ ಕಾಪಾಡಿಕೊಳ್ಳಬೇಕಿಲ್ಲ ಎಂದು ಘೋಷಿಸುವ ಮೂಲಕ ಅಲ್ಲಿನ ಜನರಿಗೆ ಸಂತಸದ ವಿಚಾರ ತಿಳಿಸಿದ್ದಾರೆ. ಪ್ರಸ್ತುತ ಭಾರತದಲ್ಲಿ ಕೋವಿಡ್ ಎರಡನೇ ಅಲೆ ವ್ಯಾಪಕವಾಗಿ ಹರಡುತ್ತಿದ್ದು ಜನಜೀವನವನ್ನು ಅಸ್ತವ್ಯಸ್ತಗೊಳಿಸಿದೆ. ಹಾಗಾಗಿ ಅಮೆರಿಕನ್ನರ ಈ ನಡೆ ಭಾರತಕ್ಕೆ ಮಾದರಿಯಾಗಬೇಕಿದೆ.

ಶ್ರೀಧರ್ ಡಿ. ರಾಮಚಂದ್ರಪ್ಪ, ತುರುವನೂರು, ಚಿತ್ರದುರ್ಗ

ವೈದ್ಯಕೀಯ ಉಪಕರಣ: ದರಕ್ಕೆ ಇರಲಿ ಕಡಿವಾಣ

ದೇಶದಲ್ಲಿ ಕೊರೊನಾ ಸೋಂಕು ಕಾಣಿಸಿಕೊಂಡಾಗಿನಿಂದ ಇಲ್ಲಿಯವರೆಗೂ ಪಲ್ಸ್ ಆಕ್ಸಿಮೀಟರ್‌ನ ಬೆಲೆ ಒಂದೇ ಸಮನೆ ಹೆಚ್ಚಾಗುತ್ತಲೇ ಇದೆ. ವರ್ಷದ ಹಿಂದೆ ಒಂದು ಪಲ್ಸ್ ಆಕ್ಸಿಮೀಟರ್ ₹ 600ರಿಂದ 1000ದವರೆಗೆ ದೊರೆಯುತ್ತಿತ್ತು. ಬೇಡಿಕೆ ಹೆಚ್ಚಾದಂತೆಲ್ಲ ಅದನ್ನೇ ಕೆಲವರು ₹ 2000ದಿಂದ 3000ದವರೆಗೂ ಈಗ ಮಾರಾಟ ಮಾಡುತ್ತಿದ್ದಾರೆ. ಕೊರೊನಾ ಸೋಂಕು ದಿಢೀರನೆ ಏರಿದ ಗತಿಯಲ್ಲಿಯೇ ಪಲ್ಸ್ ಆಕ್ಸಿಮೀಟರ್‌ನ ಬೆಲೆಯೂ ಏರಿಕೆಯಾಗಿರುವುದು ದುರಂತ. ಅದರಲ್ಲೂ ಪಲ್ಸ್ ಆಕ್ಸಿಮೀಟರ್‌ಗೆ ಮುಂಗಡ ಹಣ ನೀಡಿದರಷ್ಟೇ ನಾಲ್ಕೈದು ದಿನ ಬಿಟ್ಟು ಮೆಡಿಕಲ್ ಶಾಪ್‌ನವರು ತರಿಸಿಕೊಡುತ್ತಾರೆ.

ರಕ್ತದಲ್ಲಿನ ಆಮ್ಲಜನಕದ ಪ್ರಮಾಣ ಕಡಿಮೆಯಾಗುತ್ತಿದ್ದರೆ ಮುಂಜಾಗ್ರತಾ ಕ್ರಮವಾಗಿ ಮನೆಯಲ್ಲಿಯೇ ಪರಿಶೀಲಿಸಿ ಆಸ್ಪತ್ರೆಗೆ ಬರಲು ಅನುಕೂಲವಾಗಲಿ ಎಂಬ ದೃಷ್ಟಿಯಿಂದ ವೈದ್ಯರು ಪಲ್ಸ್ ಆಕ್ಸಿಮೀಟರ್ ಬಳಕೆಗೆ ಸಲಹೆ ನೀಡುತ್ತಾರೆ. ಇದರಿಂದಲೇ ಬೇಡಿಕೆ ಹೆಚ್ಚಾಗಿ ಬೆಲೆ ಏರಿಕೆಗೆ ಕಾರಣವಾಗಿರಬಹುದು ಅಥವಾ ಮೆಡಿಕಲ್ ಮಾಫಿಯಾದ ಕೈವಾಡವೂ ಇದ್ದಿರಬಹುದು.

ಕೊರೊನಾ ಭಾರತಕ್ಕೆ ಕಾಲಿಟ್ಟ ಸಮಯದಲ್ಲಿ ಮಾಸ್ಕ್ ಮತ್ತು ಸ್ಯಾನಿಟೈಸರ್‌ನ ಬೆಲೆಯೂ ಇದೇ ರೀತಿ ಏರಿಕೆಯಾಗಿತ್ತು. ಸರ್ಕಾರ ಇದಕ್ಕೆ ಪರ್ಯಾಯ ಮಾರ್ಗ ಹುಡುಕಿ, ಇಂತಹ ಅಗತ್ಯ ವಸ್ತುಗಳ ಬೆಲೆಯೇರಿಕೆಗೆ ಕಡಿವಾಣ ಹಾಕಬೇಕು. ಇಲ್ಲವೇ ಜನೌಷಧಿ ಮಳಿಗೆಗಳ ಮೂಲಕ ರಿಯಾಯಿತಿ ದರದಲ್ಲಿ ವಿತರಿಸಬೇಕು.

ಮುರುಗೇಶ ಡಿ., ದಾವಣಗೆರೆ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಉನ್ನಾವೊದಲ್ಲಿ ಗಂಗಾ ನದಿ ದಂಡೆಯಲ್ಲಿ ಮೃತರ ಅಂತ್ಯ ಸಂಸ್ಕಾರಕ್ಕಾಗಿ ಕಾದಿರುವ ಜನರು —ಪಿಟಿಐ ಚಿತ್ರ

ಗಂಗಾ ನದಿಯಲ್ಲಿ ತೇಲಿದ ಹೆಣಗಳು

ಯಾರದ್ದೋ ಗೊತ್ತಿಲ್ಲದ, ವಾರಸುದಾರರೂ ಇಲ್ಲದ ಹತ್ತಾರು ಹೆಣಗಳು 'ಪವಿತ್ರ' ಗಂಗಾ ನದಿಯಲ್ಲಿ ಇತ್ತೀಚಿನ ದಿನಗಳಲ್ಲಿ ತೇಲಿ ಬಂದಿವೆ. ಉತ್ತರ ಪ್ರದೇಶ ಮತ್ತು ಬಿಹಾರದಲ್ಲಿ ಹಲವು ಹೆಣಗಳು ಪತ್ತೆಯಾಗಿವೆ. ಉತ್ತರ ಪ್ರದೇಶದಿಂದಲೇ ಇವು ತೇಲಿ ಬಂದಿವೆ ಎಂದು ಹೇಳಲಾಗುತ್ತಿದೆ. ಕೋವಿಡ್-19ರ ಎರಡನೇ ಅಲೆಯ ಘೋರ ಮುಖವನ್ನು ಇದು ಅನಾವರಣಗೊಳಿಸಿದೆ. ಉತ್ತರ ಪ್ರದೇಶದಲ್ಲಿ ಪ್ರತಿ ದಿನವೂ 200-300 ಜನರು ಕೋವಿಡ್‌ನಿಂದ ಸಾಯುತ್ತಿದ್ದಾರೆ ಎಂಬುದು ಅಧಿಕೃತವಾಗಿ ದಾಖಲಾಗುತ್ತಿರುವ ಲೆಕ್ಕ. ಆದರೆ, ಗ್ರಾಮೀಣ ಪ್ರದೇಶದಲ್ಲಿ ಸಾವಿನ ಸಂಖ್ಯೆ ದಿಗಿಲು ಹುಟ್ಟಿಸುವಷ್ಟು ಹೆಚ್ಚು ಎಂದು ಹೇಳಲಾಗುತ್ತಿದೆ. ನದಿಯಲ್ಲಿ ತೇಲಿ ಬರುತ್ತಿರುವ ಹೆಣಗಳು ಈ ಕಳವಳಕ್ಕೆ ಪುಷ್ಟಿ ಒದಗಿಸುತ್ತಿವೆ.

ಮೃತಪಟ್ಟವರ ಅಂತ್ಯ ಸಂಸ್ಕಾರವನ್ನು ಅತ್ಯಂತ ಗೌರವ ಮತ್ತು ಘನತೆಯಿಂದ ಮಾಡುವ ಸಂಸ್ಕೃತಿ ನಮ್ಮಲ್ಲಿದೆ. ಹಾಗಿದ್ದರೂ ಹೆಣಗಳು ಈ ಪ್ರಮಾಣದಲ್ಲಿ ನದಿಯಲ್ಲಿ ತೇಲಿದ್ದು ಹೇಗೆ ಎಂಬ ಪ್ರಶ್ನೆ ಇದೆ. ಅಂತ್ಯಸಂಸ್ಕಾರಕ್ಕೆ ದೊಡ್ಡ ಮೊತ್ತ ಖರ್ಚಾಗುತ್ತದೆ. ಕೋವಿಡ್‌ನಿಂದಾಗಿ ಅತಿ ಹೆಚ್ಚು ಸಂಖ್ಯೆಯಲ್ಲಿ ಜನರು ಸಾಯುತ್ತಿರುವುದರಿಂದ ಕಟ್ಟಿಗೆ ಅಭಾವ ಎದುರಾಗಿದೆ. ಹಾಗಾಗಿ, ದೇಹವನ್ನು ಸುಡುವ ಬದಲು ಸಂಬಂಧಿಕರು ನದಿಗೆ ಎಸೆಯುತ್ತಿದ್ದಾರೆ ಎಂದು ಹೇಳಲಾಗುತ್ತಿದೆ.

ಕೋವಿಡ್‌ನಿಂದಾಗಿ ಜನರ ಆದಾಯದಲ್ಲಿ ಭಾರಿ ಇಳಿಕೆಯಾಗಿದೆ. ಇಂತಹ ಸಂದರ್ಭದಲ್ಲಿ ಅಂತ್ಯಸಂಸ್ಕಾರಕ್ಕೆ ದೊಡ್ಡ ಮೊತ್ತ ವೆಚ್ಚ ಮಾಡುವ ಸ್ಥಿತಿಯಲ್ಲಿ ಜನರು ಇಲ್ಲ. 'ಹಿಂದೆಲ್ಲ ₹600ಕ್ಕೆ ಒಂದು ಶವದ ಅಂತ್ಯಸಂಸ್ಕಾರಕ್ಕೆ ಬೇಕಾದ ಕಟ್ಟಿಗೆ ದೊರಕುತ್ತಿತ್ತು. ಈಗ ಅಷ್ಟೇ ಕಟ್ಟಿಗೆಗೆ ₹2,000 ಹೇಳುತ್ತಾರೆ. ಎಲ್ಲ ಖರ್ಚುಗಳು ಸೇರಿದರೆ ₹10,000 ಬೇಕಾಗುತ್ತದೆ. ಹೀಗಾಗಿಯೇ ಜನರು ದೇಹಗಳನ್ನು ಹೂಳುತ್ತಿದ್ದಾರೆ' ಎಂದು ಸ್ಥಳೀಯ ವ್ಯಕ್ತಿಯೊಬ್ಬರು ಹೇಳಿದ್ದಾಗಿ ವರದಿಯಾಗಿದೆ.

ಹೆಣಗಳನ್ನು ಕೆಲವರು ಗಂಗಾ ನದಿಯ ದಂಡೆಯಲ್ಲಿ ಹೂಳುತ್ತಿದ್ದಾರೆ. ಮೂರು-ನಾಲ್ಕು ಅಡಿ ಆಳದ ಗುಂಡಿ ತೋಡಿ ನದಿ ದಂಡೆಯ ಮರಳಿನಲ್ಲಿ ಹೂಳುವುದು ಸಾಮಾನ್ಯ ದೃಶ್ಯವಾಗಿದೆ ಎಂದು ಈ ಪ್ರದೇಶದಲ್ಲಿ ವಾಸಿಸುವ ಹಲವರು ಹೇಳಿದ್ದಾರೆ. ಇತ್ತೀಚೆಗೆ ಸುರಿದ ಭಾರಿ ಮಳೆಯಿಂದಾಗಿ ನದಿ ದಂಡೆಯ ಮರಳು ಕೊಚ್ಚಿ ಹೋಗಿದೆ. ಹೆಣಗಳು ಮೇಲಕ್ಕೆ ಬಂದು ನದಿಯಲ್ಲಿ ತೇಲಿವೆ ಎಂದೂ ಹೇಳಲಾಗುತ್ತಿದೆ.

ಕೋವಿಡ್ ಅಲ್ಲದೆ ಬೇರೆ ಕಾರಣಗಳಿಂದ ಸತ್ತರೂ ಗ್ರಾಮೀಣ ಪ್ರದೇಶದ ಜನರಲ್ಲಿ ಸೋಂಕಿನ ಅನುಮಾನವೇ ಮೂಡುತ್ತದೆ. ಅಂತ್ಯಸಂಸ್ಕಾರಕ್ಕೆ ಬರಲು ಜನರು ಹೆದರುತ್ತಾರೆ. ಹಾಗಾಗಿ ಬೇರೆ ಕಾರಣಗಳಿಂದ ಸತ್ತವರ ಹೆಣಗಳೂ ನೀರು ಪಾಲಾಗುತ್ತಿವೆ. ಊರಿನಲ್ಲಿ ಅಂತ್ಯ ಸಂಸ್ಕಾರ ಮಾಡಿದರೆ ಸೋಂಕು ಇನ್ನಷ್ಟು ವ್ಯಾಪಕವಾಗಿ ಹರಡಬಹುದು ಎಂಬ ಭೀತಿಯಿಂದಾಗಿಯೂ ಜನರು ಮೃತದೇಹಗಳನ್ನು ನದಿಗೆ ಎಸೆಯುತ್ತಿದ್ದಾರೆ ಎಂಬ ವರದಿಗಳೂ ಪ್ರಕಟವಾಗಿವೆ.

ಗಂಗಾ ನದಿಯಲ್ಲಿ ತೇಲಿ ಬಂದ ಹೆಣಗಳು ನಿಜವಾಗಿಯೂ ಕೋವಿಡ್‌ಗೆ ಬಲಿಯಾದವರದ್ದೇ ಎಂಬ ಪ್ರಶ್ನೆಯೂ ಉದ್ಭವವಾಗಿದೆ. 'ಗಾಜಿಪುರ ಜಿಲ್ಲೆಯಲ್ಲಿ ಪತ್ತೆಯಾದ 4-5 ಮೃತ ದೇಹಗಳ ಮರಣೋತ್ತರ ಪರೀಕ್ಷೆ ನಡೆಸಲಾಗಿದೆ. ಈ ದೇಹಗಳಲ್ಲಿ ಕೊರೊನಾ ವೈರಾಣು ಪತ್ತೆ ಆಗಿಲ್ಲ. ಶವಗಳು ಕೊಳೆತ ಸ್ಥಿತಿಯಲ್ಲಿದ್ದವು. ಈ ಸ್ಥಿತಿಯಲ್ಲಿ ವೈರಾಣು ಪತ್ತೆ ಸಾಧ್ಯವೇ ಎನ್ನುವ ಬಗ್ಗೆ ಅನುಮಾನ ಇದೆ' ಎಂದು ಉತ್ತರ ಪ್ರದೇಶದ ಹಿರಿಯ ಅಧಿಕಾರಿ ಮನೋಜ್ ಕುಮಾರ್ ಸಿಂಗ್ ಹೇಳಿದ್ದಾಗಿ ರಾಯಿಟರ್ಸ್ ಸುದ್ದಿ ಸಂಸ್ಥೆ ವರದಿ ಮಾಡಿದೆ.

ಆಧಾರ: ರಾಯಿಟರ್ಸ್, ಪಿಟಿಐ, ಬಿಬಿಸಿ, ನಿರ್ಮಲ ಗಂಗಾ ರಾಷ್ಟ್ರೀಯ ಮಿಷನ್, ನಮಾಮಿ ಗಂಗೆ ಜಾಲತಾಣ

2,000ಕ್ಕೂ ಹೆಚ್ಚು ಶವಗಳು?

ಕಳೆದ ಕೆಲವು ದಿನಗಳಿಂದ ಗಂಗಾನದಿಯಲ್ಲಿ ತೇಲಿಬರುವ ಶವಗಳ ಸಂಖ್ಯೆ ವಿಪರೀತವಾಗಿದೆ ಎಂಬುದು ನದಿ ತಟದ ನಿವಾಸಿಗಳಲ್ಲಿ ಆತಂಕ ಮೂಡಿಸಿದೆ.

'ಗಂಗಾನದಿಯು ಉತ್ತರಪ್ರದೇಶದಲ್ಲಿ ಸುಮಾರು 1,140 ಕಿ.ಮೀ. ದೂರವನ್ನು ಕ್ರಮಿಸುತ್ತದೆ. ಈ ವ್ಯಾಪ್ತಿಯಲ್ಲಿ ಈವರೆಗೆ ಎರಡು ಸಾವಿರಕ್ಕೂ ಹೆಚ್ಚು ಶವಗಳು ಪತ್ತೆಯಾಗಿವೆ' ಎಂದು ಹಿಂದಿ ದಿನಪತ್ರಿಕೆ 'ದೈನಿಕ್ ಭಾಸ್ಕರ್' ವರದಿ ಮಾಡಿದೆ.

ಆ ವರದಿಯ ಪ್ರಕಾರ ಕಾನ್ಪುರ, ಕನೌಜ್, ಉನ್ನಾವ್, ಗಾಜಿಪುರ ಹಾಗೂ ಬಲಿಯಾ ಜಿಲ್ಲೆಗಳಲ್ಲಿ ಕೊರೊನಾ ಸೋಂಕು ವಿಪರೀತವಾಗಿ ಹರಡಿದೆ. ಕನೌಜ್‌ನ ಮಹಾದೇವಿ ಗಂಗಾ ಘಾಟ್‌ನಲ್ಲಿ ಸುಮಾರು 350 ಶವಗಳನ್ನು ಹೂಳಲಾಗಿದೆ. ಶವಗಳು ಕಾಣದಿರಲಿ ಎಂಬ ಉದ್ದೇಶದಿಂದ ಅವುಗಳನ್ನು ಹೂತಿದ್ದ ಜಾಗದಲ್ಲಿ ಜಿಲ್ಲಾಡಳಿತವೇ ಮಣ್ಣನ್ನು ಸುರಿಯುತ್ತಿದೆ ಎಂದು ಈ ಘಾಟ್‌ನ ಸಿಬ್ಬಂದಿಯೊಬ್ಬರು ಹೇಳಿದ್ದಾರೆ.

ಕಾನ್ಪುರ ನಗರದಲ್ಲಿ ಶೆರೇಶ್ವರ್ ಘಾಟ್‌ನಿಂದ ಅನತಿ ದೂರದಲ್ಲಿ 400ಕ್ಕೂ ಹೆಚ್ಚು ಶವಗಳನ್ನು ಹೂಳಲಾಗಿದೆ. ಹೀಗೆ ತೇಲಿ ಬಂದ ಶವಗಳನ್ನು ನಾಯಿಗಳು ಎಳೆದಾಡುತ್ತಿದ್ದ, ಕೆಲವು ಶವಗಳ ಮೇಲೆ ಹದ್ದು, ಕಾಗೆ ಹಾಗೂ ಇತರ ಪಕ್ಷಿಗಳು ಕೂತಿದ್ದ ಭೀಕರ ದೃಶ್ಯ ಕಂಡುಬಂದಿದೆ. ಈ ಮಾಹಿತಿ ಲಭಿಸುತ್ತಿದ್ದಂತೆಯೇ ಸ್ಥಳಕ್ಕೆ ಧಾವಿಸಿ ಬಂದ ಪೊಲೀಸರು ಶವಗಳ ಮೇಲೆ ಮಣ್ಣು ಮುಚ್ಚುವ ಕೆಲಸವನ್ನು ಮಾಡಿದ್ದಾರೆ ಎಂದು ವರದಿಯಲ್ಲಿ ಹೇಳಲಾಗಿದೆ.

ಉನ್ನಾವ್‌ನಲ್ಲಿ ಗರಿಷ್ಠ 900 ಶವಗಳನ್ನು ಹೂಳಲಾಗಿದೆ. ಇಲ್ಲಿನ ಶುಕ್ಲಾಗಂಜ್ ಹಾಗೂ ಬಕ್ಸರ್ ಘಾಟ್ ಬಳಿ ಭಾರಿ ಸಂಖ್ಯೆಯಲ್ಲಿ ಶವಗಳು ತೇಲಿ ಬಂದಿದ್ದವು. ಇಲ್ಲಿ ಹೆಜ್ಜೆ ಹೆಜ್ಜೆಗೂ ಮನುಷ್ಯನ ಶರೀರದ ಅಂಗಾಂಗಗಳು ಕಾಣಸಿಗುತ್ತವೆ ಎಂದು ಪತ್ರಿಕೆ ವರದಿ ಮಾಡಿದೆ. ಆಡಳಿತವು ಶವಗಳ ಮೇಲೆ ಮರಳನ್ನು ಸುರಿಯುವ ಕೆಲಸ ಮಾಡಿದೆ.

ಫತೇಪುರ್‌ನಲ್ಲಿ 20, ಪ್ರಯಾಗರಾಜ್‌ನಲ್ಲಿ ಗಂಗಾ ಮತ್ತು ಯಮುನಾ ನದಿಗಳಿಂದ 50 ಶವಗಳು- ಹೀಗೆ ನದಿ ದಂಡೆಯ ಅಕ್ಕಪಕ್ಕದ ನಗರ-ಪಟ್ಟಣಗಳಲ್ಲಿ ಇಂಥ ಅಪರಿಚಿತ ಶವಗಳ ರಾಶಿಯೇ ಕಾಣಸಿಗುತ್ತಿದೆ ಎಂದು ಪತ್ರಿಕೆ ವರದಿ ಮಾಡಿದೆ.

ಆದರೆ, ಉತ್ತರ ಪ್ರದೇಶ ಸರ್ಕಾರದ ವಕ್ತಾರ ನವನೀತ್ ಸೆಹಗಲ್ ಅವರು ಇಂತಹ ವರದಿಗಳನ್ನು ಅಲ್ಲಗಳೆದಿದ್ದಾರೆ. ದಿನಕ್ಕೆ 10-20 ಹೆಣಗಳಷ್ಟೇ ಸಿಗುತ್ತಿವೆ. ನದಿ ದಂಡೆಯ ಕೆಲವು ಗ್ರಾಮಗಳ ಜನರು ಧಾರ್ಮಿಕ ಮಹತ್ವದ ತಿಂಗಳುಗಳಲ್ಲಿ ಮೃತದೇಹವನ್ನು ಸುಡುವುದಿಲ್ಲ, ಹೂಳುತ್ತಾರೆ ಎಂದು ಅವರು ಹೇಳಿದ್ದಾರೆ.

ಹಲವು ಯೋಜನೆ ರೂಪಿಸಿದರೂ ಶುಚಿಯಾಗದ ಗಂಗೆ

ಗಂಗಾನದಿಯನ್ನು ಶುಚಿಗೊಳಿಸುವ ಯೋಜನೆ 35 ವರ್ಷಕ್ಕಿಂತಲೂ ಹಳೆಯದು. ಹರಿದ್ವಾರದವರೆಗೆ ಶುದ್ಧವಾಗಿಯೇ ಹರಿಯುವ ಗಂಗೆ, ನಂತರ ಜನ ವಸತಿ ಪ್ರದೇಶಗಳನ್ನು ದಾಟುತ್ತಾ ಹೋದಂತೆ ಮಲಿನವಾಗುತ್ತಾ ಹೋಗುತ್ತಾಳೆ. ಗಂಗೆ ತಟದಲ್ಲಿರುವ ಪವಿತ್ರ ಕ್ಷೇತ್ರಗಳ ಸ್ನಾನಘಟ್ಟಗಳು ಮಲಿನವಾಗಿವೆ. ನದಿ ತಟದ ನಗರಗಳ ಕೊಳಚೆ ನೀರು, ಕೈಗಾರಿಕೆಗಳ ಕೊಳಚೆ ನೀರು ನದಿಯನ್ನು ಮಲಿನಗೊಳಿಸುತ್ತವೆ. ಗಂಗೆಯನ್ನು ಬಂದು ಸೇರುವ ಯಮುನಾ ಸಹ ಮಲಿನವಾಗಿರುತ್ತಾಳೆ. ಹೀಗಾಗಿ ಗಂಗಾ ಮತ್ತು ಅದರ ಉಪನದಿಗಳನ್ನು ಶುಚಿಗೊಳಿಸಲು 1986ರಲ್ಲೇ ರಾಜೀವ್ ಗಾಂಧಿ ನೇತೃತ್ವದ ಸರ್ಕಾರವು 'ಗಂಗಾ ಕ್ರಿಯಾ ಯೋಜನೆ' (ಗಂಗಾ ಆ್ಯಕ್ಷನ್ ಪ್ಲಾನ್-ಜಿಎಪಿ) ರೂಪಿಸಿತ್ತು. ಈ ಯೋಜನೆ ಪೂರ್ಣ ಪ್ರಮಾಣದಲ್ಲಿ ಅನುಷ್ಠಾನಕ್ಕೆ ಬರುವ ಮುನ್ನವೇ 1993ರಲ್ಲಿ ಕಾಂಗ್ರೆಸ್ ಸರ್ಕಾರವು ಜಿಎಪಿ-2 ಅನ್ನು ಆರಂಭಿಸಿತು.

ಕೈಗಾರಿಕೆಗಳು ಮತ್ತು ನಗರಗಳ ಕೊಳಚೆ ನೀರನ್ನು ಸಂಸ್ಕರಿಸಿ ಗಂಗೆಗೆ ಬಿಡುವುದು ಈ ಯೋಜನೆಗಳ ಪ್ರಮುಖ ಉದ್ದೇಶವಾಗಿತ್ತು. ವಿವಿಧ ಕಾರಣಗಳಿಂದಾಗಿ ಈ ಯೋಜನೆಗಳು ಸರಿಯಾಗಿ ಅನುಷ್ಠಾನಕ್ಕೆ ಬರಲಿಲ್ಲ. 2009ರಲ್ಲಿ ಮತ್ತೆ ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರವು ಜಿಎಪಿ ಯೋಜನೆಗಳ ಲೋಪಗಳನ್ನು ಸರಿಪಡಿಸಲು ಗಂಗಾ ನದಿ ಕಣಿವೆ ರಾಷ್ಟ್ರೀಯ ಪ್ರಾಧಿಕಾರವನ್ನು ರಚಿಸಿತು. ಈ ಎಲ್ಲಾ ಯೋಜನೆಗಳನ್ನು ಸರಿಯಾಗಿ ಅನುಷ್ಠಾನಕ್ಕೆ ತರಲು 2013ರಲ್ಲಿ ನಿರ್ಮಲ ಗಂಗಾ ರಾಷ್ಟ್ರೀಯ ಮಿಷನ್ ಆರಂಭಿಸಲಾಯಿತು. ಯೋಜನೆ ಜಾರಿ ವೇಳೆಗೆ ನದಿಗೆ ಎಲ್ಲಾ ನಗರಗಳು ಮತ್ತು ಕೈಗಾರಿಕೆಗಳಿಂದ ಪ್ರತಿದಿನ 2,700 ಎಂಎಲ್‌ಡಿ (2,700 ಕೋಟಿ ಲೀಟರ್) ಕೊಳಚೆ ನೀರು ಸೇರುತ್ತಿತ್ತು. ಈ ಕೊಳಚೆ ನೀರನ್ನು ಸಂಸ್ಕರಿಸುವುದು, ನದಿ ತಟವನ್ನು ಸುಂದರಗೊಳಿಸುವುದು, ನದಿಯ ಜೀವವೈವಿಧ್ಯವನ್ನು ಸಂರಕ್ಷಿಸುವುದು ಈ ಯೋಜನೆಯ ಪ್ರಮುಖ ಗುರಿಗಳಾಗಿದ್ದವು.

2014ರಲ್ಲಿ ಅಧಿಕಾರಕ್ಕೆ ಬಂದ ನರೇಂದ್ರ ಮೋದಿ ನೇತೃತ್ವದ ಎನ್‌ಡಿಎ ಸರ್ಕಾರವು ಇದೇ ಯೋಜನೆಯನ್ನು 'ನಮಾಮಿ ಗಂಗೆ' ಎಂಬ ಹೆಸರಿನಲ್ಲಿ ಮುಂದುವರಿಸಿತು. ಯೋಜನೆಯ ಅನುಷ್ಠಾನಕ್ಕೆ 10 ವರ್ಷಗಳಲ್ಲಿ ₹20,000 ಕೋಟಿ ವಿನಿಯೋಗಿಸುವುದಾಗಿ ಸರ್ಕಾರ ಘೋಷಿಸಿತು. ಯೋಜನೆ ಆರಂಭದ ವೇಳೆ ಇದ್ದ ಉತ್ಸಾಹ, ಅನುಷ್ಠಾನದಲ್ಲಿ ಕಾಣಿಸಲಿಲ್ಲ. ಸರ್ಕಾರವು ಯೋಜನೆಗೆ ಅನುದಾನವನ್ನೂ ಸರಿಯಾಗಿ ಬಿಡುಗಡೆ ಮಾಡಲಿಲ್ಲ. 10 ವರ್ಷಗಳಲ್ಲಿ ಪೂರ್ಣವಾಗಬೇಕಿದ್ದ ಯೋಜನೆ ಇನ್ನೂ ಕುಂಟುತ್ತಾ ಸಾಗುತ್ತಿದೆ.

- ಗಂಗೆ ಹರಿಯುವ ರಾಜ್ಯಗಳಲ್ಲಿ ಯೋಜನೆಗೆ ನೀಡಿದ ಅನುದಾನ ಕಡಿತವಾಗಿದೆ. ಪ್ರತಿ ವರ್ಷ ನೀಡುತ್ತಿದ್ದ ಅನುದಾನದಲ್ಲಿ ಕೇಂದ್ರ ಸರ್ಕಾರವು ಶೇ 50ರಷ್ಟನ್ನು ಕಡಿತ ಮಾಡಿದೆ
- ಗಂಗೆ ತಟದಲ್ಲಿ ಕೆಲವು ಉದ್ಯಾನಗಳ ಅಭಿವೃದ್ಧಿ ಹೊರತುಪಡಿಸಿದರೆ, ಬೇರೆ ಯಾವ ಯೋಜನೆಗಳೂ ಪೂರ್ಣಗೊಂಡಿಲ್ಲ
- ಗಂಗೆಗೆ ಶವ ಬಿಸಾಡುವುದನ್ನು ತಡೆಯುವುದೂ ಯೋಜನೆಯ ಪ್ರಮುಖ ಗುರಿಯಾಗಿತ್ತು. ಇದನ್ನು ಅನುಷ್ಠಾನಕ್ಕೆ ತರುವಲ್ಲಿಯೂ ರಾಜ್ಯ ಸರ್ಕಾರಗಳು ವಿಫಲವಾಗಿವೆ
- ಗಂಗೆಯ ಉದ್ದಕ್ಕೂ ಕೊಳಚೆ ನೀರು ಸಂಸ್ಕರಣದ 63 ಘಟಕಗಳ ನಿರ್ಮಾಣ ಕಾಮಗಾರಿ ಆರಂಭವಾಗಿ 6 ವರ್ಷಗಳೇ ಕಳೆದಿವೆ. 12 ಘಟಕಗಳ ನಿರ್ಮಾಣ ಕಾಮಗಾರಿ ಈಗಷ್ಟೇ ಆಗಿದೆ. ಈ ಕಾಮಗಾರಿಗಳನ್ನು 2024ರ ವೇಳೆಗೆ ಪೂರ್ಣಗೊಳಿಸಬೇಕು. ಇವುಗಳಲ್ಲಿ ಒಂದೂ ಘಟಕ ಕಾರ್ಯಾರಂಭ ಮಾಡಿಲ್ಲ
- 182 ಸ್ನಾನಘಟ್ಟಗಳು ಮತ್ತು 118 ಚಿತಾಗಾರಗಳ ಆಧುನೀಕರಣ ಕಾಮಗಾರಿ ಆರಂಭವಾಗಿದೆ, ಆದರೆ ಪೂರ್ಣವಾಗಿಲ್ಲ. ಇವುಗಳನ್ನು ಯೋಜನೆ ಆರಂಭವಾದ ಒಂದು ವರ್ಷದಲ್ಲಿ ಪೂರ್ಣಗೊಳಿಸಬೇಕಿತ್ತು

ಶವಗಳ ಜತೆ ತೇಲಿಬಂದ ಸುಳ್ಳುಸುದ್ದಿ

ಗಂಗಾನದಿಯಲ್ಲಿ ಶವಗಳು ತೇಲಿಬರುತ್ತಿರುವ ವಿಡಿಯೊ ಮತ್ತು ಚಿತ್ರಗಳು ಸುಳ್ಳು ಎಂದು ಹಲವು ಸ್ಥಳೀಯ ಮಾಧ್ಯಮಗಳು ಹಾಗೂ ಸುದ್ದಿ ಜಾಲತಾಣಗಳು ವರದಿ ಮಾಡಿವೆ. ಈ ವರದಿಗಳು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿವೆ.

ಆದರೆ, ಗಂಗಾನದಿಯಲ್ಲಿ ಶವಗಳು ಅಧಿಕ ಸಂಖ್ಯೆಯಲ್ಲಿ ತೇಲಿಬರುತ್ತಿವೆ ಎಂಬುದನ್ನು ಬಿಹಾರದ ಬಕ್ಸರ್ ಜಿಲ್ಲಾಡಳಿತ ಮತ್ತು ಉತ್ತರ ಪ್ರದೇಶದ ಉನ್ನಾವ್, ಗಾಜಿಪುರ ಜಿಲ್ಲಾಡಳಿತಗಳು ದೃಢಪಡಿಸಿವೆ. ಮೂರೂ ಜಿಲ್ಲಾಡಳಿತಗಳು ಶವಗಳು ಏಕೆ ತೇಲಿಬರುತ್ತಿವೆ ಮತ್ತು ಎಲ್ಲಿಂದ ತೇಲಿ ಬರುತ್ತಿವೆ ಎಂಬುದನ್ನು ಪತ್ತೆ ಮಾಡಲು ತನಿಖೆಗೆ ಆದೇಶಿಸಿವೆ. ತನಿಖೆ ಪ್ರಗತಿಯಲ್ಲಿ ಇದೆ.

ನದಿಯಲ್ಲಿ ಶವ ತೇಲಿಬರುತ್ತಿರುವ ಒಂದು ಚಿತ್ರವನ್ನು ತಪ್ಪಾಗಿ ಹಂಚಿಕೊಳ್ಳಲಾಗಿದೆ ಎಂದು 'ದಿ ಕ್ವಿಂಟ್' ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ. 2015ರಲ್ಲಿ ನದಿಯಲ್ಲಿ ತೇಲಿಬಂದಿದ್ದ ಶವಗಳ ಚಿತ್ರವನ್ನು ಈಗಿನದ್ದೆಂದು ಹಂಚಿಕೊಳ್ಳಲಾಗಿದೆ. ಹೀಗಾಗಿ ನದಿಯಲ್ಲಿ ತೇಲಿಬರುತ್ತಿರುವ ಶವಗಳ ಚಿತ್ರಗಳು ಮತ್ತು ವಿಡಿಯೊಗಳಲ್ಲಿ ಎಲ್ಲವೂ ಈಗಿನದ್ದೇ ಅಲ್ಲ. ಆದರೆ ಶವಗಳು ತೇಲಿಬರುತ್ತಿರುವುದಂತೂ ನಿಜ. ಆ ಶವಗಳ ಸಂಸ್ಕಾರವನ್ನು ಸಂಬಂಧಿತ ಜಿಲ್ಲಾಡಳಿತಗಳೇ ನಡೆಸುತ್ತಿವೆ.

ನದಿಗೆ ಶವ ಎಸೆತ ತಡೆಗೆ ರಾಜ್ಯಗಳಿಗೆ ಸೂಚನೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಗಂಗಾ ನದಿಗೆ ಮೃತದೇಹಗಳನ್ನು ಎಸೆಯುವುದನ್ನು ತಡೆಗಟ್ಟಲು ಮತ್ತು ಅವುಗಳ ಸುರಕ್ಷಿತ ವಿಲೇವಾರಿಗೆ ಗಮನಹರಿಸಿ, ಗೌರವಯುತ ಅಂತ್ಯಕ್ರಿಯೆಗೆ ಏರ್ಪಾಡು ಮಾಡುವಂತೆ ಕೇಂದ್ರ ಸರ್ಕಾರವು ರಾಜ್ಯಗಳಿಗೆ ಭಾನುವಾರ ನಿರ್ದೇಶಿಸಿದೆ.

ಮೃತದೇಹಗಳನ್ನು ಎಸೆಯುವುದನ್ನು ತಡೆಗಟ್ಟುವುದು, ಅವುಗಳನ್ನು ಸುರಕ್ಷಿತವಾಗಿ ವಿಲೇವಾರಿ ಮಾಡುವುದು ಮತ್ತು ನೀರಿನ ಗುಣಮಟ್ಟವನ್ನು ರಕ್ಷಿಸುವ ಕೆಲಸಗಳನ್ನು ಯುದ್ಧೋಪಾದಿಯಲ್ಲಿ ನಡೆಸಬೇಕಿದೆ ಎಂದು ಜಲಶಕ್ತಿ ಸಚಿವಾಲಯದ ಕಾರ್ಯದರ್ಶಿ ತಿಳಿಸಿದರು.

ಉತ್ತರ ಪ್ರದೇಶ ಮತ್ತು ಬಿಹಾರದ ಮೂಲಕ ಹರಿಯುವ ಗಂಗಾ ನದಿಯಲ್ಲಿ ಮೃತ ದೇಹಗಳು ಮತ್ತು ಭಾಗಶಃ ಸುಟ್ಟ ಶವಗಳು ಹೆಚ್ಚಿನ ಪ್ರಮಾಣದಲ್ಲಿ ತೇಲುತ್ತಿರುವ ಹಿನ್ನೆಲೆಯಲ್ಲಿ ಕೇಂದ್ರವು ಈ ಸೂಚನೆಗಳನ್ನು ನೀಡಿದೆ. ಸಚಿವಾಲಯದ ಕಾರ್ಯದರ್ಶಿ ಪಂಕಜ್ ಕುಮಾರ್ ಅವರು ಉನ್ನತ ಮಟ್ಟದ ಸಭೆ ನಡೆಸಿದ ಬಳಿಕ ರಾಜ್ಯಗಳಿಗೆ ಸೂಚನೆಗಳನ್ನು ರವಾನಿಸಿದರು.

ಈ ದಿಸೆಯಲ್ಲಿ ತ್ವರಿತ ಕ್ರಮ ಕೈಗೊಳ್ಳಬೇಕೆಂದು ಎಂದು ತಿಳಿಸಿದ ಅವರು, ಗಂಗಾ ಮತ್ತು ಇತರ ನದಿಗಳ ಉದ್ದಕ್ಕೂ ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಇಂತಹ ಘಟನೆಗಳಿಗೆ ಸಮಾನ ಗಮನ ನೀಡುವ ಅಗತ್ಯವಿದೆ ಎಂದು ಒತ್ತಿಹೇಳಿದರು.

ರಾಜ್ಯಗಳ ಪ್ರಗತಿಯನ್ನು ತಿಳಿದ ನಂತರ, ಕೇಂದ್ರ ಜಲ ಆಯೋಗ (ಸಿಡಬ್ಲ್ಯುಸಿ), ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿ (ಸಿಪಿಸಿಬಿ) ಮತ್ತು ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗಳು ಸಹ ತಮ್ಮ ಪ್ರತಿಕ್ರಿಯೆ ಮತ್ತು ಕ್ರಿಯಾ ಯೋಜನೆಗಳನ್ನು ನೀಡಲಿವೆ ಎಂದು ಅವರು ಹೇಳಿದರು.

ಉನ್ನಾವೊ ಜಿಲ್ಲೆಯಲ್ಲಿ ಗಂಗಾ ನದಿ ದಂಡೆಯ ರಾವುತಪುರ ಘಾಟ್‌ನಲ್ಲಿ ಹತ್ತಾರು ಮೃತದೇಹಗಳನ್ನು ಹೂಳಲಾಗಿದೆ —ಎಎಫ್‌ಪಿ ಚಿತ್ರ

ಕೋವಿಡ್ ವಿರುದ್ಧ ದೇವರಿಗೆ ಮೊರೆ

ಲಖನೌ: ಉತ್ತರ ಪ್ರದೇಶದ ಗ್ರಾಮೀಣ ಭಾಗದಲ್ಲಿ ಕೋವಿಡ್ ವಿಪರೀತವಾಗಿ ಪಸರಿಸುತ್ತಿದ್ದಂತೆಯೇ ರೋಗ ತಡೆಗಾಗಿ ಜನರು ಅತಿಮಾನುಷ ಶಕ್ತಿಗಳ ಮೊರೆಹೋಗಲು ಆರಂಭಿಸಿದ್ದಾರೆ.

ವಾರಾಣಸಿ, ಖುಷಿನಗರ್, ಮವು ಮುಂತಾದ ಜಿಲ್ಲೆಗಳಲ್ಲಿ ಜನರು ಸಾಮೂಹಿಕ ಭಜನೆ, ವಿಶೇಷ ಪೂಜೆ, ಹೋಮ-ಹವನಗಳನ್ನು ನಡೆಸುತ್ತಿದ್ದಾರೆ. ಮವು ಜಿಲ್ಲೆಯಲ್ಲಿ ಮಹಿಳೆಯರು ದೀಹ್ ಬಾಬಾ ಮಂದಿರ, ಕಾಳಿ ಮಂದಿರಗಳಲ್ಲಿ ವಿಶೇಷ ಅಭಿಷೇಕ (ಧಾರ್) ನಡೆಸುತ್ತಿದ್ದಾರೆ. ವಾರಾಣಸಿಯ ಘಾಟ್‌ಗಳಲ್ಲಿ ವಿಶೇಷ ಪೂಜೆಗಳು ನಡೆಯುತ್ತಿವೆ. ಇವುಗಳಲ್ಲಿ ಸುತ್ತಮುತ್ತಲಿನ ಪ್ರದೇಶಗಳ ನೂರಾರು ಮಹಿಳೆಯರು ಪಾಲ್ಗೊಳ್ಳುತ್ತಿದ್ದಾರೆ.

'ದೀಹ ಬಾಬಾ ಅವರು ಕೋವಿಡ್‌ನಿಂದ ನಮ್ಮ ಗ್ರಾಮವನ್ನು ರಕ್ಷಿಸುತ್ತಾರೆ ಎಂಬ ನಂಬಿಕೆ ಈ ಭಾಗದ ಜನರಲ್ಲಿ ಇದೆ' ಎಂದು ಸ್ಥಳೀಯರಾದ ಬ್ರಹ್ಮಾನಂದ ಪಾಂಡೆ ಹೇಳಿದ್ದಾರೆ.

ದುಮರಿ ಮಾಳವಾ ಗ್ರಾಮದ ದೇವಸ್ಥಾನಗಳಲ್ಲಿ ನೂರಾರು ಮಹಿಳೆಯರು ವಿಶೇಷ ಧಾರ್ಮಿಕ ಆಚರಣೆಗಳನ್ನು ನಡೆಸುತ್ತಿರುವುದು ವರದಿಯಾಗಿದೆ. ಆದರೆ ಅವರಲ್ಲಿ ಯಾರೊಬ್ಬರೂ ಮಾಸ್ಕ್ ಧರಿಸುವುದಾಗಲಿ, ಅಂತರ ಕಾಪಾಡುವುದಾಗಲಿ ಮಾಡಲಿಲ್ಲ. ಇದರಿಂದಾಗಿ ಇಂಥ ಧಾರ್ಮಿಕ ಕಾರ್ಯಕ್ರಮಗಳಿಂದಲೇ ಗ್ರಾಮೀಣ ಪ್ರದೇಶದಲ್ಲಿ ಕೋವಿಡ್ ಇನ್ನಷ್ಟು ಪಸರಿಸಬಹುದೆಂಬ ಭೀತಿ ಎದುರಾಗಿದೆ.

'ಧಾರ್ಮಿಕ ಕಾರ್ಯಕ್ರಮಗಳನ್ನು ನಡೆಸುತ್ತಿರುವ ವಿಚಾರ ನಮ್ಮ ಗಮನಕ್ಕೆ ಬಂದಿದೆ. ಕೋವಿಡ್ ಬಗ್ಗೆ ತಪ್ಪು ಮಾಹಿತಿ ನೀಡುತ್ತಿರುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು' ಎಂದು ಹಿರಿಯ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ
9606038256

'ಇಸ್ರೇಲ್ ದಾಳಿಯಲ್ಲಿ ಪ್ಯಾಲೆಸ್ಟೀನಿಯನ್ನರು ಸಾಯುತ್ತಿದ್ದಾರೆ ಮತ್ತು ಗಾಯಗೊಂಡಿದ್ದಾರೆ ಎಂದು ಬಿಂಬಿಸಲು, ಪ್ಯಾಲೆಸ್ಟೀನ್ ಮುಸ್ಲಿಮರು ನಾಟಕವಾಡುತ್ತಿದ್ದಾರೆ. ಮಾಧ್ಯಮಗಳ ಮುಂದೆ ಪೋಸ್ ನೀಡಲು, ಅವರು ಮೇಕ್‌ಅಪ್ ಮಾಡಿಕೊಳ್ಳುತ್ತಿರುವ ವಿಡಿಯೊ ಬಹಿರಂಗವಾಗಿದೆ. ಮುಂದೊಂದು ದಿನ ಈ ಜಿಹಾದಿಗಳು ಕಾಶ್ಮೀರದಲ್ಲೂ ಹೀಗೆ ಮಾಡುತ್ತಾರೆ, ಭಾರತ ಸರ್ಕಾರವನ್ನು ದುಷ್ಟ ಎಂದು ಬಿಂಬಿಸುತ್ತಾರೆ' ಎಂಬ ವಿವರ ಇರುವ ಪೋಸ್ಟ್‌ಗಳು ಫೇಸ್‌ಬುಕ್ ಮತ್ತು ಟ್ವಿಟರ್‌ನಲ್ಲಿ ವೈರಲ್ ಆಗಿವೆ. ರಾಕೇಶ್ ತಿಯ್ಯನಾ ಅವರು ಮೊದಲು ಪ್ರಕಟಿಸಿದ ಈ ವಿಡಿಯೊವನ್ನು ಹರಿಯಾಣದ ಬಿಜೆಪಿ ಒಬಿಸಿ ಮೋರ್ಚಾ ಅಧ್ಯಕ್ಷೆ ಮಾಯಾ ಯಾದವ್ ಹಂಚಿಕೊಂಡಿದ್ದಾರೆ.

'ಪಾಲೆಸ್ಟೀನ್‌ನ ಸಾಕ್ಷ್ಯಚಿತ್ರ ನಿರ್ದೇಶಕಿಯೊಬ್ಬರು 'ಸ್ಪೆಷಲ್ ಎಫೆಕ್ಟ್ಸ್ ಇನ್ ಮೇಕ್‌ಅಪ್' ಹೆಸರಿನ ಸಾಕ್ಷ್ಯಚಿತ್ರವನ್ನು 2018ರಲ್ಲಿ ನಿರ್ಮಿಸಿದ್ದರು. ಅದನ್ನು ತುಂಡರಿಸಿ ಈ ಚಿಕ್ಕ ವಿಡಿಯೊ ಸೃಷ್ಟಿಸಲಾಗಿದೆ. ಸಾಕ್ಷ್ಯಚಿತ್ರದಲ್ಲಿ ಇದ್ದ ನಿರೂಪಣೆಯನ್ನು ಅಳಿಸಿ, ಅದರ ಬದಲಿಗೆ ಹಿನ್ನೆಲೆ ಸಂಗೀತ ಹಾಕಲಾಗಿದೆ. ಪ್ಯಾಲೆಸ್ಟೀನಿಯನ್ನರ ಮೇಲೆ ತಪ್ಪು ಅಭಿಪ್ರಾಯ ಮೂಡಿಸಲು ಮತ್ತು ಭಾರತೀಯ ಮುಸ್ಲಿಮರ ಮೇಲೆ ತಪ್ಪು ಅಭಿಪ್ರಾಯ ಮೂಡಿಸಲು ಈ ವಿಡಿಯೊವನ್ನು ಬಳಸಿಕೊಳ್ಳಲಾಗುತ್ತಿದೆ' ಎಂದು ಆಲ್ಟ್‌ನ್ಯೂಸ್ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ. ಈ ವಿಡಿಯೊ ಪೋಸ್ಟ್ ಮಾಡಿರುವ ರಾಕೇಶ್ ತಿಯ್ಯನಾ ಅವರು ಟ್ವಿಟರ್‌ನಲ್ಲಿ ಹಲವಾರು ಸುಳ್ಳುಸುದ್ದಿಗಳನ್ನು ಹಂಚಿಕೊಂಡಿದ್ದಾರೆ. ಅವುಗಳನ್ನು ಟ್ವಿಟರ್ ಸ್ಥಗಿತಗೊಳಿಸಿದೆ.

ಗುಂಡಣ್ಣ

ಬೆರಗಿನ ಬೆಳಕು

ಗುರುರಾಜ ಕರಜಗಿ

ಸುರಂಗದ ವೈಭವ

ಮಹೋಷಧಕುಮಾರನ ಬುದ್ಧಿಶಕ್ತಿಗೆ, ಕರ್ತೃತ್ವ ಶಕ್ತಿಗೆ ಮರುಳಾದ ಬ್ರಹ್ಮದತ್ತ ರಾಜ, 'ಈ ಸುರಂಗದ ಮತ್ತೇನಾದರೂ ವಿಶೇಷಗಳಿವೆಯೇ?' ಎಂದು ಕೇಳಿದ. 'ಮಹಾರಾಜಾ, ಅಕಸ್ಮಾತ್ ಸುರಂಗದಲ್ಲಿ ಬರುವಾಗ ಯಾರಿಗಾದರೂ ಸಂಶಯ ಬಂದರೆ ಅಥವಾ ತಮ್ಮ ಬುದ್ಧಿವಂತ ಗೂಢಚಾರರು ಅದನ್ನು ಕಂಡುಹಿಡಿಯಲು ಬಂದರೆ ಅವರಿಗೆ ಏನೂ ತಿಳಿಯದಂತೆ ಮಾಡಿದ್ದೇನೆ. ತೋರಿಸುತ್ತೇನೆ ಬನ್ನಿ' ಎಂದು ಕುಮಾರ ರಾಜನನ್ನು ಮುಂದೆ ಕರೆದೊಯ್ದ. ಮುಂದೆ ಅಲಂಕೃತವಾದ ಸುರಂಗ ಮಾರ್ಗದಲ್ಲಿ ಒಳಗೆ ಬಂದರೆ, ಎಂಭತ್ತು ಮಹಾದ್ವಾರಗಳು, ಅರವತ್ನಾಲ್ಕು ಚಿಕ್ಕ ಬಾಗಿಲುಗಳು, ನೂರು ಶಯನಾಗಾರಗಳಿದ್ದವು. ಎಲ್ಲವೂ ಬೆಳಕಿನಿಂದ ಹೊಳೆಯುತ್ತಿದ್ದವು. ಕುಮಾರ ರಾಜನಿಗೆ ನೂರು ಶಯನಾಗಾರಗಳನ್ನು ತೋರಿಸಿದ. ಒಂದು ಮುಖ್ಯ ಶಯನಾಗಾರದ ಬಾಗಿಲು ಮುಚ್ಚಿಕೊಂಡರೆ ಎಲ್ಲ ಶಯನಾಗಾರಗಳ ಬಾಗಿಲುಗಳು ಮುಚ್ಚಿ ಹೋಗುತ್ತಿದ್ದವು. ಅದನ್ನು ತೆರೆದರೆ ಮಾತ್ರ ಉಳಿದವು ತೆರೆಯುತ್ತಿದ್ದವು. 'ಇದು ಯಾಕೆ ಹೀಗೆ?' ಎಂದು ರಾಜ ಕೇಳಿದಾಗ, 'ರಾಜಾ, ನಿನ್ನವರು, ನಮ್ಮ ಮೇಲೆ ದಾಳಿ ಮಾಡಲು ಬಂದರೆ ಅವರೆಲ್ಲರನ್ನು ಈ ಕೊಠಡಿಗಳಲ್ಲಿ ಕೂಡಿ ಹಾಕಿ ಮುಖ್ಯ ಒಂದು ಬಾಗಿಲನ್ನು ಮುಚ್ಚಿದರೆ, ಅವರೆಲ್ಲ ಬಂದಿಗಳಾಗುತ್ತಾರೆ. ಆಗ ಆ ಕೋಣೆಗಳಲ್ಲಿ ಒಂದು ಚೂರೂ ಬೆಳಕಿರುವುದಿಲ್ಲ. ಅವರು ಗಾಳಿ, ಬೆಳಕಿಲ್ಲದೆ, ಎದೆಯೊಡೆದು ಸಾಯುತ್ತಾರೆ' ಎಂದು ಉತ್ತರಿಸಿದ ಕುಮಾರ.

ಈಗಾಗಲೇ ರಾಜನ ಅನೇಕ ಹಿಂಬಾಲಕರು ಬಂದು ಬೇರೆ ಬೇರೆ ಕೋಣೆಗಳನ್ನು ನೋಡುತ್ತ ನಿಂತಿದ್ದರು. ಕುಮಾರ ಪ್ರಧಾನ ಶಯನಾಗಾರದ ಬಾಗಿಲು ಹಾಕಿದೊಡನೆ ಎಲ್ಲಾ ಮಾರ್ಗಗಳು ಮುಚ್ಚಿಕೊಂಡವು. ಒಳಗಿದ್ದವರು ಕಂಗಾಲಾದರು. ಬಾಗಿಲುಗಳು ಎಷ್ಟು ಭದ್ರವಾಗಿದ್ದವೆಂದರೆ ಒಳಗಿನವರ ಕೂಗಾಟ ಸ್ವಲ್ಪವೂ ಹೊರಗೆ ಕೇಳಿಸುತ್ತಿರಲಿಲ್ಲ. ಅದೇ ಕ್ಷಣದಲ್ಲಿ ನೂರು ಜನ ಅತ್ಯಂತ ಬಲಿಷ್ಠರಾದ, ಆಯುಧಗಳಿಂದ ಸಜ್ಜಾದ ಸೈನಿಕರು, ಖಡ್ಗಗಳನ್ನು ಹಿಡಿದುಕೊಂಡು ಹಾರಿ ಮುಂದೆ ಬಂದರು. ರಾಜ ಗಾಬರಿಯಾದ. ಕುಮಾರ ನಕ್ಕು ಹೇಳಿದ, 'ಮಹಾರಾಜಾ, ಭಯಬೇಡ. ಇದೊಂದು ರಕ್ಷಣೆಯ ವ್ಯವಸ್ಥೆ. ಬಾಗಿಲುಗಳು ಹಾಕಿದೊಡನೆ ಹೊರಗಿನವರು ಯಾರೋ ಬಂದಿದ್ದಾರೆಂದು ಈ ಸೈನಿಕರು ಹಾರಿಬರುತ್ತಾರೆ, ಬಂದವರನ್ನು ಕೊಂದು ಹಾಕುತ್ತಾರೆ. ಇದೇ ತರಹ ಮುಂದೆ ಕೂಡ ಐದು ನೂರು ಜನ ಸೈನಿಕರಿದ್ದಾರೆ'. ಮತ್ತೆ ಶಯನಾಗಾರದ ಬಾಗಿಲುಗಳನ್ನು ತೆರೆಸಿದ.

ಮುಂದೆ ಹಾಗೆಯೇ ಸಾಗಿ ಬಂದಾಗ ಎದುರಿಗೆ ಒಂದು ವಿಶಾಲವಾದ ಸಭಾಂಗಣ. ಅಲ್ಲಿ ನೂರು ಜನ ರಾಜರು ಕುಳಿತಿದ್ದರು. ಅಮಾತ್ಯ ಕೇವಟ್ಟ ಯಾರಿಗೆ ಸುರೆಯಲ್ಲಿ ವಿಷ ಹಾಕಿ ಕೊಲ್ಲಬೇಕೆಂದು ಮಾಡಿದ್ದನೋ, ಅವರೇ ಇವರು. ಈ ರಾಜರು ಕೂಡ ಕುಮಾರನ ಅತಿಥಿಗಳಂತೆ ಬಂದು ಬಂಧಿಯಾದವರೇ. ರಾಜರುಗಳು ಹೇಳಿದರು, 'ಮಹೋಷಧಕುಮಾರ ಅಂದು ಬುದ್ಧಿವಂತಿಕೆಯಿಂದ ಸೈನಿಕರನ್ನು ಕಳುಹಿಸಿ ಸುರೆಯ ಮಡಕೆಗಳನ್ನು ಒಡಿಸದಿದ್ದರೆ ನಾವೆಲ್ಲ ಸತ್ತೇ ಹೋಗುತ್ತಿದ್ದೆವು'. ಆಗ ಬ್ರಹ್ಮದತ್ತ ರಾಜ ಅವರ ಕ್ಷಮೆ ಕೇಳಿದ, 'ನಾನು ಈ ದುಷ್ಟ ಕೇವಟ್ಟನ ಮಾತು ಕೇಳಿ ಆ ತಪ್ಪು ಮಾಡಿದ್ದೆ. ದಯವಿಟ್ಟು ಕ್ಷಮಿಸಿ' ಎಂದ.

ಇದನ್ನೆಲ್ಲ ಕಂಡು ಆಶ್ಚರ್ಯಪಟ್ಟ ರಾಜ ಕೇಳಿದ, 'ಕುಮಾರ ಇಷ್ಟು ಬುದ್ಧಿ ಇರುವ ನೀನೇ ಯಾಕೆ ರಾಜ್ಯವನ್ನು ವಶಪಡಿಸಿಕೊಳ್ಳಲಿಲ್ಲ? ನಿನ್ನಂತಹವನಿಗೆ ಮತ್ತೊಬ್ಬ ರಾಜನ ಕೆಳಗೆ ಆಳಾಗಿರುವುದು ಶೋಭೆಯಲ್ಲ'. ಅದಕ್ಕೆ ಮಹೋಷಧಕುಮಾರ ನೀಡಿದ ಉತ್ತರ ಮಾರ್ಮಿಕವಾಗಿತ್ತು. ❖

ದಿನ ಭವಿಷ್ಯ

ಸೋಮವಾರ ಮೇ 17, 2021

ಶ್ರೀ ಪ್ಲವ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ವೈಶಾಖ ಮಾಸ ಶುಕ್ಲ ಪಕ್ಷ ಮಳೆ ನಕ್ಷತ್ರ ಕೃತ್ತಿಕಾ ಪಂಚಮಿ ಗಂ. 2-38 (ಬೆ. 7-04) ಸೋಮವಾರ ನಿತ್ಯ ನಕ್ಷತ್ರ ಪುನರ್ವಸು ಗಂ. 8-31 (ಬೆ. 9-25) ಗಂಡ ನಾಮ ಯೋಗ ಗಂ 42-37 ಬಾಲವ ಕರಣ ಗಂ. 2-38 ವಿಷ ಗಂ. 29-20 ಅಮೃತ 0-58 ಪುನರಮೃತ ಗಂ. 54-19 : ರಾಹುಕಾಲ: ಬೆ. ಗಂ. 7-30 ರಿಂದ 9-00 ಗುಳಿಕ ಮ. ಕಾಲ ಗಂ 1-30 ರಿಂದ 3-00 ಯಮಗಂಡ ಕಾಲ ಬೆ. ಗಂ 10-30 ರಿಂದ 12-00 ಸೂರ್ಯೋದಯ: 5-58 ಸೂರ್ಯಾಸ್ತ: 6-34 ಅದೃಷ್ಟ ಸಂಖ್ಯೆ 6, 7

ಮೇಷ: ಆರ್ಥಿಕ ಹಿನ್ನಡೆಯ ನಡುವೆಯೂ ಮನೆಯಲ್ಲಿನ ಬಿನ್ನಾಭಿಪ್ರಾಯಗಳು ದೂರವಾಗಿ ತಿಳಿಯಾದ ವಾತಾವರಣ ಮೂಡಲಿದೆ. ಸಂಗಾತಿಯ ಸಲಹೆಗಳಿಗೆ ಆದ್ಯತೆ ನೀಡಿ.

ವೃಷಭ: ಬಹುದಿನಗಳಿಂದ ಬಾಕಿ ಇರುವ ಹಣವು ಹಿಂದಿರುಗಿ ಬಂದು ನಿಮ್ಮ ಕಾರ್ಯಕ್ಕೆ ಸಹಕಾರಿಯಾಗುವುದು. ಸಹಧರ್ಮಿಣಿಯ ಆರೋಗ್ಯದ ಬಗ್ಗೆ ಗಮನ ಅಗತ್ಯ.

ಮಿಥುನ: ಸಹೋದ್ಯೋಗಿಗಳಿಂದ ಸಕಾರಾತ್ಮಕ ಸಹಾಯ ದೊರಕಲಿದೆ. ಸಮಾಜದಲ್ಲಿ ನಿಮ್ಮ ಪರಿಶ್ರಮದ ಫಲವನ್ನು ಬೇರೆಯವರು ಸವಿಯುವ ಸಾಧ್ಯತೆ. ದೇವರ ಆರಾಧನೆ ಮಾಡಿ.

ಕರ್ಕಾಟಕ: ಆರ್ಥಿಕ ಸಮತೋಲನ ಕಂಡುಬರುವುದು. ನಿಮ್ಮ ಮೇಲಿನ ಆಪಾದನೆಗಳಿಂದ ಮುಕ್ತರಾಗಿ ಗೌರವಕ್ಕೆ ಪಾತ್ರರಾಗಲಿದ್ದೀರಿ. ದೇವೀ ಸನ್ನಿಧಿಯಲ್ಲಿ ತುಪ್ಪದ ದೀಪ ಹಚ್ಚಿ.

ಸಿಂಹ: ವ್ಯವಹಾರದಲ್ಲಿ ಚೇತರಿಕೆ ಕಂಡುಬರಲಿದೆ. ವೈದ್ಯ ವೃತ್ತಿಯಲ್ಲಿರುವವರಿಗೆ ಆದಾಯದಲ್ಲಿ ಹೆಚ್ಚಳ. ಅತಿಯಾದ ಮಾತಿನಿಂದಾಗಿ ವೃಥಾ ವೈಮನಸ್ಸು. ಶಾರದೆಯ ಆರಾಧನೆ ಯಶಸ್ಸನ್ನು ನೀಡುವುದು.

ಕನ್ಯಾ: ವಿಪರೀತ ಕಾರ್ಯಬಾಹುಳ್ಯದಿಂದಾಗಿ ಬೇಸರ. ಸಮಾಧಾನದಿಂದ ವರ್ತಿಸುವುದು ಉತ್ತಮ. ಚುರುಕಿನ ಕಾರ್ಯ ಕ್ಷಮತೆಯಿಂದ ಕೆಲಸ ಪೂರೈಸಿ ಮನಸ್ಸಿಗೆ ನಿರಾಳವಾಗಿ ನೆಮ್ಮದಿ ದೊರಕಲಿದೆ.

ತುಲಾ: ನೀವು ಯೋಜಿಸಿದ ಯೋಜನೆಗಳನ್ನು ನಿಮ್ಮವರೊಂದಿಗೆ ವಿವರಿಸಿ. ತಜ್ಞರಿಂದ ಸೂಕ್ತ ಸಲಹೆ, ಸಹಾಯ ಪಡೆಯುವುದು ಉತ್ತಮ. ದಾಂಪತ್ಯದಲ್ಲಿ ಸುಖಾನುಭವ. ಯೋಜನೆಗಳು ಫಲಪ್ರದವಾಗುವವು.

ವೃಶ್ಚಿಕ: ಬೇರೆಯವರ ವ್ಯವಹಾರದಿಂದ ಮೋಸಹೋಗುವ ಸಾಧ್ಯತೆ. ಹಿತಶತ್ರುಗಳ ಬಗ್ಗೆ ಎಚ್ಚರಿಕೆಯಿಂದ ಸಮಾಧಾನದಿಂದ ಮುಂದುವರೆಯುವುದು ಸೂಕ್ತ.

ಧನು: ಬಂಡವಾಳ ಹೂಡಿಕೆಗೆ ಅತ್ಯಂತ ಪ್ರಶಸ್ತ ಸಮಯವಾಗಿದೆ. ನಿಮ್ಮ ನಿರೀಕ್ಷೆಗೂ ಮೀರಿದ ಆದಾಯ ಹರಿದು ಬಂದು ವ್ಯವಹಾರದಲ್ಲಿ ಹೆಚ್ಚಿನ ಆಸಕ್ತಿ. ಆರೋಗ್ಯದ ಬಗ್ಗೆ ಎಚ್ಚರವಿರಲಿ.

ಮಕರ: ವಾಹನ, ಆಸ್ತಿ ಖರೀದಿಯ ಸಾಧ್ಯತೆ. ಗುರುಹಿರಿಯರ ಆಶೀರ್ವಾದ ದೊರೆಯಲಿದೆ. ಬಹುದಿನಗಳ ಬಯಕೆ ಈಡೇರುವ ಸಾಧ್ಯತೆ. ಪತ್ನಿಯ ಆರೋಗ್ಯದ ಬಗ್ಗೆ ಗಮನ ಅಗತ್ಯ. ದೂರದ ಪ್ರಯಾಣದ ಸಾಧ್ಯತೆ.

ಕುಂಭ: ಆರ್ಥಿಕ ಸಂಪನ್ಮೂಲಗಳು ಅಭಿವೃದ್ಧಿಯಾಗಲಿದೆ. ಅಲಂಕಾರಿ ವಸ್ತುಗಳನ್ನು ಖರೀದಿಸುವ ಸಾಧ್ಯತೆ. ಮಕ್ಕಳ ವಿದ್ಯಾಭ್ಯಾಸದಲ್ಲಿ ಪ್ರಗತಿ. ಕುಟುಂಬಕ್ಕೊಂದು ವಿಶೇಷ ಗೌರವ ತಂದುಕೊಡಲಿದ್ದಾರೆ.

ಮೀನ: ಕುಟುಂಬದವರೊಡನೆ ಧಾರ್ಮಿಕ ಕ್ಷೇತ್ರ ದರ್ಶನ ಲಭ್ಯವಾಗಲಿದೆ. ಮಹಿಳೆಯರ ಇಷ್ಟಾರ್ಥ ಸಿದ್ಧಿಯಾಗುವ ಕಾಲ. ಗೃಹ ನಿರ್ಮಾಣ ಯೋಜನೆ ಸಿದ್ಧವಾಗುವ ಸಾಧ್ಯತೆ.

ನಿಮ್ಮ ಜನ್ಮದಿನ 17-ಮೇ ಈ ದಿನ ಅತ್ಯಂತ ಶುಭಕರ. ರಾಜಕೀಯ ಮುತ್ಸದ್ದಿಗಳಿಗೆ ಬಿಡುವಿಲ್ಲದ ಕೆಲಸಗಳೊಂದಿಗೆ ಗೌರವ ಪ್ರಾಪ್ತಿ. ಸ್ತ್ರೀಯರಿಗೆ ಉತ್ತಮ ಆರೋಗ್ಯದೊಂದಿಗೆ ಸಂತಾನ ಭಾಗ್ಯ. ವೈದ್ಯಕೀಯ ವೃತ್ತಿಯಲ್ಲಿ ಅತ್ಯಂತ ಯಶಸ್ಸು ದೊರೆಯಲಿದೆ. ರೈತಾಪಿ ವರ್ಗದವರಿಗೆ ಅನಿಶ್ಚಿತತೆ ತಲೆದೋರಬಹುದು.

ಪದಬಂಧ 4599 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಶಬ್ದದ ಅಭಿಪ್ರಾಯ (2)
3.ವಿಜ್ಞಾನಿಯ ಜೊತೆಗೆ ಬಲ್ಲವನಿದ್ದಾನೆ (2)
5.ಲಲಾಟಲಿಪಿ ನಿಮಗೆ ಕಾಣಿಸುತ್ತಿದೆಯೇ? (5)
6.ಒಳ್ಳೆಯ ಭಾವನೆ (3)
7.ಉತ್ತರದವರ ಸ್ನಾನ (3)
8.ಇದು ಮಧ್ಯಸ್ತಿಕೆ (5)
9.ನಿಧಾನವಾಗಿ ರೂಢಿಸಿಕೊಂಡ ರೀತಿ! (3)
10.ಕುಸ್ತಿ ಏಕೆ? ಈತ ದೇವರನ್ನೇ ನಂಬದವನು! (3)
13.ಪಾಕ ಮಾಡಿದಾಗ ದೊರೆತ ಉಡುಗೊರೆ (5)
14.ನೆನಪಾದಾಗ ಹೇಳಲಿಕ್ಕೆ ಇದೊಂದು ಕಾರಣ! (2)
15.ಅಚ್ಚುಮೆಚ್ಚಿನ ಕಡಿಗತ್ತಿ (2)

ಮೇಲಿಂದ ಕೆಳಕ್ಕೆ

1.ನಂಬಿಕೆಯಿಲ್ಲದಿರುವುದು (4)
2.ಮೂಗಿನಲ್ಲಿ ಸುರಿಯುವ ಶ್ಲೇಷ್ಮ (3)
4.ಸ್ವಲ್ಪವೂ ಪ್ರಯೋಜನಕ್ಕೆ ಬಾರದುದು (4)
5.ಅಶ್ವದ ಮೊಗವಿದು (5)
7.ಈ ಲೀಡರ್ ಪಕ್ಕಾ ಕನ್ನಡಿಗ! (5)
9.ಜ್ಞಾಪಕದಿಂದ ಮಾಡಿರುವ ಮನವಿ (4)
11.ಅಕ್ಕಿ ತೊಳೆದ ನೀರು (4)
12.ಆನಂದ ಹೀಗೆ ಬಂದಿದೆ (3)



4598ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಪರಿತಾಪ 3.ಕೂಗಳತೆ 4.ಮಾರ್ಮಿಕ 5.ಅವಗುಣ 7.ಷರಬತ್ತು 9.ಅಂತರ್ಧಾನ 10.ತರಗತಿ 12.ವಕ್ತಾರ 14.ಉಪಹಾಸ 15.ಮಧುಚಂದ್ರ

ಮೇಲಿಂದ ಕೆಳಕ್ಕೆ: 1.ಪತ್ತೆ 2.ಪರಿಮಾಣ 3.ಕೂಲಂಕಷ 6.ವರಾತ 8.ಬಳಗ 10.ನವಮಾಸ 11.ತರತಮ 13.ಇಂದ್ರ

ಸುಡೊಕು 4985

			8				1	
				4			7	
		4	9		2	8	3	6
3		6				5		9
	7		3	2	4			
		1				3		7
4			6		1		9	
	3				5			
6		8	2				5	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

4984 ಸುಡೊಕು

3	9	8	2	7	5	4	6	1
2	7	6	4	3	1	8	9	5
1	4	5	6	8	9	7	3	2
4	6	3	9	1	7	5	2	8
9	5	2	3	4	8	1	7	6
8	1	7	5	2	6	3	4	9
5	3	4	8	6	2	9	1	7
7	2	9	1	5	4	6	8	3
6	8	1	7	9	3	2	5	4

ಇಂದಿನ ಪಾಡ್‌ಕಾಸ್ಟ್ ವಿಶೇಷ
ವಚನವಾಣಿ
ಪ್ರತೀ ದಿನ: ದಿನದ ಸೂಕ್ತಿ, ಸಂಪಾದಕೀಯ, ಪ್ರಚಲಿತ
Prajavani.net/podcast

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು
100 ಮೊಟ್ಟೆಗೆ ₹480
12 ಮೊಟ್ಟೆಗೆ ₹65
ಮೈಸೂರು
100 ಮೊಟ್ಟೆಗೆ ₹480

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ) ₹200-310
ದ್ವಿತಳಿ (ಬಿ.ವಿ) ₹240-368

ನಿಧನ

12.10.1963 16.05.2021
ಶ್ರೀಮತಿ ಹೇಮಾವತಿ ಬಿ.ಜಿ.
ದೂರದರ್ಶನ ಧಾರಾವಾಹಿ ಮತ್ತು ಚಿತ್ರ ನಿರ್ಮಾಪಕಿ
ನನ್ನ ಧರ್ಮಪತ್ನಿ ಹೇಮಾವತಿ ಬಿ.ಜಿ ಇವರು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇನೆ.ಅವರ ಅಂತಿಮ ಕ್ರಿಯೆಗಳು 17ನೇ ಮೇ 2021 ರಂದು ಅಪರಾಹ್ನ 12.00 ಗಂಟೆಗೆ ಬನಶಂಕರಿಯ ಚಿತಾಗಾರದಲ್ಲಿ ನಡೆಯಲಿದೆ.
ಇಂತಿ ದುಃಖ ತಪ್ತರು
ಕೆ.ಸಿ. ಸುಬ್ರಮಣಿ ರಾಜು (ಯಾದವ್) ಮತ್ತು ಕುಟುಂಬ

ಭಾವಪೂರ್ಣ ಶ್ರದ್ಧಾಂಜಲಿ

ಟಿ.ಎನ್. ರಮೇಶ್ (53ವರ್ಷ)
(ಮಾಜಿ ನಿರ್ದೇಶಕರು KHB ಮತ್ತು KPTCL)
ಇವರು ದಿನಾಂಕ 16.05.2021ರಂದು ಭಾನುವಾರ ಮೈಸೂರು ಆಸ್ಪತ್ರೆಯಲ್ಲಿ ಕೋವಿಡ್‌ನಿಂದ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರ ದಿವ್ಯಾತ್ಮಕ್ಕೆ ಭಗವಂತನು ಚಿರಶಾಂತಿ ಕರುಣಿಸಲೆಂದು ಪ್ರಾರ್ಥಿಸುವ
ಇಂತಿ ದುಃಖತಪ್ತರು
ಪತ್ನಿ ಕವಿತಾ ರಮೇಶ್, ಕುಟುಂಬ ಸದಸ್ಯರು, ಬಂಧು –ಮಿತ್ರರು ಮತ್ತು Koshys ಸ್ನೇಹಿತರು
ಶ್ರೀ ವೆಂಕಟಪ್ಪ - 98452 08891
ಶ್ರೀ ರಾಮಚಂದ್ರ - 94499 86544

ಶಂಕರ: ಅದ್ವೈತದರ್ಶನದ ಆಚಾರ್ಯ

• ಎಸ್. ಸೂರ್ಯಪ್ರಕಾಶ ಪಂಡಿತ್

ಇಂದು ಶಂಕರ ಜಯಂತಿ

ಕಳೆದ ವರ್ಷ ಶಂಕರಾಚಾರ್ಯರನ್ನು ಕುರಿತ ಲೇಖನವನ್ನು ಆರಂಭಿಸಿದ ಮಾತುಗಳೊಂದಿಗೆ ಈ ವರ್ಷದ ಲೇಖನವನ್ನೂ ಆರಂಭಿಸಬಹುದು; ಕಾರಣ ಸಮಸ್ಯೆ ಹಾಗೆಯೇ ಇದೆ, ಇನ್ನೂ ಹೆಚ್ಚಾಗಿದೆ!

'ಇಡಿಯ ಜಗತ್ತಿಗೆ ಕೊರೊನಾ ಭೀತಿಯಿಂದ ಆತಂಕ ಎದುರಾಗಿದೆ. ಇದರಿಂದ ನಾವು ಬಿಡುಗಡೆಯನ್ನು ಪಡೆಯಬೇಕಾದರೆ ನಾವೆಲ್ಲರೂ ವೈರಸ್ ವಿರುದ್ಧ ಒಂದಾಗಿ ಹೋರಾಡಬೇಕಾಗಿದೆ. ಆದರೆ ದೇಶ ದೇಶಗಳ ನಡುವಿನ ವೈರ, ಮನುಷ್ಯ ಮನುಷ್ಯನ ನಡುವಿನ ದ್ವೇಷ ಈ ಸಂದರ್ಭದಲ್ಲೂ ಎದ್ದುಕಾಣುತ್ತಿರುವುದು ಸುಳ್ಳಲ್ಲ. ಒಗ್ಗಟ್ಟಿನಿಂದ ಇರಬೇಕಾದ ಸಮಯದಲ್ಲೂ ಮನುಷ್ಯರು ಪರಸ್ಪರ ಕಿತ್ತಾಡುತ್ತಿದ್ದಾರೆ; ಸಂಕಷ್ಟದಲ್ಲೂ ವಿವೇಕದಿಂದ ನಡೆದುಕೊಳ್ಳುತ್ತಿಲ್ಲ. ಈ ವಿಚಿತ್ರವೂ, ವಿಷಮತೆಯೂ ಆದ ಮಾನಸಿಕತೆಗೆ ಕಾರಣವೇ 'ಅವಿದ್ಯೆ'.

ಅವಿದ್ಯೆ ಎಂದರೇನು? ಇದರ ಬಗ್ಗೆ ವಿವರವಾಗಿ ತಿಳಿಸಿಕೊಟ್ಟವರು ಆಚಾರ್ಯ ಶಂಕರ.

ಒಬ್ಬರು ಇನ್ನೊಬ್ಬರ ಬಗ್ಗೆ ದ್ವೇಷ-ಅಸೂಯೆಗಳನ್ನು ಏಕಾದರೂ ಪ್ರಕಟಿಸುತ್ತಾರೆ? 'ಅವನು ನಾನಲ್ಲ', 'ಅವನು ಬೇರೆ, ನಾನು ಬೇರೆ' – ಇದೇ ಭೇದಬುದ್ಧಿ ಅಲ್ಲವೆ?

ಆಚಾರ್ಯ ಶಂಕರರು ಈ ಭೇದಬುದ್ಧಿಯನ್ನೇ ಅವಿದ್ಯೆ ಎಂದರು. ಎಲ್ಲರಲ್ಲೂ ಒಂದೇ ಚೈತನ್ಯ ಇರುವಾಗ 'ಅವನು ಬೇರೆ, ನಾನು ಬೇರೆ' ಎಂಬ ತಿಳಿವಳಿಕೆಯೇ ತಪ್ಪು ಎಂದರು. ಈ ಚೈತನ್ಯವನ್ನೇ ಅವರು 'ಬ್ರಹ್ಮ' ಎಂದು ಕರೆದರು. ಬ್ರಹ್ಮ ಎಂದರೆ ಬೃಹತ್ತಾದುದು; ಎಷ್ಟು ಬೃಹತ್ತಾದುದು ಎಂದರೆ ಅದು ಸಮಸ್ತ ಸೃಷ್ಟಿಯನ್ನೂ ಒಳಗೊಂಡು, ಅದನ್ನೂ ಮೀರಿ ನಿಂತ ಚೈತನ್ಯವಸ್ತು.

ಒಂದೇ ಮಣ್ಣು ಮಡಕೆಯಾಗಿ, ತಟ್ಟೆಯಾಗಿ, ಮನೆಯಾಗಿ ಬೇರೆ ಬೇರೆ ರೂಪದಲ್ಲಿ ತೋರಿಕೊಳ್ಳುತ್ತದೆ. ಆದರೆ ಮೂಲದಲ್ಲಿ 'ಮಣ್ಣು' ಒಂದೇ. ಅಂತೆಯೇ ಅವನು ಕರಿಯ, ಇವನು ಬಿಳಿಯ, ಅವನು ಎತ್ತರ, ಇವನು ಕುಳ್ಳ – ಹೀಗೆ ನಮ್ಮಲ್ಲಿ ಮೇಲ್ನೋಟಕ್ಕೆ ಪರಸ್ಪರ ಭೇದವಾಗಿ ಕಾಣಿಸಿದರೂ ಎಲ್ಲರಲ್ಲೂ ಸಮಾನವಾಗಿರುವುದು ಬ್ರಹ್ಮವಸ್ತು.'

> ಶಂಕರರ ಸಿದ್ಧಾಂತದ ಪ್ರಕಾರ ಜಗತ್ತಿನಲ್ಲಿರುವುದೆಲ್ಲವೂ ಒಂದೇ ತತ್ತ್ವ, ಹೀಗಾಗಿ ಶಂಕರರ ಸಿದ್ಧಾಂತವನ್ನು 'ವಿಶ್ವಧರ್ಮ' ಎಂದು ಕರೆಯಬಹುದು.

ಭೇದಬುದ್ಧಿಯೇ ನಮ್ಮ ಇಂದಿನ ಹಲವು ಸಮಸ್ಯೆಗಳಿಗೆ ಮೂಲ. ಇದು ಅವಿವೇಕವೇ ಹೊರತು ವಿವೇಕವಲ್ಲ ಎಂದು ಪ್ರತಿಪಾದಿಸಿದವರು ಆಚಾರ್ಯ ಶಂಕರರು.

'ಅವಿದ್ಯೆ' ಎಂದರೆ ನಾವು ಈಗ ಸಾಮಾನ್ಯವಾಗಿ ಅರ್ಥಮಾಡಿಕೊಳ್ಳುವಂತೆ ಶಾಲಾ ಶಿಕ್ಷಣವನ್ನು ಪಡೆಯದಿರುವುದು ಅಲ್ಲ; ಶಾಶ್ವತತತ್ತ್ವವನ್ನು ಅರ್ಥಮಾಡಿಕೊಳ್ಳದಿರುವುದು. ಜಗತ್ತಿನ ಎಲ್ಲ ಆಗುಹೋಗುಗಳಿಗೂ ಮೂಲವಾಗಿರುವ, ಅಷ್ಟೇಕೆ, ತಾನೇ ಇಡಿಯ ಸೃಷ್ಟಿಯಾಗಿರುವ ತತ್ತ್ವವನ್ನು ತಿಳಿದುಕೊಳ್ಳುವುದು 'ವಿದ್ಯೆ'. ಇದನ್ನು ತಿಳಿದುಕೊಂಡ ಮೇಲೆ ನಮಗೆ ಜಗತ್ತು ಮೊದಲಿನಂತೆ ಕಾಣಿಸದು; ಇಲ್ಲಿಯ ಶೋಕ ಮೋಹ ಭಯಾದಿಗಳು ನಮ್ಮನ್ನು ಪೀಡಿಸದು. ಅವಿದ್ಯೆಯನ್ನು ಹೋಗಲಾಡಿಸಿಕೊಂಡರೆ ನಾವು ನೆಮ್ಮದಿಯಾಗಿರಬಹುದು ಎನ್ನುವುದು ಆಚಾರ್ಯ ಶಂಕರರ ದರ್ಶನದ ಮುಖ್ಯ ಪ್ರತಿಪಾದನೆಗಳಲ್ಲಿ ಒಂದು.

ವಿದ್ಯೆಯನ್ನು ಸಂಪಾದಿಸಲು ಅಡ್ಡಿಗಳೆಂದರೆ ಅಗ್ರಹಣ, ಸಂಶಯ, ಅನ್ಯಥಾಗ್ರಹಣ. ಅಗ್ರಹಣ ಎಂದರೆ ವಿಷಯವನ್ನು ತಿಳಿಯುವುದರಲ್ಲಿ ಅಸಮರ್ಥತೆ; ಸಂಶಯ ಎಂದರೆ ಗೊಂದಲ, ಸರಿಯೋ ತಪ್ಪೋ ಎಂಬುದರಲ್ಲಿ ಸ್ಪಷ್ಟವಿಲ್ಲದಿರುವುದು; ಅನ್ಯಥಾಗ್ರಹಣ ತಪ್ಪಾಗಿ ತಿಳಿಯುವುದು. ಈ ಮೂರರಿಂದ ನಮ್ಮನ್ನು ಬಿಡಿಸಿಕೊಂಡರೆ ಆಗ ನಮಗೆ ವಿದ್ಯೆ ಪ್ರಾಪ್ತವಾಗುತ್ತದೆ.

ಸದ್ಯದ ನಮ್ಮ ಸಮಸ್ಯೆಯನ್ನೇ ನೋಡಬಹುದು. ಕೊರೊನಾ ವಿಷಯದಲ್ಲಿ ಅಗ್ರಹಣ, ಸಂಶಯ ಮತ್ತು ಅನ್ಯಥಾಗ್ರಹಣ – ಇವು ಮೂರು ಕೂಡ ನಮಗೆ ತೊಂದರೆಯನ್ನು ಒಡ್ಡುತ್ತಿರುವುದು ಸ್ಪಷ್ಟ. ಇವು ಮೂರು ನಮ್ಮ ಇಂದಿನ ಅವಿದ್ಯೆಗೆ ಕಾರಣವಾಗಿದೆ. ಶಂಕರರು ದೃಢಗೊಳಿಸಿದ ಶಾಸ್ತ್ರಪದ್ಧತಿ ನಮ್ಮ ಲೌಕಿಕ ಮತ್ತು ಅಲೌಕಿಕ 'ಅವಿದ್ಯೆ'ಗಳನ್ನು ಪರಿಹರಿಸಿಕೊಳ್ಳಲು ನೆರವಾಗುತ್ತದೆ ಎಂಬುದರಲ್ಲಿ ಸಂದೇಹವಿಲ್ಲ.

ಮನುಷ್ಯನಿಗೆ ಎದುರಾಗುವ ಎಲ್ಲ ಪ್ರಶ್ನೆಗಳು ಮೂರು ವಿವರಗಳ ಚೌಕಟ್ಟಿನಲ್ಲಿಯೇ ಇರುತ್ತವೆ; ಅವೇ ಜಗತ್ತು-ಜೀವ ಮತ್ತು ಈಶ್ವರ. ಇವನ್ನು ಆಳವಾಗಿ ಚಿಂತನೆ ನಡೆಸಿ, ಅದಕ್ಕೆ ಗಟ್ಟಿಯಾದ ತಾತ್ತ್ವಿಕ ನೆಲೆಯನ್ನು ಒದಗಿಸಿದವರಲ್ಲಿ ಶಂಕರರು ಪ್ರಮುಖರು. ಉಪನಿಷತ್ತುಗಳಲ್ಲಿಯೇ ಈ ವಿವರಗಳು ಸ್ಪಷ್ಟವಾಗಿ ನಿರೂಪಿತವಾಗಿವೆ ಎನ್ನುವುದು ಶಂಕರರ ನಿಲುವು. ಹೀಗಾಗಿಯೇ ಅವರು ಪ್ರತಿಪಾದಿಸಿದ ಸಿದ್ಧಾಂತವನ್ನು 'ಔಪನಿಷದ ದರ್ಶನ' ಎಂದು ಕರೆದರು. ಆದರೆ ಜಗತ್ತು ಅದನ್ನು 'ಅದ್ವೈತದರ್ಶನ' ಎಂದು ಸ್ವೀಕರಿಸಿತು. ಅದ್ವೈತ ಎಂದರೆ ಎರಡನೆಯದ್ದು ಇಲ್ಲ; ಇಡಿಯ ಸೃಷ್ಟಿಗೆ ಮೂಲವೂ, ಮಾತ್ರವಲ್ಲ, ಸೃಷ್ಟಿಯಲ್ಲಿರುವುದೆಲ್ಲವೂ ಒಂದೇ ಚೈತನ್ಯ ಎನ್ನುವುದು ಈ ದರ್ಶನದ ಸರಳ ನಿರೂಪಣೆ. ಈ ಏಕತತ್ತ್ವವೇ ಆತ್ಮ ಅಥವಾ ಬ್ರಹ್ಮ. ಶಂಕರರ ಸಿದ್ಧಾಂತದ ಪ್ರಕಾರ ಜಗತ್ತಿನಲ್ಲಿರುವುದೆಲ್ಲವೂ ಒಂದೇ ತತ್ತ್ವ; ಆದ್ದರಿಂದ ಜಗತ್ತಿನಲ್ಲಿ ಜಾತಿ-ಮತ-ದೇಶ-ಭಾಷೆ ಮುಂತಾದವುಗಳಿಂದ ಭೇದ ಏರ್ಪಡುವುದು ವಿವೇಕವಲ್ಲ. ಹೀಗಾಗಿ ಅವರ ಸಿದ್ಧಾಂತವನ್ನು 'ವಿಶ್ವಧರ್ಮ' ಎಂದು ಕರೆಯುವುದೇ ಉಚಿತವಾಗುತ್ತದೆ. ❖

ಪ್ರಜಾವಾಣಿ ಸಂವಾದ
facebook LIVE
ಫೇಸ್‌ಬುಕ್‌ನಲ್ಲಿ ನೇರ ಪ್ರಸಾರ
ಕಾಂಗ್ರೆಸ್ ಪಕ್ಷ ಮತ್ತೆ ರಾಷ್ಟ್ರಮಟ್ಟದಲ್ಲಿ ಮೇಲೆದ್ದು ಬರಬಹುದೆ?
ಸಂವಾದದಲ್ಲಿ ಪಾಲ್ಗೊಳ್ಳುವವರು



ಆರ್. ಧ್ರುವನಾರಾಯಣ, ಕಾರ್ಯಾಧ್ಯಕ್ಷ, ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ



ಸಂದೀಪ್ ಶಾಸ್ತ್ರಿ, ರಾಜಕೀಯ ವಿಶ್ಲೇಷಕ

ಸಿ.ಟಿ.ರವಿ, ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ, ಬಿಜೆಪಿ

ಇಂದು ಮಧ್ಯಾಹ್ನ 12 ರಿಂದ 1
fb.com/prajavani.net

ಕೇಂದ್ರದಿಂದ ರಾಜ್ಯಕ್ಕೆ 4.25 ಲಕ್ಷ ವಯಲ್ಸ್ ರೆಮ್‌ಡಿಸಿವಿರ್ ಹಂಚಿಕೆ

ಬೆಂಗಳೂರು: 'ಕೇಂದ್ರ ಸರ್ಕಾರ ವಿವಿಧ ರಾಜ್ಯಗಳಿಗೆ ಮೇ 17 ರಿಂದ ಮೇ 23ರವರೆಗಿನ ಬಳಕೆಗಾಗಿ 23 ಲಕ್ಷ ವಯಲ್ಸ್ ರೆಮ್‌ಡಿಸಿವಿರ್ ಚುಚ್ಚು ಮದ್ದು ಹಂಚಿಕೆ ಮಾಡಿದೆ. ಅದರಲ್ಲಿ ಕರ್ನಾಟಕಕ್ಕೆ 4.25 ಲಕ್ಷ ವಯಲ್ಸ್ ನೀಡಲಾಗಿದೆ ಎಂದು ಕೇಂದ್ರ ರಾಸಾಯನಿಕ ಮತ್ತು ರಸಗೊಬ್ಬರ ಸಚಿವ ಡಿ.ವಿ. ಸದಾನಂದಗೌಡ ತಿಳಿಸಿದ್ದಾರೆ.

'ಏಪ್ರಿಲ್ 21ರಿಂದ ಇದುವರೆಗೆ ಒಟ್ಟು 76 ಲಕ್ಷ ವಯಲ್ಸ್ ರೆಮ್‌ಡಿಸಿವಿರ್ ಔಷಧವನ್ನು ರಾಜ್ಯಗಳಿಗೆ ಹಂಚಿಕೆ ಮಾಡಿದೆ. ಅದರಲ್ಲಿ ಕರ್ನಾಟಕಕ್ಕೆ 10 ಲಕ್ಷ ವಯಲ್ಸ್ ದೊರೆತಿದೆ. ಮಹಾರಾಷ್ಟ್ರದ (14.92 ಲಕ್ಷ) ನಂತರ ಅತಿ ಹೆಚ್ಚು ರೆಮ್‌ಡಿಸಿವಿರ್ ಪಡೆದ ರಾಜ್ಯ ಕರ್ನಾಟಕ. ಆದರೆ, ಈ ಬಾರಿ ಕರ್ನಾಟಕ ಎಲ್ಲ ರಾಜ್ಯಗಳಿಗಿಂತ ಹೆಚ್ಚು ರೆಮ್‌ಡಿಸಿವಿರ್ ಪಡೆದಿದೆ' ಎಂದಿದ್ದಾರೆ.

'ರಾಜ್ಯಗಳಲ್ಲಿರುವ ಸಕ್ರಿಯ ಪ್ರಕರಣಗಳ ಸಂಖ್ಯೆ ಆಧರಿಸಿ ಹಂಚಿಕೆ ಮಾಡಲಾಗುತ್ತದೆ' ಎಂದೂ ತಿಳಿಸಿದ್ದಾರೆ.

10 ನಗರಗಳಲ್ಲಿ 'ವಿಕೇಂದ್ರೀಕೃತ ಟ್ರಯಾಜ್ ಸೆಂಟರ್': ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಪ್ರಕರಣಗಳು ಹೆಚ್ಚಿರುವ 10 ಮಹಾನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ತಕ್ಷಣದಿಂದಲೇ 'ವಿಕೇಂದ್ರೀಕೃತ ಟ್ರಯಾಜ್ ಸೆಂಟರ್' (ಡಿಟಿಸಿ) ಆರಂಭಿಸುವಂತೆ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

ಬೆಳಗಾವಿ, ಮಂಗಳೂರು, ತುಮಕೂರು, ಮೈಸೂರು, ಕಲಬುರ್ಗಿ, ಧಾರವಾಡ-ಹುಬ್ಬಳ್ಳಿ, ದಾವಣಗೆರೆ, ಬಳ್ಳಾರಿ, ಶಿವಮೊಗ್ಗ ಮತ್ತು ವಿಜಯಪುರ ನಗರ ಪಾಲಿಕೆಗಳಲ್ಲಿ ವಿಕೇಂದ್ರೀಕೃತ ಟ್ರಯಾಜ್ ಕೇಂದ್ರಗಳನ್ನು ಸ್ಥಾಪಿಸುವ ಕುರಿತಂತೆ ಮುಖ್ಯ ಕಾರ್ಯದರ್ಶಿ ಪಿ. ರವಿಕುಮಾರ್ ಅವರು ಮಾರ್ಗಸೂಚಿ ಹೊರಡಿಸಿದ್ದಾರೆ.

ಜಿಲ್ಲೆಗಳಲ್ಲಿ ಕೊರೊನಾ ಪ್ರಕರಣ ಹೆಚ್ಚುತ್ತಿರುವ ಕಾರಣ ಬಿಬಿಎಂಪಿ ಮಾದರಿಯಲ್ಲಿಯೇ ಕೋವಿಡ್ ಪ್ರಕರಣ ಹೆಚ್ಚಿರುವ 10 ನಗರ ಪಾಲಿಕೆಗಳ ವ್ಯಾಪ್ತಿಯಲ್ಲೂ ಟ್ರಯಾಜ್ ಸೆಂಟರ್ ಮಾಡಲು ಸರ್ಕಾರ ನಿರ್ಧರಿಸಿದೆ.

ರೋಗ ಲಕ್ಷಣ ಕಡಿಮೆ ಇರುವವರು ಅಗತ್ಯ ಇಲ್ಲದಿದ್ದರೂ ಆಸ್ಪತ್ರೆ ದಾಖಲಾಗುತ್ತಿದ್ದಾರೆ. ಇದರಿಂದ ತೀವ್ರ ಸೋಂಕಿತರಿಗೆ ಹಾಸಿಗೆ ಸಿಗದ ಪರಿಸ್ಥಿತಿ ನಿರ್ಮಾಣವಾಗುತ್ತಿದೆ. ಹೀಗಾಗಿ, ಕಡಿಮೆ ರೋಗ ಲಕ್ಷಣ ಇರುವವರು ಮನೆಯಲ್ಲೇ ಪ್ರತ್ಯೇಕವಾಗಿ (ಹೋಂ ಐಸೋಲೇಷನ್) ಅಥವಾ ಕೋವಿಡ್ ಕೇರ್ ಸೆಂಟರ್‌ನಲ್ಲಿ (ಸಿಸಿಸಿ) ಯಲ್ಲಿ ಇರಬಹುದಾಗಿದೆ.

ಬೆಂಗಳೂರಿನಲ್ಲಿ ಕೋವಿಡ್ ರೋಗ ಲಕ್ಷಣ ಕಡಿಮೆ ಇರುವ ಹಲವರು ಆಸ್ಪತ್ರೆಗೆ ದಾಖಲಾಗಿ ಅಗತ್ಯ ಇರುವವರಿಗೆ ಹಾಸಿಗೆ ಸಿಗದಂತಾಗಿತ್ತು. ಇದೀಗ ಇತರ ನಗರ ಪಾಲಿಕೆಗಳಲ್ಲಿಯೂ ಪ್ರಕರಣಗಳು ಹೆಚ್ಚಾಗುತ್ತಿದ್ದು, ಟ್ರಯಾಜ್ ಕೇಂದ್ರಗಳನ್ನು ಆರಂಭಿಸಲು ನಿರ್ಧರಿಸಲಾಗಿದೆ. ಆ ಮೂಲಕ, ಅಗತ್ಯವಿಲ್ಲದ ಸೋಂಕಿತರು ಆಸ್ಪತ್ರೆ ದಾಖಲಾಗುವುದನ್ನು ತಪ್ಪಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಇಂಥ ಕೇಂದ್ರಗಳನ್ನು ಪ್ರಾಥಮಿಕ ಆರೋಗ್ಯ ಕೇಂದ್ರ, ಸರ್ಕಾರಿ ಆಸ್ಪತ್ರೆಗಳಲ್ಲಿ, ವೈದ್ಯಕೀಯ ಕಾಲೇಜು ಆಸ್ಪತ್ರೆಗಳಲ್ಲಿ, ಸಿಸಿಸಿ ಅಥವಾ ರೋಗಿಗಳ ಮನೆಗಳಲ್ಲಿ ಮಾಡಬಹುದಾಗಿದೆ.

ಈಗಾಗಲೇ ಕಾರ್ಯನಿರ್ವಹಿಸುತ್ತಿರುವ ಟ್ರಯಾಜ್ ಕೇಂದ್ರಗಳ ಜೊತೆಗೆ ನಗರಗಳಲ್ಲಿ 3-4 ಟ್ರಯಾಜ್ ಕೇಂದ್ರಗಳನ್ನು ತೆರೆಯುವ ಅಗತ್ಯ ಇದೆ. ಟ್ರಯಾಜ್ ಕೇಂದ್ರಗಳಲ್ಲಿ ರೋಗಿಯನ್ನು ಪರಿಶೀಲಿಸಿ, ಆಸ್ಪತ್ರೆಯಲ್ಲಿ ದಾಖಲಾಗಬೇಕೆ, ಸಿಸಿಸಿ ಅಥವಾ ಹೋಂ ಐಸೋಲೇಷನ್‌ಗೆ ಕಳುಹಿಸಬೇಕೆ ಎಂದು ನಿರ್ಧರಿಸಲಾಗುವುದು.

ಆಸ್ಪತ್ರೆಗೆ ದಾಖಲಾಗಬೇಕಾದವರಿಗೆ ವೈದ್ಯರು ಹಾಸಿಗೆಯನ್ನು ಕಾಯ್ದಿರಿಸುತ್ತಾರೆ. ಹಾಸಿಗೆ ಲಭ್ಯ ಇಲ್ಲದೇ ಇದ್ದರೆ ಸಿಸಿಸಿಗಳಿಗೆ ದಾಖಲಿಸಿ ವೈದ್ಯಕೀಯ ಸಲಹೆ ನೀಡಲಾಗುವುದು. ಈ ಕೇಂದ್ರಗಳಲ್ಲಿ ಆರೋಗ್ಯ ಕಾರ್ಯಕರ್ತರು ನಿಗಾ ವಹಿಸಬೇಕು ಎಂದೂ ಮಾರ್ಗಸೂಚಿಯಲ್ಲಿ ತಿಳಿಸಲಾಗಿದೆ.

ಪೊಟ್ಯಾಷ್ ರಸಗೊಬ್ಬರಕ್ಕೆ ಸಬ್ಸಿಡಿ?

ನವದೆಹಲಿ: ಫಾಸ್ಫೇಟ್ ಮತ್ತು ಪೊಟ್ಯಾಷ್ ರಸಗೊಬ್ಬರಗಳಿಗೆ ಈ ವರ್ಷವೂ ಸಬ್ಸಿಡಿ ನೀಡುವ ಬಗ್ಗೆ ಕೇಂದ್ರ ಸರ್ಕಾರ ಚಿಂತನೆ ನಡೆಸುತ್ತಿದೆ.

ಕಚ್ಚಾ ವಸ್ತುಗಳ ಬೆಲೆಗಳು ಜಾಗತಿಕವಾಗಿ ಹೆಚ್ಚಾಗಿರುವುದರಿಂದ, ರಸಗೊಬ್ಬರಗಳ ಬೆಲೆಗಳು ಹೆಚ್ಚಾಗಿವೆ. ಇದರಿಂದ ರೈತರ ಹೊರೆ ಕಡಿಮೆ ಮಾಡುವ ನಿಟ್ಟಿನಲ್ಲಿ ಈ ಕ್ರಮಕ್ಕೆ ಮುಂದಾಗಿದೆ.

ಫಾಸ್ಫೇಟ್ ಮತ್ತು ಪೊಟ್ಯಾಷ್ ರಸಗೊಬ್ಬರಗಳಿಗೆ ತಯಾರಕರು ದರಗಳನ್ನು ನಿಗದಿಪಡಿಸುತ್ತಾರೆ. ಕೆಲವು ತಿಂಗಳಿಂದ, ಡಿಎಪಿ ಮತ್ತು ಇತರ ಫಾಸ್ಫೇಟ್ ಮತ್ತು ಪೊಟ್ಯಾಷ್ ರಸಗೊಬ್ಬರಗಳ ತಯಾರಿಕೆಗೆ ಅಗತ್ಯವಿರುವ ಕಚ್ಚಾ ವಸ್ತುಗಳ ದರಗಳು ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಏರಿಕೆಯಾಗಿ, ಬೆಲೆಗಳು ಸಹ ಹೆಚ್ಚಾಗಿದ್ದವು.

ರಾಜ್ಯದಲ್ಲಿ 403 ಮಂದಿ ಮೃತ: ಎಲ್ಲ ಜಿಲ್ಲೆಗಳಲ್ಲಿ ಮರಣ ಪ್ರಕರಣಗಳು ವರದಿ

ರಾಜ್ಯದಲ್ಲಿ ಕೋವಿಡ್ ಪರೀಕ್ಷೆ, ಸೋಂಕಿತರ ಸಂಖ್ಯೆ ಇಳಿಕೆ

ಪ್ರಜಾವಾಣಿ ವಾರ್ತೆ



ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಪರೀಕ್ಷೆಗಳ ಸಂಖ್ಯೆ ಮತ್ತಷ್ಟು ಇಳಿಕೆ ಕಂಡಿದ್ದು, ಒಂದು ದಿನದ ಅವಧಿಯಲ್ಲಿ 1.13 ಲಕ್ಷ ಮಾದರಿಗಳನ್ನು ಪರೀಕ್ಷೆ ನಡೆಸಲಾಗಿದೆ. ಈ ಅವಧಿಯಲ್ಲಿ 31,531 ಮಂದಿ ಸೋಂಕಿತರಾಗಿರುವುದು ದೃಢಪಟ್ಟಿದೆ.

ಎರಡು ವಾರಗಳಿಂದ ಕೋವಿಡ್ ಪರೀಕ್ಷೆಗಳ ಸಂಖ್ಯೆಯು ಇಳಿಮುಖಮಾಡಿದೆ. ಇದೇ ವೇಳೆ 50 ಸಾವಿರದ ಗಡಿಯ ಆಸುಪಾಸಿನಲ್ಲಿದ್ದ ಸೋಂಕಿತ ಸಂಖ್ಯೆ ಕೂಡ ಕಡಿಮೆಯಾಗಿದೆ. ಶನಿವಾರ ಶೇ 35.20ಕ್ಕೆ ಏರಿಕೆಯಾಗಿದ್ದ ಸೋಂಕು ದೃಢ ಪ್ರಮಾಣ, ಭಾನುವಾರ ಶೇ 27.84ಕ್ಕೆ ಇಳಿಕೆಯಾಗಿದೆ. ಈ ತಿಂಗಳು 16 ದಿನಗಳಲ್ಲಿ 6.80 ಲಕ್ಷ ಕೋವಿಡ್ ಪ್ರಕರಣಗಳು ದೃಢಪಟ್ಟಿವೆ. ಈವರೆಗೆ ಕೋವಿಡ್ ಪೀಡಿತರಾದವರ ಒಟ್ಟು ಸಂಖ್ಯೆ 22 ಲಕ್ಷ ದಾಟಿದೆ.

ಕೋವಿಡ್ ಪೀಡಿತರಲ್ಲಿ ಬೆಂಗಳೂರಿನಲ್ಲಿ 143 ಮಂದಿ ಸೇರಿದಂತೆ ರಾಜ್ಯದಲ್ಲಿ 403 ಮಂದಿ ಮೃತಪಟ್ಟಿರುವುದು ದೃಢಪಟ್ಟಿದೆ. ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಮರಣ ಪ್ರಕರಣಗಳು ವರದಿಯಾಗಿವೆ. ಬಳ್ಳಾರಿಯಲ್ಲಿ 26 ಮಂದಿ, ಉತ್ತರ ಕನ್ನಡದಲ್ಲಿ 24 ಮಂದಿ, ಹಾಸನದಲ್ಲಿ 18 ಮಂದಿ, ಬೆಂಗಳೂರು ಗ್ರಾಮಾಂತರದಲ್ಲಿ 17 ಮಂದಿ, ಮಂಡ್ಯದಲ್ಲಿ 15 ಮಂದಿ, ಶಿವಮೊಗ್ಗದಲ್ಲಿ 14 ಮಂದಿ, ಹಾವೇರಿ, ಕೊಪ್ಪಳ ಮತ್ತು ತುಮಕೂರಿನಲ್ಲಿ ತಲಾ 11 ಮಂದಿ, ಕಲಬುರ್ಗಿಯಲ್ಲಿ 10 ಮಂದಿ ಸಾವಿಗೀಡಾಗಿರುವುದು ದೃಢಪಟ್ಟಿದೆ. ಈವರೆಗೆ ಕೋವಿಡ್‌ಗೆ ಸಾವಿಗೀಡಾದವರ ಒಟ್ಟು ಸಂಖ್ಯೆ 21,837ಕ್ಕೆ ಏರಿಕೆಯಾಗಿದೆ.

ಬೆಂಗಳೂರಿನಲ್ಲಿ ಕೋವಿಡ್ ಪೀಡಿತರ ಸಂಖ್ಯೆ ಇಳಿಕೆ ಕಂಡಿದೆ. 8,344 ಮಂದಿ ಸೋಂಕಿತರಾಗಿರುವುದು ದೃಢಪಟ್ಟಿದೆ. ತುಮಕೂರು (2,138), ಮೈಸೂರು (1,811), ಬೆಳಗಾವಿ (1,762), ಬಳ್ಳಾರಿ (1,729), ಹಾಸನ (1,182), ದಾವಣಗೆರೆ (1,155), ಉತ್ತರ ಕನ್ನಡ (1,087) ಜಿಲ್ಲೆಯಲ್ಲಿ ಅಧಿಕ ಪ್ರಕರಣಗಳು ಹೊಸದಾಗಿ ವರದಿಯಾಗಿವೆ. ರಾಜ್ಯದಲ್ಲಿ ಸಕ್ರಿಯ ಪ್ರಕರಣಗಳ ಸಂಖ್ಯೆ ಆರು ಲಕ್ಷ ದಾಟಿದೆ. ಸೋಂಕಿತರಲ್ಲಿ 36,475 ಮಂದಿ ಚೇತರಿಸಿಕೊಂಡಿದ್ದಾರೆ. ಈವರೆಗೆ ಗುಣಮುಖರಾದವರ ಸಂಖ್ಯೆ 15.81 ಲಕ್ಷ ದಾಟಿದೆ.

51 ಮಂದಿಗೆ ಕೋವಿಡ್ ದೃಢ

ಚಿಕ್ಕಮಗಳೂರು: ತಾಲ್ಲೂಕಿನ ಅಂಬಳೆ ಹೋಬಳಿಯ ಕೋಡಿಹಳ್ಳಿಯಲ್ಲಿ ಕೋವಿಡ್ ದೃಢಪಟ್ಟಿದ್ದ ವ್ಯಕ್ತಿಯ ಶವಸಂಸ್ಕಾರದಲ್ಲಿ ಭಾಗಿಯಾಗಿದ್ದ 22 ಜನರು ಹಾಗೂ ಆ ವ್ಯಕ್ತಿಯ ಪ್ರಾಥಮಿಕ ಸಂಪರ್ಕದಲ್ಲಿದ್ದ 29 ಮಂದಿ ಸೇರಿದಂತೆ ಒಟ್ಟು 51 ಮಂದಿಗೆ ಕೋವಿಡ್ ದೃಢಪಟ್ಟಿದೆ.

ಗ್ರಾಮದಲ್ಲಿ ನಾಲ್ಕು ದಿನಗಳ ಹಿಂದೆ ಅಂತ್ಯಸಂಸ್ಕಾರ ನಡೆದಿತ್ತು. ಸುಮಾರು 30 ಮಂದಿ ಪಾಲ್ಗೊಂಡಿದ್ದರು.

'ಗ್ರಾಮದ ವ್ಯಕ್ತಿಯೊಬ್ಬರಿಗೆ ಕೋವಿಡ್ ಲಕ್ಷಣಗಳು ಇದ್ದವು. ಮಾದರಿಯನ್ನು ಪರೀಕ್ಷೆಗೆ ನೀಡಿದ್ದರು. ಆಟೋದಲ್ಲಿ ಆಸ್ಪತ್ರೆಗೆ ತೆರಳುವಾಗ ಆ ವ್ಯಕ್ತಿ ಮೃತಪಟ್ಟಿದ್ದರು. ವರದಿ ಬರುವ ಮೊದಲೇ ಗ್ರಾಮದಲ್ಲಿ ಅಂತ್ಯಕ್ರಿಯೆ ನೆರವೇರಿತ್ತು' ಎಂದು ತಹಶೀಲ್ದಾರ್ ಡಾ.ಕೆ.ಜೆ.ಕಾಂತರಾಜ್ 'ಪ್ರಜಾವಾಣಿ'ಗೆ ತಿಳಿಸಿದರು.

'ಮೃತ ವ್ಯಕ್ತಿಗೆ ಕೋವಿಡ್ ದೃಢಪಟ್ಟಿತ್ತು. ಅಂತ್ಯಸಂಸ್ಕಾರದಲ್ಲಿ ಪಾಲ್ಗೊಂಡವರು ಮತ್ತು ಅವರ ಪ್ರಾಥಮಿಕ ಸಂಪರ್ಕಿತರು ಮಾದರಿ ಪರೀಕ್ಷೆಗೆ ನೀಡಿದ್ದರು. 51 ಮಂದಿಗೆ ಕೋವಿಡ್ ದೃಢವಾಗಿದೆ' ಎಂದು ತಿಳಿಸಿದರು.

ಒಳನೋಟ: ಕೋವಿಡ್ ನಡುವೆ ರೈತರ ಯಶೋಗಾಥೆ

ಬೆಂಗಳೂರು: 'ಕೋವಿಡ್ ನಡುವೆ ರೈತರ ಯಶೋಗಾಥೆ' ಶೀರ್ಷಿಕೆಯಡಿ 'ಪ್ರಜಾವಾಣಿ'ಯಲ್ಲಿ ಭಾನುವಾರ (ಮೇ 16) ಪ್ರಕಟವಾದ 'ಒಳನೋಟ' ವರದಿಗೆ ರಾಜ್ಯದಾದ್ಯಂತ ಓದುಗರು ಪ್ರತಿಕ್ರಿಯಿಸಿದ್ದಾರೆ. ಆಯ್ದ ಪ್ರತಿಕ್ರಿಯೆಗಳು ಇಲ್ಲಿವೆ.

ಸಣ್ಣ ರೈತರ ಕೈಹಿಡಿಯಿರಿ

ಲಾಕ್‌ಡೌನ್ ಬಿಕ್ಕಟ್ಟಿನಲ್ಲಿ ರೈತ ಉತ್ಪಾದಕ ಕಂಪನಿಗಳು ಹಾಗೂ ಕೆಲ ಸಂಘಟನೆಗಳು ರೈತರ ಉತ್ಪನ್ನಗಳಿಗೆ ಮಾರುಕಟ್ಟೆ ಒದಗಿಸಿರುವುದು ಶ್ಲಾಘನೀಯ. ಈ ವ್ಯವಸ್ಥೆಯಿಂದ ದೊಡ್ಡ ರೈತರಿಗೆ ಮಾತ್ರ ಅನುಕೂಲ ವಾಗಿದ್ದು, ಸಣ್ಣ ಪುಟ್ಟ ರೈತರ ಉತ್ಪನ್ನ ಗಳಿಗೆ ಸರಿಯಾದ ಮಾರುಕಟ್ಟೆ ಸಿಗದೆ, ಸಂಕಷ್ಟದಲ್ಲೇ ಇದ್ದಾರೆ. ಸರ್ಕಾರ ಇಂತಹ ರೈತರ ಕಡೆಗೆ ವಿಶೇಷ ಗಮನ ನೀಡಬೇಕು. ರೈತ ಸಮುದಾಯಕ್ಕೆ ಮಾರುಕಟ್ಟೆ ವ್ಯವಸ್ಥೆ ಕಲ್ಪಿಸಿ ಬೆಂಬಲಿಸಬೇಕು.

ಗೀತಾ, ವಿಜಯಪುರ

ಹಾಪ್‌ಕಾಮ್ಸ್ ಚುರುಕಾಗಲಿ

ಕೋವಿಡ್ ಎರಡನೇ ಅಲೆಯಸಂದರ್ಭದಲ್ಲಿಯೂ ರೈತರ ಸಂಕಷ್ಟಗಳು ಮುಂದುವರಿದಿವೆ. ಬೆಳೆದ ಬೆಳೆಗಳಿಗೆ ಮಾರುಕಟ್ಟೆ ಸಿಗುತ್ತಿಲ್ಲ. ಎಲ್ಲದಕ್ಕೂ ಲಾಕ್‌ಡೌನ್ ಅಡ್ಡಿಯಾಗಿದೆ. ಹಣ್ಣು-ತರಕಾರಿ ಬೆಳೆಗಾರರ ಪರಿಸ್ಥಿತಿ ಹೇಳತೀರದು. ಯಾದಗಿರಿ ವ್ಯಾಪ್ತಿಯಲ್ಲಿ ಹಾಪ್‌ಕಾಮ್ಸ್ ಸಕ್ರಿಯವಾಗಿಲ್ಲದಿರುವುದು ಈ ಭಾಗದ ರೈತರ ದುರಾದೃಷ್ಟ.

ಶರಣು, ಯಾದಗಿರಿ

'ಆನ್‌ಲೈನ್' ಮಾರಾಟ ಸೂಕ್ತ

ಕೊರೊನಾ ಅವಧಿಯಲ್ಲಿ ಗ್ರಾಹಕರೂ ಖರೀದಿಗೆ ಹೊರಬರಲು ಹಿಂದೇಟು ಹಾಕುತ್ತಾರೆ. ಇದರಿಂದ ರೈತರ ಉತ್ಪನ್ನಗಳು ಖರೀದಿಯಾಗದೆ, ನಷ್ಟ ಅನುಭವಿಸುತ್ತಿದ್ದಾರೆ. ಜಿಲ್ಲಾವಾರು ಇರುವ ಕೃಷಿ ಕೇಂದ್ರಗಳು ಹಾಗೂ ತೋಟಗಾರಿಕೆ ಇಲಾಖೆ ಗಳು ಆ ವ್ಯಾಪ್ತಿಯ ರೈತರ ಪರ ನಿಲ್ಲಬೇಕು. ಜಿಲ್ಲಾಮಟ್ಟದಲ್ಲಿ ಆನ್‌ಲೈನ್ ಮೂಲಕ ಹಣ್ಣು-ತರಕಾರಿ ಸೇರಿದಂತೆ ಇತರೆ ಉತ್ಪನ್ನಗಳ ಮಾರಾಟಕ್ಕೆ ವ್ಯವಸ್ಥೆ ಮಾಡಬೇಕು.

ವೀಣಾ, ದಾವಣಗೆರೆ

ಗ್ರಾಮೀಣ ರೈತರ ಕಡೆಗಣನೆ

ಸರ್ಕಾರದ ನಿಯಮಗಳಿಂದಲೇ ರೈತರಿಗೆ ಸಾಕಷ್ಟು ಸಮಸ್ಯೆಗಳು ಎದುರಾಗಿವೆ. ಕೇವಲ ನಗರಗಳನ್ನು ಗಮನದಲ್ಲಿಟ್ಟುಕೊಂಡು ಮಾರ್ಗಸೂಚಿ ಸಿದ್ಧಪಡಿಸಲಾಗಿದೆ. ಗ್ರಾಮೀಣ ಪ್ರದೇಶಗಳಲ್ಲಿ ಕೃಷಿ ಚಟುವಟಿಕೆಗಳಿಗೆ ಜಮೀನಿಗೆ ಹೋಗಿ ಬರಲು ವಾಹನ ಬಳಕೆ ಅನಿವಾರ್ಯ. ಆದರೆ, ವಾಹನ ಸಂಚಾರಕ್ಕೆ ನಿರ್ಬಂಧಿಸಿ ರೈತರಿಗೂ ಸಮಸ್ಯೆ ನೀಡಿದ್ದಾರೆ.

ಮಂಜು, ಯಾದಗಿರಿ

ದಲ್ಲಾಳಿಗಳಿಂದ ಮುಕ್ತಿ



ಬೀದರ್‌ನಲ್ಲಿ ಕಳೆದ ಬಾರಿ ಲಾಕ್‌ಡೌನ್ ಆಗಿ ಮಾರುಕಟ್ಟೆ ಗಳು ಬಂದ್ ಆದಾಗ, ತರಕಾರಿ ಬೆಳೆದ ರೈತರು ದಿಕ್ಕು ತೋಚದ ಸ್ಥಿತಿಯಲ್ಲಿದ್ದರು. ಬಸ್ ಸಂಚಾರ ಇಲ್ಲದ ಕಾರಣ ಬಸ್ ನಿಲ್ದಾಣವನ್ನೇ ತರಕಾರಿ ಮಾರುಕಟ್ಟೆಯನ್ನಾಗಿ ಪರಿವರ್ತಿಸಲಾಯಿತು. ಇದು ರೈತರಿಗೆ ವರವಾಯಿತು. ಇದರಿಂದ ರೈತರು ದಲ್ಲಾಳಿಗಳಿಂದ ಮುಕ್ತಿ ಪಡೆದು, ಲಾಭ ಪಡೆದಿದ್ದರು. ಅದೇ ಪದ್ಧತಿಯನ್ನು ಈಗಲೂ ಮುಂದುವರೆಸಿದರೆ, ರೈತರ ಸಮಸ್ಯೆ ನೀಗಬಲ್ಲದು.

ವೀರಭದ್ರಪ್ಪ, ಬೀದರ್

ಹಳ್ಳಿಗಳತ್ತ ಗಮನ ಹರಿಸಿ

ರೈತರ ಬೆಳೆಗಳಿಗೆ ಲಾಕ್‌ಡೌನ್ ಬೀಗ ಜಡಿದಿದೆ. ಈ ಪರಿಸ್ಥಿತಿಯಲ್ಲಿ ಸರ್ಕಾರವೇ ಜಿಲ್ಲಾ ವಾರು ರೈತರ ಉತ್ಪನ್ನಗಳನ್ನು ಖರೀದಿಸಬೇಕು. ಇದಕ್ಕಾಗಿ ತೋಟಗಾರಿಕೆ ಇಲಾಖೆ ಹಾಗೂ ಕೃಷಿ ಇಲಾಖೆಗಳ ಸಮಿತಿ ರಚಿಸಬೇಕು. ಬಳಿಕ ರೈತರಿಂದ ನೇರವಾಗಿ ಬೆಳೆಗಳನ್ನು ಖರೀದಿಸಬೇಕು. ಗ್ರಾಮಗಳಿಗೆ ತೆರಳಿ, ಕಿರು ಮಾರುಕಟ್ಟೆಗಳನ್ನು ತೆರೆಯಬೇಕು.

ಶ್ರೀಧರ್, ಕೊಪ್ಪಳ

ಕೋವಿಡ್‌ನಿಂದ ಶಿಕ್ಷಕರ ಸಾವು: ವರದಿ ನೀಡಲು ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಕಾರ್ಯದಲ್ಲಿ ತೊಡಗಿದ್ದ ಹಾಗೂ ಇತ್ತೀಚೆಗೆ ನಡೆದ ಉಪ ಚುನಾವಣೆಯಲ್ಲಿ ಕರ್ತವ್ಯ ನಿರ್ವಹಿಸಿದ ಹಲವು ಶಿಕ್ಷಕರು ಹಾಗೂ ಪದವಿಪೂರ್ವ ಉಪನ್ಯಾಸಕರು ಸೋಂಕು ತಗಲಿ ಸಾವನ್ನಪ್ಪಿರುವ ಕುರಿತಂತೆ ತಕ್ಷಣ ವರದಿ ನೀಡುವಂತೆ ಇಲಾಖೆಯ ಅಧಿಕಾರಿಗಳಿಗೆ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಎಸ್. ಸುರೇಶ್‌ಕುಮಾರ್ ನಿರ್ದೇಶನ ನೀಡಿದ್ದಾರೆ.

ಕೋವಿಡ್ ಕಾರಣದಿಂದ ಇದೇ ಏಪ್ರಿಲ್‌ನಿಂದ ಇಲ್ಲಿಯವರೆಗೆ ಮೃತಪಟ್ಟ ಶಿಕ್ಷಕರು ಹಾಗೂ ಉಪನ್ಯಾಸಕರ ಜಿಲ್ಲಾವಾರು ವಿವರ, ಆಸ್ಪತ್ರೆಗೆ ದಾಖಲಾದ ವಿವರ, ವಯೋಮಾನ, ಯಾವ ಕಾರಣದಿಂದ ಸೋಂಕಿತರಾದರು ಎಂಬ ಮಾಹಿತಿ ಸಹಿತ ವರದಿ ಮಂಡಿಸುವಂತೆ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರು ಮತ್ತು ಪದವಿಪೂರ್ವ ಶಿಕ್ಷಣ ನಿರ್ದೇಶಕರಿಗೆ ಸೂಚಿಸಿದ್ದಾರೆ.

ಕೋವಿಡ್ ಕಾರ್ಯದಲ್ಲಿ ನಿರತರಾಗಿದ್ದಾಗ ಮತ್ತು ಉಪ ಚುನಾವಣೆಯಲ್ಲಿ ಕರ್ತವ್ಯ ನಿರ್ವಹಿಸಿದ ಸಂದರ್ಭದಲ್ಲಿ ಸೋಂಕು ತಗಲಿ ಶಿಕ್ಷಕರು ಮೃತಪಟ್ಟ ಬಗ್ಗೆ ಮಾಧ್ಯಮಗಳ ವರದಿಯನ್ನು ಗಂಭೀರವಾಗಿ ಪರಿಗಣಿಸಿರುವ ಸಚಿವರು, 'ಇದು ದುರದೃಷ್ಟಕರ ಸಂಗತಿ' ಎಂದು ಖೇದ ವ್ಯಕ್ತಪಡಿಸಿದ್ದಾರೆ.

ಹೊಟೇಲ್ ಉದ್ಯಮಕ್ಕೆ ₹ 1.30 ಲಕ್ಷ ಕೋಟಿ ನಷ್ಟ

ನವದೆಹಲಿ (ಪಿಟಿಐ): ಕೋವಿಡ್–19 ಸಾಂಕ್ರಾಮಿಕದ ಪರಿಣಾಮವಾಗಿ ದೇಶದ ಹೊಟೇಲ್ ಉದ್ಯಮಕ್ಕೆ 2020–21ನೇ ಹಣಕಾಸು ವರ್ಷದಲ್ಲಿ ₹ 1.30 ಲಕ್ಷ ಕೋಟಿ ವರಮಾನ ನಷ್ಟವಾಗಿದೆ. ಹೀಗಾಗಿ, ತಕ್ಷಣವೇ ನೆರವು ನೀಡಬೇಕು ಎಂದು ಭಾರತೀಯ ಹೊಟೇಲ್ ಮತ್ತು ರೆಸ್ಟೋರೆಂಟ್ ಸಂಘಗಳ ಒಕ್ಕೂಟವು (ಎಫ್‌ಎಚ್‌ಆರ್‌ಎಐ) ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿದೆ.

ತಕ್ಷಣವೇ ಆರ್ಥಿಕ ಉತ್ತೇಜನಾ ಕ್ರಮಗಳನ್ನು ಘೋಷಿಸುವಂತೆ ಪ್ರಧಾನಿ ನರೇಂದ್ರ ಮೋದಿ ಮತ್ತು ಕೇಂದ್ರದ ಕೆಲವು ಸಚಿವರಿಗೆ ಪತ್ರ ಬರೆಯಲಾಗಿದೆ ಎಂದು ಒಕ್ಕೂಟ ತಿಳಿಸಿದೆ.

'2019–20ರಲ್ಲಿ ದೇಶದ ಹೊಟೇಲ್ ಉದ್ಯಮದ ಒಟ್ಟಾರೆ ವರಮಾನವು ₹ 1.82 ಲಕ್ಷ ಕೋಟಿಗಳಷ್ಟಿತ್ತು. ನಮ್ಮ ಅಂದಾಜಿನ ಪ್ರಕಾರ, 2020–21ರಲ್ಲಿ ಉದ್ಯಮದ ವರಮಾನದಲ್ಲಿ ₹ 1.30 ಲಕ್ಷ ಕೋಟಿ ನಷ್ಟವಾಗಿದೆ' ಎಂದು ಹೇಳಿದೆ.

ವೈಕುಂಠ ಸಮಾರಾಧನೆ

ಶ್ರೀ ಕಾರ್ತಿಕ್ ಗೌಡರವರು
ತಾ. 7–5–2021 ಶುಕ್ರವಾರದಂದು ಧೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ.
ತಾ. 17–5–2021 ಸೋಮವಾರದಂದು ವೈಕುಂಠ ಸಮಾರಾಧನೆಯನ್ನು ತಮ್ಮನಾದ ದಿಲೀಪ್ (ಪಣತ್ತೂರು) ಸ್ವಗೃಹದಲ್ಲಿ ಏರ್ಪಡಿಸಲಾಗಿದೆ.
ಇಂತಿ: ದು:ಖತಪ್ತರು :
ಕುಟುಂಬ ವರ್ಗದವರು ಹಾಗೂ ಬಂಧು–ಮಿತ್ರರು
(ಮಹಾಲಕ್ಷ್ಮೀ ಲೇಔಟ್)
ಮೊಬೈಲ್ ನಂ. 9986341923, 9663375911

ಶ್ರದ್ಧಾಂಜಲಿ ಮತ್ತು ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
ಸಂತೋಷ್ ಕುಮಾರ್ : 9880856233
ಜೆರ್ರಿ : 9731810277 | ರವಿಚಂದ್ರ : 9901641752
ವಿಶಾಲ್ : 9845114560 | ತನ್ವೀರ್ : 9886213331
ಇ–ಮೇಲ್ : dhclassifieds@deccanherald.co.in

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ
Multiple Vacancy
ಕೇಂದ್ರ, ಸರ್ಕಾರದ ಚಾಲ್ತಿಯಲ್ಲಿರುವ ವಿವಿಧ ಯೋಜನೆಗಳಲ್ಲಿ ಜಿಲ್ಲಾ ಮಟ್ಟದ ಪಾಲುದಾರರು ಬೇಕಾಗಿದ್ದಾರೆ. ಅಂದಾಜು 18 ರಿಂದ 23ಲಕ್ಷ ಮಾಸಿಕ ಆದಾಯ, co 9324501915. ಅಲ್ಲದೆ, ಆಫೀಸರ್ಸ್ ಮತ್ತು ವಿವಿಧ ಖಾಲಿ ಹುದ್ದೆಗಳಿಗೆ ನೇಮಕಾತಿ.ಅರ್ಹತೆ: 12 ನೇ ತರಗತಿ ಉತ್ತೀರ್ಣ - ಪದವಿ. 25 - 70 ಸಾವಿರ ಸಂಪಾದನೆ. Co 9739685232 shreesaimega.e@gmail.com

Part-Time Jobs
ಲಾಕ್-ಡೌನ್ ಸಮಯದಲ್ಲಿ ಸುವರ್ಣಾವಕಾಶ ಮನೆಯಿಂದಲೇ ಕುಳಿತು ಫಾರಂನಲ್ಲಿ ಅಂಕಿಗಳು ತುಂಬುವ ಮೂಲಕ,ಗಳಿಸಿ 15,000-25,000/-. ಕೊರಿಯರ್ ಬುಕ್,ಪೆನ್ ಚಾರ್ಜಸ್ ನಾವೇ ಕೊಡುತ್ತೇವೆ.7338376317, 9901929956.

ವ್ಯಾಪಾರ
Business Offers
Finance
★ಸಾಲ ಸೌಲಭ್ಯ★ ವ್ಯಾಪಾರಸಾಲ, ಆಸ್ತಿಸಾಲ, ಅಡಮಾನಸಾಲ, ಶಿಕ್ಷಣಸಾಲ, ಶೇ.6%ರ ಬಡ್ಡಿದರದಲ್ಲಿ, 40%ಸಬ್ಸಿಡಿ, ಎಲ್ಲಾರೀತಿಯ ಸಾಲ ದೊರೆಯುತ್ತದೆ.ಸಂಪರ್ಕಿಸಿ: 09499457849/ 09953286082.ಏಜೆಂಟರು ಸಂಪರ್ಕಿಸಬಹುದು.

ಭವಿಷ್ಯ
Astrology
★||ಸ್ತ್ರೀವಶೀಕರಣ ಸ್ಪೆಷಲಿಸ್ಟ್||★ ಕೇರಳ ಅಘೋರಿ_ನಾಗಸಾಧು, ಕಾಳಿಕಾದೇವಿ ದಿವ್ಯಶಕ್ತಿಯಿಂದ ನಿಮ್ಮ ಸಮಸ್ಯೆಗಳಿಗೆ ಶೀಘ್ರದಲ್ಲಿ ಪರಿಹಾರ. ಇದುನಿಜ ನಂಬಿ_ಕರೆಮಾಡಿ. ಪಂಡಿತ್.ರಾವ್. 9901724082

★ಓಂ||ಶ್ರೀ||ಕೇರಳ ಭಗವತಿದೇವಿ★ ಆರಾಧನೆಯಿಂದ ನಿಮ್ಮಸಮಸ್ಯೆಗಳಾದ ಸತಿಪತಿಕಲಹ, ದಾಂಪತ್ಯ,ಸಂತಾನ, ಸ್ತ್ರೀಪುರುಷ ವಶೀಕರಣ ಇನ್ಯಾವುದೇ ಗುಪ್ತಸಮಸ್ಯೆಗಳಿಗೆ 3ದಿನದಲ್ಲಿ ಪರಿಹಾರ.ಪಂಡಿತ್ ರವಿಶಂಕರ್7022534125

★ನುಡಿದಂತೆ ನಡೆಯುವುದು★ "ವಂಶಪಾರಂಪರಿಕ ಜ್ಯೋತಿಷ್ಯರು," ಆರೋಗ್ಯ, ಸಂತಾನ, ಸ್ತ್ರೀಪುರುಷ ವಶೀಕರಣ, ಗಂಡಹೆಂಡತಿ ಕಲಹ, ನಾಗಸಾಧುಗಳ ಭಾನಮತಿ ಪ್ರಯೋಗದಿಂದ 100%ಪರಿಹಾರ. 7829724990

ವಾಹನ
Four Wheelers Selling
Others
ಅಕ್ಷಯ ತೃತೀಯಕ್ಕೆ ಕೊಳ್ಳಿರಿ ಟಾಟಾ ಏಸ್ ವ್ಯಾಪಾರವನ್ನು ಅಭಿವೃದ್ಧಿ ಪಡಿಸಿಕೊಳ್ಳಿ
ACE Gold ಪೆಟ್ರೋಲ್ ಮೇಲೆ ಆಕರ್ಷಕ ಕೊಡುಗೆಗಳೊಂದಿಗೆ

Ace ಪೆಟ್ರೋಲ್, ಡೀಸಲ್ ಮತ್ತು ಸಿಎನ್‌ಜಿ ಮಾದರಿಯಲ್ಲೂ ಲಭ್ಯ
1.99%* ಬಡ್ಡಿದರ
ಎಕ್ಸ್‌ಚೇಂಜ್ ಬೋನಸ್ ₹15,000/-* ವರೆಗೆ
ಹೆಚ್ಚಿನ ವಿವರಗಳಿಗಾಗಿ ಕರೆಮಾಡಿ
Bangalore -7259784441
Bangalore/Mysore 95389 35533
Tumkur/Davanagere/Chitradurga 98950 23373
Mangalore/Shivamogga/Udupi/Hassan/Chikkamagalur/Karwar 96208 63338
Hubli/Haveri/Gadag/Bellary/Raichur - 9620955858
Bagalkot/Bijapur/Gulbarga/Bidar 80952 02223
Belgaum - 91088 64572
* ಷರತ್ತುಗಳು ಅನ್ವಯಿಸುತ್ತದೆ.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

ಶೇ 79.4ರಷ್ಟು ಪರಿಣಾಮಕಾರಿ • ರಷ್ಯಾದ ರಾಯಭಾರಿ ನಿಕೋಲಾಯ್ ಕುಡಸೇವ್ ಹೇಳಿಕೆ

‘ಸ್ಪುಟ್ನಿಕ್ ಲೈಟ್’ ಶೀಘ್ರ ಬಳಕೆಗೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೋವಿಡ್–19 ಸೋಂಕು ನಿರೋಧಕವಾಗಿ ಒಂದೇ ಡೋಸ್‌ನಲ್ಲಿ ನೀಡಬಹುದಾದ ಲಸಿಕೆಯನ್ನು ಭಾರತದಲ್ಲಿ ಆದಷ್ಟು ಶೀಘ್ರ ಬಿಡುಗಡೆ ಮಾಡಲು ರಷ್ಯಾ ಚಿಂತನೆ ನಡೆಸಿದೆ. ಭಾರತದಲ್ಲಿನ ರಷ್ಯಾದ ರಾಯಭಾರಿ ನಿಕೋಲಾಯ್ ಕುಡಸೇವ್ ಈ ವಿವರ ನೀಡಿದ್ದಾರೆ.

ರಷ್ಯಾದಿಂದ ಒಟ್ಟು 60 ಸಾವಿರ ಡೋಸ್ ‘ಸ್ಪುಟ್ನಿಕ್ ವಿ’ ಲಸಿಕೆಯ ಎರಡನೇ ಬ್ಯಾಚ್ ಭಾನುವಾರ ಹೈದರಾಬಾದ್‌ಗೆ ತಲುಪಿದ ಸಂದರ್ಭದಲ್ಲಿ ಅವರು ಈ ಮಾಹಿತಿ ಪ್ರಕಟಿಸಿದ್ದಾರೆ.

ಅಲ್ಲದೆ, ಭಾರತದಲ್ಲಿ ಇತ್ತೀಚಿಗೆ ಪರಿಚಯಿಸಿರುವ ‘ಸ್ಪುಟ್ನಿಕ್ ವಿ’ ಲಸಿಕೆಯ ಉತ್ಪಾದನೆಯ ಪ್ರಮಾಣವನ್ನು ವಾರ್ಷಿಕ 850 ಮಿಲಿಯನ್ ಡೋಸ್‌ಗಳಿಗೆ ಹಂತ ಹಂತವಾಗಿ ಹೆಚ್ಚಿಸುವ ಗುರಿಯಿದೆ ಎಂದೂ ಇದೇ ಸಂದರ್ಭದಲ್ಲಿ ತಿಳಿಸಿದರು.

‘ಇಂದು ಭಾರತಕ್ಕೆ ಎರಡನೇ ಬ್ಯಾಚ್‌ನಲ್ಲಿ 60 ಸಾವಿರ ಡೋಸ್ ತಲುಪಿದೆ. ಇದರ ಮಾದರಿಯನ್ನು ಕೇಂದ್ರ ಔಷಧ ಪ್ರಯೋಗಾಲಯಕ್ಕೆ ಕಳುಹಿಸಲಿದ್ದೇವೆ’ ಎಂದು ಲಸಿಕೆ ಆಮದು ಮಾಡಿಕೊಂಡಿರುವ ಡಾ. ರೆಡ್ಡೀಸ್ ಲ್ಯಾಬೊರೇಟರಿ ಸಂಸ್ಥೆಯು ಇನ್ನೊಂದೆಡೆ ಟ್ವೀಟ್ ಮಾಡಿದೆ.

‘ರಷ್ಯಾದ ‘ಸ್ಪುಟ್ನಿಕ್ ವಿ’ ಲಸಿಕೆಯನ್ನು ಭಾರತದಲ್ಲಿ ತುರ್ತು ಸಂದರ್ಭದಲ್ಲಿ ಬಳಸಲು ಇತ್ತೀಚಿಗೆ ಪರಿಚಯಿಸಲಾಗಿತ್ತು. ಎರಡನೇ ಬ್ಯಾಚ್ ಕೂಡಾ ಸಕಾಲಕ್ಕೆ ಆಗಮಿಸಿದೆ. ಸ್ಪುಟ್ನಿಕ್ ವಿ ಲಸಿಕೆಯ ಪರಿಣಾಮ ಜಗತ್ತಿಗೆ ತಿಳಿದಿದೆ’ ಎಂದು ಕುಡಸೇವ್ ಟ್ವೀಟ್ ಮಾಡಿದ್ದಾರೆ.

‘ಸ್ಪುಟ್ನಿಕ್ ಲೈಟ್’ ಶೀಘ್ರ: ಅಲ್ಲದೆ, ಭಾರತದಲ್ಲಿ ‘ಸ್ಪುಟ್ನಿಕ್ ವಿ ಲೈಟ್’ ಹೆಸರಿನ ಲಸಿಕೆಯನ್ನು ಶೀಘ್ರವೇ ಪರಿಚಯಿಸಲಾಗುತ್ತದೆ. ಇದು ಸ್ಪುಟ್ನಿಕ್ ವಿ ಲಸಿಕೆಯ (ಆರ್‌ಎಡಿ26) ಭಾಗವಾಗಿದೆ’ ಎಂದು ರಷ್ಯಾದ ಡೈರೆಕ್ಟ್ ಇನ್‌ವೆಸ್ಟ್‌ಮೆಂಟ್ ಫಂಡ್ (ಆರ್‌ಡಿಐಎಫ್) ತಿಳಿಸಿದೆ.

ಅದರ ಪ್ರಕಾರ, ‘ಸ್ಪುಟ್ನಿಕ್ ಲೈಟ್’ ಲಸಿಕೆ ಶೇ 79.4ರಷ್ಟು ಪರಿಣಾಮಕಾರಿ. ರಷ್ಯಾದ ನಾಗರಿಕರಿಗೆ ಒಂದೇ ಡೋಸ್‌ನಲ್ಲಿ ಲಸಿಕೆ ನೀಡಿದ 28 ದಿನದ ನಂತರ ಸಂಗ್ರಹಿಸಿದ ಅಂಕಿ–ಅಂಶ ಆಧರಿಸಿ ಈ ಫಲಿತಾಂಶ ನೀಡಲಾಗಿದೆ. ಲಸಿಕೆ ಪಡೆದವರಿಗೆ ಸಾಮೂಹಿಕ ಲಸಿಕೆ ಅಭಿಯಾನದಲ್ಲಿ ಡಿಸೆಂಬರ್ 5 ಮತ್ತು ಏಪ್ರಿಲ್ 15ರ ನಡುವೆ ಎರಡನೇ ಡೋಸ್ ಲಸಿಕೆ ನೀಡಲಾಗಿಲ್ಲ’ ಎಂದು ಆರ್‌ಡಿಐಎಫ್ ವಿವರ ನೀಡಿದೆ.

ವಿಶ್ವದಾದ್ಯಂತ ಸ್ಪುಟ್ನಿಕ್ ವಿ ಲಸಿಕೆಯನ್ನು ರಷ್ಯಾದ ಆರ್‌ಡಿಐಎಫ್ ಪ್ರಚುರಪಡಿಸುತ್ತಿದೆ. ಭಾರತದಲ್ಲಿ ಪ್ರಯೋಗಾಲಯ ಪರೀಕ್ಷೆಗೆ ಒಳಪಡಿಸಲು ಹಾಗೂ ಲಸಿಕೆಯನ್ನು ಹಂಚಿಕೆ ಮಾಡಲು ಡಾ. ರೆಡ್ಡೀಸ್ ಲ್ಯಾಬೊರೇಟರಿ ಲಿಮಿಟೆಡ್ ಜೊತೆಗೆ ಸೆಪ್ಟೆಂಬರ್ 2020ರಲ್ಲಿ ಆರ್‌ಡಿಐಎಫ್ ಒಪ್ಪಂದ ಮಾಡಿಕೊಂಡಿದೆ. ಭಾರತಕ್ಕೆ 10 ಕೋಟಿ ಡೋಸ್ ಲಸಿಕೆ ಪೂರೈಸಲು ಒಪ್ಪಿದೆ.

ಸ್ಪುಟ್ನಿಕ್ ವಿ ಲಸಿಕೆಗೆ ಭಾರತ ಪ್ರಮುಖ ಉತ್ಪಾದನಾ ನೆಲೆ ಎಂದು ರಷ್ಯಾ ಬಲವಾಗಿ ನಂಬಿದೆ. ದೇಶದ ಪ್ರಮುಖ ಔಷಧ ಉತ್ಪಾದಕ ಕಂಪನಿಗಳು ಅಂದರೆ ಗ್ಲ್ಯಾಂಡ್ ಫಾರ್ಮಾ, ಹೆಟೆರೊ ಬಿಯೊಫಾರ್ಮಾ, ಪನೇಷಿಯ ಬಯೊಟೆಕ್, ಸ್ಟೆಲಿಸ್ ಬಯೊಫಾರ್ಮಾ ಮತ್ತು ವಿರ್ಚೌ ಬಯೊಟೆಕ್ ಜೊತೆಗೆ ಒಪ್ಪಂದ ಮಾಡಿಕೊಳ್ಳಲಾಗಿದೆ ಎಂದು ಆರ್‌ಡಿಐಎಫ್ ಇತ್ತೀಚೆಗೆ ಪ್ರಕಟಿಸಿತ್ತು. ದೇಶದಲ್ಲಿ ಉತ್ಪಾದನಾ ಸಾಮರ್ಥ್ಯವನ್ನು ಹಂತ ಹಂತವಾಗಿ ವಾರ್ಷಿಕ 850 ಮಿಲಿಯನ್ ಡೋಸ್‌ಗೆ ಹೆಚ್ಚಿಸುವ ಗುರಿಯನ್ನು ರಷ್ಯಾದ ಆರ್‌ಡಿಐಎಫ್ ಹೊಂದಿದೆ.

ರಷ್ಯಾದಲ್ಲಿ ‘ಸ್ಪುಟ್ನಿಕ್ ವಿ’ ಲಸಿಕೆಯನ್ನು ಕೋವಿಡ್ ನಿರೋಧಕವಾಗಿ ಯಶಸ್ವಿಯಾಗಿ ಬಳಕೆ ಮಾಡಲಾಗಿದೆ. ಈ ಲಸಿಕೆಯು ಕೊರೊನಾದ ರೂಪಾಂತರ ಸೋಂಕು ತಡೆಗೂ ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸುತ್ತಿದೆ ಎಂದು ಕುಡಸೇವ್ ಅವರು ಟ್ವೀಟ್ ಮಾಡಿದ್ದಾರೆ.

ರಷ್ಯಾ ಅಭಿವೃದ್ಧಿಪಡಿಸಿರುವ ಸ್ಪುಟ್ನಿಕ್ ವಿ ಲಸಿಕೆಯನ್ನು ಭಾರತದಲ್ಲಿ ತುರ್ತು ಸಂದರ್ಭದಲ್ಲಿ ಸಾರ್ವಜನಿಕ ಬಳಕೆಗೆ ಏಪ್ರಿಲ್ 12ರಂದು ಅನುಮೋದಿಸಲಾಗಿತ್ತು. ದೇಶದಲ್ಲಿ ಸೋಂಕು ಪ್ರಕರಣಗಳು ತೀವ್ರಗತಿಯಲ್ಲಿ ಏರಿದಂತೆಯೇ ಈ ತೀರ್ಮಾನ ಮಾಡಲಾಗಿತ್ತು.

ಸಕ್ರಿಯ ಪ್ರಕರಣಗಳ ಇಳಿಕೆ

ನವದೆಹಲಿ (ಪಿಟಿಐ): ದೇಶದಲ್ಲಿ ಕೋವಿಡ್ ಸಕ್ರಿಯ ಪ್ರಕರಣಗಳ ಪ್ರಮಾಣ ಇಳಿಕೆಯಾಗಿದ್ದು, ಸದ್ಯ ಒಟ್ಟು 36,18,458 ಪ್ರಕರಣಗಳಿವೆ. ಇದು ಒಟ್ಟು ಸೋಂಕು ಪ್ರಕರಣಗಳ ಶೇ 14.66ರಷ್ಟಾಗಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ.

ಕರ್ನಾಟಕವು ಸೇರಿದಂತೆ 10 ರಾಜ್ಯಗಳಲ್ಲಿ ಶೇ 74.69ರಷ್ಟು ಸಕ್ರಿಯ ಪ್ರಕರಣಗಳಿವೆ. ಇತರೆ ರಾಜ್ಯಗಳೆಂದರೆ ಮಹಾರಾಷ್ಟ್ರ, ಕೇರಳ, ರಾಜಸ್ಥಾನ, ತಮಿಳುನಾಡು, ಆಂಧ್ರಪ್ರದೇಶ, ಉತ್ತರಪ್ರದೇಶ, ಪಶ್ಚಿಮ ಬಂಗಾಳ, ಗುಜರಾತ್, ಛತ್ತೀಸಗಡ.

ಸೋಂಕು ದೃಢ ಪ್ರಕರಣಗಳ ಪ್ರಮಾಣವೂ ಇಳಿಕೆಯಾಗಿದೆ. ಇದು ಮೇ 3ರಂದು ಶೇ 24.47ರಷ್ಟಿದ್ದರೆ, ಮೇ 16ಕ್ಕೆ ಶೇ 16.98ಕ್ಕೆ ಕುಸಿದಿದೆ. ಕಳೆದ 24 ಗಂಟೆಗಳಲ್ಲಿ 3.62 ಲಕ್ಷ ಮಂದಿ ಗುಣಮುಖರಾಗಿದ್ದು, ಹೊಸ ಪ್ರಕರಣಗಳಿಗಿಂತ ಹೆಚ್ಚಿದೆ. ಚೇತರಿಸಿಕೊಂಡವರಲ್ಲಿ ಶೇ 70.94 ಮಂದಿ, ಗರಿಷ್ಠ ಪ್ರಕರಣಗಳಿರುವ 10 ರಾಜ್ಯಗಳಲ್ಲಿಯೇ ಇದ್ದಾರೆ.

ದೆಹಲಿಯಲ್ಲಿ ಲಾಕ್‌ಡೌನ್ ವಿಸ್ತರಣೆ

ನವದೆಹಲಿ: ‘ದೆಹಲಿಯಲ್ಲಿ ಕೋವಿಡ್ ಪ್ರಸರಣವನ್ನು ತಡೆಯಲು ಹೇರಲಾಗಿರುವ ಲಾಕ್‌ಡೌನ್ ಅನ್ನು ಒಂದು ವಾರದವರೆಗೆ ವಿಸ್ತರಿಸಲಾಗಿದೆ’ ಎಂದು ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು ಭಾನುವಾರ ತಿಳಿಸಿದರು.

ಸೋಮವಾರ ಬೆಳಿಗ್ಗೆ 5 ಗಂಟೆಗೆ ಕೊನೆಗೊಳ್ಳಬೇಕಾಗಿದ್ದ ಲಾಕ್‌ಡೌನ್ ಅನ್ನು ಮೇ 24ರ ಬೆಳಿಗ್ಗೆವರೆಗೆ ವಿಸ್ತರಿಸಲಾಗಿದೆ. ಏಪ್ರಿಲ್ 19ರಂದು ವಿಧಿಸಲಾದ ಲಾಕ್‌ಡೌನ್ ಅನ್ನು ನಾಲ್ಕನೇ ಬಾರಿ ವಿಸ್ತರಿಸಲಾಗಿದೆ.

ಕೋವಿಶೀಲ್ಡ್ 2ನೇ ಡೋಸ್: ನೋಂದಣಿ ರದ್ದು ಇಲ್ಲ

ನವದೆಹಲಿ: ಕೋವಿಶೀಲ್ಡ್ ಲಸಿಕೆಯ ಎರಡನೇ ಡೋಸ್ ಪಡೆಯಲು ಆನ್‌ಲೈನ್ ಮೂಲಕ ಮುಂಚಿತವಾಗಿಯೇ ಮಾಡಿಸಿಕೊಂಡಿರುವ ನೋಂದಣಿಯನ್ನು ರದ್ದುಪಡಿಸುವುದಿಲ್ಲ ಎಂದು ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ.

‘ಕೋ–ವಿನ್’ ವೆಬ್‌ಸೈಟ್ ಮೂಲಕ ಈಗಾಗಲೇ ನೋಂದಣಿ ಮಾಡಿದ್ದರೆ ಅದನ್ನೇ ಮುಂದುವರಿಸಲಾಗುವುದು. ಆದರೆ, ಫಲಾನುಭವಿಗಳು ಮೊದಲ ಡೋಸ್ ಪಡೆದ ದಿನದಿಂದ 84 ದಿನಗಳ ನಂತರದ ದಿನಾಂಕಕ್ಕೆ ಮರುನಿಗದಿಪಡಿಸಿಕೊಳ್ಳಬೇಕು ಎಂದು ಸೂಚಿಸಿದೆ.

‘ಕೋ–ವಿನ್’ ಡಿಜಿಟಲ್ ಪೋರ್ಟಲ್‌ನಲ್ಲಿ ಈಗಾಗಲೇ ಕೆಲವು ಬದಲಾವಣೆಗಳನ್ನು ಮಾಡಲಾಗಿದೆ. ಇದರಿಂದಾಗಿ, ಮೊದಲ ಡೋಸ್ ಪಡೆದ ವ್ಯಕ್ತಿಯು 84 ದಿನಗಳ ಒಳಗೆ ನೋಂದಣಿ ಮಾಡಿಕೊಳ್ಳಲು ಇನ್ನು ಮುಂದೆ ಸಾಧ್ಯವಾಗುವುದಿಲ್ಲ ಎಂದು ತಿಳಿಸಿದೆ.

ಸೋಂಕು ಹರಡುವ ಅಪಾಯ

ಒಂದನೇ ಪುಟದಿಂದ...

ಪರಾಕಾಷ್ಠೆ: ‘ಕೆ.ಆರ್.ಆಸ್ಪತ್ರೆಯಲ್ಲಿನ ಅವ್ಯವಸ್ಥೆ ಬಗ್ಗೆ ಸಾಕಷ್ಟು ವಿಡಿಯೊಗಳು ವೈರಲ್ ಆಗಿವೆ. ಸಂಸದರೇ ಸ್ವತಃ ಭೇಟಿ ನೀಡಿ ವೀಕ್ಷಿಸಿದ್ದಾರೆ. ಉಸ್ತುವಾರಿ ಸಚಿವರ ಗಮನಕ್ಕೆ ತಂದರೂ ಸ್ವಲ್ಪವೂ ಬದಲಾವಣೆಯಾಗಿಲ್ಲ. ದಿನೇ ದಿನೇ ಅವ್ಯವಸ್ಥೆ ಪರಾಕಾಷ್ಠೆಗೆ ತಲುಪುತ್ತಿದೆ. ಸೋಂಕು ಹರಡುವ ಕಾರ್ಖಾನೆಯಾಗಿ ಆಸ್ಪತ್ರೆ ಮಾರ್ಪಟ್ಟಿದೆ’ ಎಂದು ಬಿಜೆಪಿ ಮುಖಂಡ ಕೇಬಲ್ ಮಹೇಶ್ ತಿಳಿಸಿದರು.

‘ಕೆ.ಆರ್.ಆಸ್ಪತ್ರೆ ಚಿಕಿತ್ಸಾ ಕೇಂದ್ರವಾಗಿ ಉಳಿದಿಲ್ಲ. ಅಸಮರ್ಥ ಆಡಳಿತದಿಂದ ಕೊರೊನಾ ವೈರಸ್ ಹರಡುವಿಕೆಯ ತಾಣವಾಗಿದೆ. ಜಿಲ್ಲಾಡಳಿತದ ವೈಫಲ್ಯ ಇದು’ ಎನ್ನುತ್ತಾರೆ ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್.

560 ಸೋಂಕಿತರು: ಸಿಬ್ಬಂದಿ ಕೊರತೆ ‘ಕೆ.ಆರ್.ಆಸ್ಪತ್ರೆಯಲ್ಲಿ 560 ಸೋಂಕಿತರು ಚಿಕಿತ್ಸೆ ಪಡೆಯುತ್ತಿದ್ದಾರೆ. 75 ಜನರು ಐಸಿಯುನಲ್ಲಿದ್ದಾರೆ. ಒಬ್ಬರ ಆರೈಕೆಗೆ ಇಬ್ಬರು ಬೇಕಿದೆ. ಐಸಿಯುಗೆ ಮೂರು ಪಾಳಿಗೆ 450 ಸಿಬ್ಬಂದಿ ಬೇಕು. ನಮ್ಮಲ್ಲಿರುವುದು 250 ಜನರು ಮಾತ್ರ. ಇವರಲ್ಲೇ ನಿತ್ಯವೂ 50ಕ್ಕೂ ಹೆಚ್ಚು ಹೊರಗುತ್ತಿಗೆ ನೌಕರರು ಗೈರಾಗುತ್ತಾರೆ. ದಿಕ್ಕು ತೋಚದ ಸ್ಥಿತಿ ನಮ್ಮದಾಗಿದೆ’ ಎಂದು ಆಸ್ಪತ್ರೆಯ ಸ್ಥಾನಿಕ ವೈದ್ಯಾಧಿಕಾರಿ ನಂಜುಂಡಸ್ವಾಮಿ ತಿಳಿಸಿದರು.

‘ಶುಶ್ರೂಷಕರು, ಡಿ ಗ್ರೂಪ್ ಸಿಬ್ಬಂದಿಯ ಕೊರತೆ ಸಾಕಷ್ಟಿದೆ. ರೋಗಿಗಳ ಸಂಬಂಧಿಕರಿಂದ ಹಲ್ಲೆಯೂ ನಡೆದಿದೆ. ಹೊರಗೆ ಹೋಗಿ ಎಂದರೇ ಜಗಳ ಮಾಡುತ್ತಾರೆ. ಕೆಲಸ ಬಿಟ್ಟು ಪೊಲೀಸ್ ಠಾಣೆಗೆ ಅಲೆಯೋದಾಗಿದೆ’ ಎಂದು ಅಸಹಾಯಕತೆ ವ್ಯಕ್ತಪಡಿಸಿದರು.

ಎಎಂಯು: 38 ಬೋಧಕರ ಸಾವು

ಅಲೀಗಡ: ಕಳೆದ ಒಂದು ತಿಂಗಳಲ್ಲಿ ಅಲೀಗಡ ಮುಸ್ಲಿಂ ವಿಶ್ವವಿದ್ಯಾಲಯದಲ್ಲಿ ಸೇವೆ ಸಲ್ಲಿಸುತ್ತಿರುವ 21 ಮಂದಿ ಸೇರಿದಂತೆ ಒಟ್ಟು 38 ಬೋಧಕರು ಕೋವಿಡ್–19 ಲಕ್ಷಣಗಳಿಂದ ಮೃತಪಟ್ಟಿದ್ದು, ಹೊಸ ರೂಪಾಂತರಿ ತಳಿ ವ್ಯಾಪಿಸಿರುವ ಸಾಧ್ಯತೆಗಳ ಕುರಿತು ಅನುಮಾನ ವ್ಯಕ್ತವಾಗಿತ್ತು.

ಆದರೆ, ಈ ಬಗ್ಗೆ ಸ್ಪಷ್ಟನೆ ನೀಡಿರುವ ಅಧಿಕಾರಿಗಳು, ಅಲೀಗಡ ಮುಸ್ಲಿಂ ವಿ.ವಿಯಲ್ಲಿ ಕೋವಿಡ್‌ನಿಂದ ಮೃತಪಟ್ಟವರಲ್ಲಿ ಯಾವುದೇ ಹೊಸ ರೂಪಾಂತರ ವೈರಸ್ ಪತ್ತೆಯಾಗಿಲ್ಲ ಎಂದಿದ್ದಾರೆ.

ಸಾವಿಗೆ ಕೊರೊನಾ ವೈರಸ್‌ನ ಹೊಸ ರೂಪಾಂತರಿ ತಳಿ ಕಾರಣವೇ ಎಂಬುದನ್ನು ಪತ್ತೆ ಹಚ್ಚಲು ಎಎಂಯು ಕ್ಯಾಂಪಸ್ ಮತ್ತು ಸಮೀಪದ ಪ್ರದೇಶದ ಜನರಿಂದ ಸಂಗ್ರಹಿಸಿದ ಸ್ಯಾಂಪಲ್ ಅನ್ನು ನವದೆಹಲಿಯ ಸಿಎಸ್‌ಐಆರ್ ಇನ್‌ಸ್ಟಿಟ್ಯೂಟ್ ಆಫ್ ಜಿನೊಮಿಕ್ಸ್ ಅಂಡ್ ಇಂಟಗ್ರೇಟಿವ್ ಬಯಾಲಜಿ ಸಂಸ್ಥೆಗೆ ಕಳುಹಿಸಲಾಗಿತ್ತು.

‘ರೂಪಾಂತರ ವೈರಸ್ ವಿರುದ್ಧ ಕೊವ್ಯಾಕ್ಸಿನ್ ಪರಿಣಾಮಕಾರಿ’

ನವದೆಹಲಿ(ಪಿಟಿಐ): ಭಾರತ ಮತ್ತು ಬ್ರಿಟನ್‌ನಲ್ಲಿ ಪತ್ತೆಯಾದ ಕೊರೊನಾ ವೈರಸ್ ರೂಪಾಂತರ ತಳಿ ವಿರುದ್ಧ ‘ಕೊವ್ಯಾಕ್ಸಿನ್’ ಲಸಿಕೆ ಪರಿಣಾಮಕಾರಿಯಾಗಿದೆ ಎಂದು ಭಾರತ್ ಬಯೊಟೆಕ್ ಪ್ರತಿಪಾದಿಸಿದೆ.

ಭಾರತ ಮತ್ತು ಬ್ರಿಟನ್‌ನಲ್ಲಿ ಮೊದಲು ಗುರುತಿಸಲಾದ ಬಿ.1.617 ಮತ್ತು ಬಿ.1.1.7 ರೂಪಾಂತರ ತಳಿಗಳನ್ನು ನಿಷ್ಕ್ರಿಯಗೊಳಿಸುವ ಸಾಮರ್ಥ್ಯವನ್ನು ಈ ಲಸಿಕೆ ಹೊಂದಿದೆ ಎಂದು ಅದು ತಿಳಿಸಿದೆ.

ರಾಷ್ಟ್ರೀಯ ವೈರಾಣು ಸಂಸ್ಥೆ ಮತ್ತು ಭಾರತೀಯ ವೈದ್ಯಕೀಯ ಸಂಶೋಧನಾ ಪರಿಷತ್ (ಐಸಿಎಂಆರ್) ಜಂಟಿಯಾಗಿ ಈ ಬಗ್ಗೆ ಅಧ್ಯಯನ ಕೈಗೊಂಡಿದ್ದವು. ಈ ಅಧ್ಯಯನದ ವರದಿಯ ಅಂಶಗಳನ್ನು ಭಾರತ್ ಬಯೊಟೆಕ್ ಉಲ್ಲೇಖಿಸಿದೆ.

‘ಕೊವ್ಯಾಕ್ಸಿನ್‌ಗೆ ಮತ್ತೊಮ್ಮೆ ಅಂತರರಾಷ್ಟ್ರೀಯ ಮಾನ್ಯತೆ ದೊರೆತಿದೆ. ಹೊಸ ರೂಪಾಂತರ ತಳಿ ವಿರುದ್ಧ ರಕ್ಷಣೆ ನೀಡುತ್ತದೆ ಎನ್ನುವುದು ವೈಜ್ಞಾನಿಕ ಸಂಶೋಧನೆಯಿಂದ ಮಾಹಿತಿ ಲಭ್ಯವಾಗಿದೆ’ ಎಂದು ಭಾರತ್ ಬಯೊಟೆಕ್ ಸಹ ಸಂಸ್ಥಾಪಕ ಮತ್ತು ಜಂಟಿ ವ್ಯವಸ್ಥಾಪಕ ನಿರ್ದೇಶಕ ಸುಚಿತ್ರಾ ಎಲ್ಲಾ ಟ್ವೀಟ್ ಮಾಡಿದ್ದಾರೆ.

‘3 ದಿನಗಳಲ್ಲಿ ರಾಜ್ಯಗಳಿಗೆ 51 ಲಕ್ಷ ಡೋಸ್ ವಿತರಣೆ’

ನವದೆಹಲಿ (ಪಿಟಿಐ): ವಿವಿಧ ರಾಜ್ಯಗಳಿಗೆ ಮೂರು ದಿನಗಳಲ್ಲಿ ಕೋವಿಡ್ ಲಸಿಕೆಯ 51 ಲಕ್ಷ ಡೋಸ್‌ಗಳನ್ನು ಹಂಚಿಕೆ ಮಾಡಲಾಗುವುದು ಎಂದು ಕೇಂದ್ರ ಆರೋಗ್ಯ ಸಚಿವಾಲಯ ಭಾನುವಾರ ತಿಳಿಸಿದೆ.

ಕೋವಿಡ್ ಲಸಿಕೆಯ 50,95,640 ಡೋಸ್‌ಗಳು ಶೀಘ್ರವೇ ಕೈಸೇರಲಿವೆ. ಇವುಗಳನ್ನು ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಿಗೆ ಪೂರೈಕೆ ಮಾಡಲಾಗುತ್ತದೆ. ಇದುವರೆಗೆ ಕೇಂದ್ರ ಸರ್ಕಾರವು ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಿಗೆ 20 ಕೋಟಿಗೂ ಅಧಿಕ ಡೋಸ್‌ಗಳಷ್ಟು ಲಸಿಕೆಯನ್ನು ಉಚಿತವಾಗಿ ನೀಡಿದೆ ಎಂದೂ ಸಚಿವಾಲಯ ತಿಳಿಸಿದೆ.

ಸಿ.ಎಂ.ಗಳೊಂದಿಗೆ ಮೋದಿ ಮಾತುಕತೆ

ನವದೆಹಲಿ (ಪಿಟಿಐ): ಉತ್ತರ ಪ್ರದೇಶ, ರಾಜಸ್ಥಾನ, ಛತ್ತೀಸಗಡ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶ ಪುದುಚೇರಿ ಮುಖ್ಯಮಂತ್ರಿಗಳೊಂದಿಗೆ ಪ್ರಧಾನಿ ನರೇಂದ್ರ ಮೋದಿ ಅವರು ಭಾನುವಾರ ಮಾತುಕತೆ ನಡೆಸಿ, ಆಯಾ ರಾಜ್ಯಗಳಲ್ಲಿನ ಕೋವಿಡ್–19 ಪರಿಸ್ಥಿತಿ ಕುರಿತು ಮಾಹಿತಿ ಪಡೆದರು.

ದೇಶದಲ್ಲಿ ಕೋವಿಡ್ ಪ್ರಕರಣಗಳು ಹೆಚ್ಚುತ್ತಿರುವ ಕಾರಣ, ವಿವಿಧ ರಾಜ್ಯಗಳ ಮುಖ್ಯಮಂತ್ರಿಗಳೊಂದಿಗೆ ಪ್ರಧಾನಿ ಮಾತುಕತೆ ನಡೆಸುತ್ತಿದ್ದು, ಕೋವಿಡ್ ನಿಯಂತ್ರಣಕ್ಕೆ ಕೈಗೊಂಡ ಕ್ರಮಗಳ ಕುರಿತು ಮಾಹಿತಿ ಪಡೆಯುತ್ತಿದ್ದಾರೆ.

ಭಾನುವಾರ ಬೆಳಿಗ್ಗೆ 8ಕ್ಕೆ ಕೊನೆಗೊಂಡಂತೆ 24 ಗಂಟೆಗಳಲ್ಲಿ ದೇಶದಲ್ಲಿ ಹೊಸದಾಗಿ 3.11 ಲಕ್ಷ ಪ್ರಕರಣಗಳು ವರದಿಯಾಗಿವೆ. 25 ದಿನಗಳ ನಂತರ ಇದೇ ಮೊದಲ ಬಾರಿಗೆ ದೇಶದಲ್ಲಿ ಒಂದು ದಿನದಲ್ಲಿ ಅತಿ ಕಡಿಮೆ ಪ್ರಕರಣಗಳು ವರದಿಯಾದಂತಾಗಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ.

ಹಳ್ಳಿಗಳಲ್ಲಿ ಆರೈಕೆ ಕೇಂದ್ರ ಸ್ಥಾಪಿಸಲು ಸೂಚನೆ

ಒಂದನೇ ಪುಟದಿಂದ...

ಸೋಂಕಿತರ ಪ್ರಾಥಮಿಕ ಸಂಪರ್ಕದಲ್ಲಿದ್ದವರನ್ನು ಸಾಧ್ಯವಾದಷ್ಟು ತ್ವರಿತಗತಿಯಲ್ಲಿ ಪತ್ತೆ ಮಾಡಬೇಕು. ಕೋವಿಡ್ ದೃಢಪಟ್ಟವರಲ್ಲಿ ಆಮ್ಲಜನಕ ಮಟ್ಟದ ಮೇಲೆ ನಿಗಾ ಇಡುವುದು ಮುಖ್ಯ. ಹೀಗಾಗಿ ಪ್ರತಿಯೊಂದು ಗ್ರಾಮಕ್ಕೆ ಸಾಕಷ್ಟು ಸಂಖ್ಯೆಯ ಪಲ್ಸ್ ಆಕ್ಸಿಮೀಟರ್, ಥರ್ಮಾಮೀಟರ್‌ಗಳನ್ನು ಒದಗಿಸುವುದು ಅಗತ್ಯ ಎಂದು ಮಾರ್ಗಸೂಚಿಯಲ್ಲಿ ತಿಳಿಸಲಾಗಿದೆ.

ಕೋವಿಡ್–19 ದೃಢಪಟ್ಟ ಸಂದರ್ಭದಲ್ಲಿ ಪಲ್ಸ್ ಆಕ್ಸಿಮೀಟರ್‌ಗಳು ಮತ್ತು ಥರ್ಮಾಮೀಟರ್‌ಗಳನ್ನು ಖರೀದಿಸಲು ಸಾಲ ನೀಡುವ ವ್ಯವಸ್ಥೆಯನ್ನು ಕಲ್ಪಿಸಬೇಕು. ಆಶಾ ಮತ್ತು ಅಂಗನವಾಡಿ ಕಾರ್ಯಕರ್ತರು ಹಾಗೂ ಗ್ರಾಮ ಮಟ್ಟದ ಸ್ವಯಂಸೇವಕರು ಈ ನಿಟ್ಟಿನಲ್ಲಿ ನೆರವಾಗಬೇಕು ಎಂದು ಸಲಹೆ ನೀಡಲಾಗಿದೆ.

ಪ್ರತಿಯೊಂದು ಗ್ರಾಮಗಳಲ್ಲಿ ತೀವ್ರ ಉಸಿರಾಟದ ತೊಂದರೆಗೆ ಒಳಗಾಗುತ್ತಿರುವವರ ಬಗ್ಗೆ ನಿರಂತರವಾಗಿ ಕಟ್ಟುನಿಟ್ಟಾಗಿ ಸಮೀಕ್ಷೆ ಕೈಗೊಳ್ಳಬೇಕು ಎಂದು ಸೂಚಿಸಲಾಗಿದೆ. ಶೇಕಡ 80ರಿಂದ 85ರಷ್ಟು ಕೋವಿಡ್–19 ಪ್ರಕರಣಗಳಲ್ಲಿ ಸೋಂಕಿನ ಲಕ್ಷಣಗಳು ಕಾಣಿಸಿಕೊಳ್ಳುವುದಿಲ್ಲ. ಇಲ್ಲವೇ ಸೌಮ್ಯ ಲಕ್ಷಣಗಳಿರುತ್ತವೆ. ಇಂತಹ ರೋಗಿಗಳಿಗೆ ಆಸ್ಪತ್ರೆ ಅಗತ್ಯವಿಲ್ಲ. ಇವರಿಗೆ ಮನೆಯಲ್ಲಿ ಅಥವಾ ಕೋವಿಡ್ ಆರೈಕೆ ಕೇಂದ್ರಗಳಲ್ಲಿ ಚಿಕಿತ್ಸೆ ನೀಡಬಹುದಾಗಿದೆ ಎಂದೂ ಮಾರ್ಗಸೂಚಿಯಲ್ಲಿ ಉಲ್ಲೇಖಿಸಲಾಗಿದೆ.

ಮಾರ್ಗಸೂಚಿಯಲ್ಲಿನ ನಿರ್ದೇಶನಗಳು

- ಗ್ರಾಮೀಣ ಪ್ರದೇಶ, ನಗರದ ಹೊರವಲಯದ ಪ್ರದೇಶಗಳು ಮತ್ತು ಬುಡಕಟ್ಟು ಪ್ರದೇಶಗಳಲ್ಲಿ ಆರಂಭಿಸುವ ಕೋವಿಡ್ ಆರೈಕೆ ಕೇಂದ್ರಗಳು ಸಮೀಪದ ಪ್ರಾಥಮಿಕ ಆರೋಗ್ಯ ಕೇಂದ್ರದ ಉಸ್ತುವಾರಿಯಲ್ಲಿರಬೇಕು.
- ಆರೈಕೆ ಕೇಂದ್ರಗಳನ್ನು ಶಾಲೆಗಳು, ಸಮುದಾಯ ಭವನಗಳು, ಕಲ್ಯಾಣ ಮಂಟಪಗಳು, ಪಂಚಾಯಿತಿ ಕಟ್ಟಡಗಳು ಅಥವಾ ಶಾಲಾ ಮೈದಾನಗಳಲ್ಲೂ ಸ್ಥಾಪಿಸಬಹುದು
- ಹೋಂ ಐಸೋಲೇಷನ್ ಕಿಟ್‌ಗಳನ್ನು ಎಲ್ಲ ರೋಗಿಗಳಿಗೆ ಒದಗಿಸಬೇಕು. ವೈದ್ಯರು ಸೂಚಿಸುವ ಔಷಧಗಳು ಈ ಕಿಟ್‌ನಲ್ಲಿರಬೇಕು

ಎಲ್ಲ ದಿನವೂ ನ್ಯಾಯಬೆಲೆ ಅಂಗಡಿ ತೆರೆಯಿರಿ: ಕೇಂದ್ರ

ನವದೆಹಲಿ: ವಾರದ ಎಲ್ಲ ದಿನಗಳಲ್ಲೂ ನ್ಯಾಯಬೆಲೆ ಅಂಗಡಿಗಳನ್ನು ತೆರೆಯಬೇಕು ಮತ್ತು ಹೆಚ್ಚು ಅವಧಿ ಕಾರ್ಯನಿರ್ವಹಿಸುವಂತೆ ಕ್ರಮಕೈಗೊಳ್ಳಬೇಕು ಎಂದು ಕೇಂದ್ರ ಸರ್ಕಾರವು ಎಲ್ಲ ರಾಜ್ಯ ಸರ್ಕಾರಗಳಿಗೆ ಭಾನುವಾರ ಸೂಚಿಸಿದೆ.

ಬಡವರಿಗೆ ಸಬ್ಸಿಡಿ ರೂಪದಲ್ಲಿ ಮತ್ತು ಉಚಿತವಾಗಿ ಆಹಾರ ಧಾನ್ಯಗಳು ಸಕಾಲದಲ್ಲಿ ಮತ್ತು ಸುರಕ್ಷಿತವಾಗಿ ವಿತರಿಸಲು ಈ ಕ್ರಮದಿಂದ ಅನುಕೂಲವಾಗಲಿದೆ ಎಂದು ಕೇಂದ್ರ ಆಹಾರ ಸಚಿವಾಲಯವು ತಿಳಿಸಿದೆ.

ಹಲವು ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಪ್ರಸ್ತುತ ಜಾರಿಗೊಳಿಸಿರುವ ಲಾಕ್‌ಡೌನ್‌ನಿಂದ ನ್ಯಾಯ ಬೆಲೆ ಅಂಗಡಿಗಳ ಕಾರ್ಯನಿರ್ವಹಣೆ ಅವಧಿಯನ್ನು ಕಡಿಮೆ ಮಾಡಲಾಗಿದೆ. ಇದರಿಂದ, ಫಲಾನುಭವಿಗಳಿಗೆ ಸಕಾಲಕ್ಕೆ ಆಹಾರ ಧಾನ್ಯಗಳು ದೊರೆಯುತ್ತಿಲ್ಲ ಎಂದು ಆಹಾರ ಸಚಿವಾಲಯಕ್ಕೆ ಹಲವು ಸಂಘಟನೆಗಳು ದೂರು ಸಲ್ಲಿಸಿದ್ದವು.

ಗಾಜಾ ಮೇಲೆ ವಾಯು ದಾಳಿ: 43 ಸಾವು

ಗಾಜಾ ನಗರ(ಎಪಿ, ಎಎಫ್‌ಪಿ): ಗಾಜಾ ನಗರದ ಮೇಲೆ ಭಾನುವಾರ ಇಸ್ರೇಲ್ ನಡೆಸಿದ ವೈಮಾನಿಕ ದಾಳಿಯಲ್ಲಿ ಹಲವು ಕಟ್ಟಡಗಳು ನೆಲಸಮಗೊಂಡಿದ್ದು, ಕನಿಷ್ಠ 43 ಪ್ಯಾಲೆಸ್ಟೀನಿಯರು ಸಾವಿಗೀಡಾಗಿದ್ದಾರೆ.

ವೈಮಾನಿಕ ದಾಳಿಯಲ್ಲಿ ನಾಶವಾದ ಕಟ್ಟಡದ ಅವಶೇಷಗಳ ಅಡಿಯಲ್ಲಿ ಸಿಲುಕಿದವರನ್ನು ರಕ್ಷಿಸುವ ಕಾರ್ಯದಲ್ಲಿ ತೊಡಗಿರುವ ಸಿಬ್ಬಂದಿ —ಎಎಫ್‌ಪಿ ಚಿತ್ರ

ಸಾವಿಗೀಡಾದವರಲ್ಲಿ 16 ಮಹಿಳೆಯರು ಮತ್ತು 10 ಮಕ್ಕಳು ಸೇರಿದ್ದಾರೆ. ದಾಳಿಯಲ್ಲಿ ಕನಿಷ್ಠ 50ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ. ಕಟ್ಟಡಗಳ ಅವಶೇಷಗಳ ಅಡಿಯಲ್ಲಿ ಸಿಲುಕಿದವರನ್ನು ರಕ್ಷಿಸುವ ಕಾರ್ಯ ಕೈಗೊಳ್ಳಲಾಗಿದೆ ಎಂದು ಗಾಜಾ ಆರೋಗ್ಯ ಸಚಿವಾಲಯ ತಿಳಿಸಿದೆ.

ಗಾಜಾದ ಹಮಸ್ ಸಂಘಟನೆಯ ಹಿರಿಯ ನಾಯಕ ಯೆಹಿಯೆಹ್ ಸಿನ್ವಾರ್ ಮತ್ತು ಆತನ ಸಹೋದರ ಮುಹಮ್ಮದ್ ಮನೆಗಳ ಮೇಲೆ ಪ್ರತ್ಯೇಕ ದಾಳಿ ನಡೆಸುವ ಮೂಲಕ ನಾಶಪಡಿಸಲಾಗಿದೆ ಎಂದು ಇಸ್ರೇಲ್ ಸೇನೆಯ ವಕ್ತಾರ ಬ್ರಿಗೇಡಿಯರ್ ಜನರಲ್ ಹಿದಾಯಿ ಜಿಲ್ಬರ್‌ಮನ್ ಭಾನುವಾರ ಹೇಳಿದ್ದಾರೆ.

ಇಸ್ರೇಲ್ ಮತ್ತು ಹಮಸ್ ಉಗ್ರಗಾಮಿ ಸಂಘಟನೆ ನಡುವೆ ಕಳೆದ ವಾರ ಆರಂಭವಾದ ಘರ್ಷಣೆಯ ಬಳಿಕ ಇದು ಅತಿ ದೊಡ್ಡ ದಾಳಿಯಾಗಿದೆ.

‘ನಾಗರಿಕರನ್ನು ಗುರಿಯಾಗಿರಿಸಿಕೊಂಡು ದಾಳಿ ನಡೆಸುತ್ತಿಲ್ಲ. ಆದರೆ, ಹಮಸ್ ಸಂಘಟನೆ ಉದ್ದೇಶಪೂರ್ವಕವಾಗಿಯೇ ಜನದಟ್ಟಣೆ ಇರುವ ಪ್ರದೇಶಗಳಲ್ಲಿ ತನ್ನ ಸೇನಾ ನೆಲೆಗಳನ್ನು ನಿರ್ಮಿಸಿಕೊಂಡಿದೆ’ ಎಂದು ಇಸ್ರೇಲ್ ಸೇನೆ ತಿಳಿಸಿದೆ.

ಕಟ್ಟಡಗಳು, ರಸ್ತೆಗಳು ಹಾನಿಯಾಗಿರುವ ಚಿತ್ರಗಳನ್ನು ಗಾಜಾ ನಿವಾಸಿಗಳು, ಪತ್ರಕರ್ತರು ಸಾಮಾಜಿಕ ಮಾಧ್ಯಮಗಳಲ್ಲಿ ಹಂಚಿಕೊಂಡಿದ್ದಾರೆ. ವೈಮಾನಿಕ ದಾಳಿಯಿಂದಾಗಿ ನಗರದ ಮುಖ್ಯರಸ್ತೆಯಲ್ಲಿ ಕಂದಕ ಸೃಷ್ಟಿಯಾಗಿ, ನಗರದ ಬೃಹತ್ ಆಸ್ಪತ್ರೆ ಶಿಫಾಕ್ಕೆ ಸಂಪರ್ಕ ಕಡಿದು ಹೋಗಿದೆ.

> ಹಿಂಸಾಚಾರದಿಂದ ಎಲ್ಲವೂ ನಾಶವಾಗುತ್ತದೆ. ದ್ವೇಷ ಮತ್ತು ಸೇಡು ಎಲ್ಲಿಗೆ ಕೊಂಡೊಯ್ಯುತ್ತವೆ? ಇನ್ನೊಬ್ಬರನ್ನು ನಾಶ ಮಾಡಿ ನಾವು ಶಾಂತಿ ಸ್ಥಾಪಿಸಲು ಸಾಧ್ಯವೇ?
> **ಪೋಪ್ ಫ್ರಾನ್ಸಿಸ್**

ಕಳೆದ ಸೋಮವಾರದಿಂದ ಹಮಸ್ ಮತ್ತು ಇತರ ಉಗ್ರಗಾಮಿ ಸಂಘಟನೆಗಳು, ಇಸ್ರೇಲ್ ಮೇಲೆ ಸುಮಾರು ಮೂರು ಸಾವಿರ ರಾಕೆಟ್‌ಗಳ ದಾಳಿ ನಡೆಸಿವೆ. ಇಸ್ರೇಲ್ ಸಹ ತಿರುಗೇಟು ನೀಡಿದ್ದು, ಹಮಸ್ ಸಂಘಟನೆ ವಿರುದ್ಧ ದಾಳಿಯನ್ನು ತೀವ್ರಗೊಳಿಸಿದೆ.

ಶನಿವಾರ 12 ಅಂತಸ್ತಿನ ಕಟ್ಟಡದ ಮೇಲೆ ಇಸ್ರೇಲ್ ದಾಳಿ ನಡೆಸಿತ್ತು. ಈ ಕಟ್ಟಡದಲ್ಲಿ ದಿ ಅಸೋಸಿಯೇಟೆಡ್ ಪ್ರೆಸ್, ಅಲ್ ಜಝೀರಾ ಸೇರಿದಂತೆ ಹಲವು ಪ್ರಮುಖ ಮಾಧ್ಯಮ ಸಂಸ್ಥೆಗಳ ಕಚೇರಿಗಳು ಕಾರ್ಯನಿರ್ವಹಿಸುತ್ತಿದ್ದವು. ಈ ದಾಳಿಗೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಆಕ್ರೋಶ ವ್ಯಕ್ತವಾಗಿತ್ತು.

‘ಈ ಕಟ್ಟಡದಲ್ಲಿ ಹಮಸ್ ಸಂಘಟನೆಯ ಗುಪ್ತಚರ ವಿಭಾಗ ಕಾರ್ಯನಿರ್ವಹಿಸುತ್ತಿತ್ತು’ ಎಂದು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಸಮರ್ಥಿಸಿಕೊಂಡಿದ್ದಾರೆ.

ಗಾಜಾದಲ್ಲಿ ಸುಮಾರು 10 ಸಾವಿರಕ್ಕೂ ಹೆಚ್ಚು ಮಂದಿ ಸುರಕ್ಷಿತ ಸ್ಥಳಗಳಿಗೆ ತೆರಳಿದ್ದಾರೆ. ಶಾಲೆ, ಮಸೀದಿಗಳು ಮತ್ತು ಇತರ ಸ್ಥಳಗಳಲ್ಲಿ ಆಶ್ರಯ ಪಡೆದಿದ್ದಾರೆ.

ಇಸ್ರೇಲ್ ತನ್ನ ಸ್ವಯಂ ರಕ್ಷಣೆ ಮಾಡಿಕೊಳ್ಳುವುದನ್ನು ಅಮೆರಿಕ ಅಧ್ಯಕ್ಷ ಜೋ ಬೈಡನ್ ಸಮರ್ಥಿಸಿಕೊಂಡಿದ್ದಾರೆ. ಆದರೆ, ಹಿಂಸಾಚಾರ ಮತ್ತು ಪತ್ರಕರ್ತರ ಸುರಕ್ಷತೆ ಬಗ್ಗೆ ಕಳವಳ ವ್ಯಕ್ತಪಡಿಸಿದ್ದಾರೆ.

ಇಸ್ರೇಲ್ ದಾಳಿಯಿಂದ ವ್ಯಾಕುಲಗೊಂಡಿರುವೆ: ಗುಟೆರಸ್

ವಿಶ್ವಸಂಸ್ಥೆ (ಎಪಿ): ‘ಗಾಜಾ ನಗರದಲ್ಲಿ ಅಂತರರಾಷ್ಟ್ರೀಯ ಮಾಧ್ಯಮ ಸಂಸ್ಥೆಗಳ ಕಚೇರಿಗಳಿರುವ ಬೃಹತ್ ಕಟ್ಟಡ, ಜನವಸತಿಯುಳ್ಳ ಅಪಾರ್ಟ್‌ಮೆಂಟ್‌ಗಳು ಇಸ್ರೇಲ್ ನಡೆಸಿರುವ ವೈಮಾನಿಕ ದಾಳಿಯಲ್ಲಿ ಧ್ವಂಸಗೊಂಡಿದ್ದು, ಇದರಿಂದ ಬಹಳ ವ್ಯಾಕುಲಗೊಂಡಿದ್ದೇನೆ’ ಎಂದು ವಿಶ್ವಸಂಸ್ಥೆಯ ಮಹಾ ಕಾರ್ಯದರ್ಶಿ ಆ್ಯಂಟೊನಿಯೊ ಗುಟೆರಸ್ ಹೇಳಿದ್ದಾರೆ.

‘ನಾಗರಿಕರು ಹಾಗೂ ಮಾಧ್ಯಮಗಳ ಕಚೇರಿಗಳನ್ನು ಗುರಿಯಾಗಿಸಿಕೊಂಡು ದಾಳಿ ನಡೆಸುವುದು ಅಂತರರಾಷ್ಟ್ರೀಯ ಕಾಯ್ದೆಯ ಉಲ್ಲಂಘನೆಯಾಗುತ್ತದೆ. ಇಂಥ ಕ್ರಮಗಳಿಗೆ ಮುಂದಾಗಬಾರದು ಎಂದು ಗುಟೆರಸ್ ಅವರು ಎಚ್ಚರಿಸಿದ್ದಾರೆ’ ಎಂದು ಅವರ ವಕ್ತಾರ ಸ್ಟೀಫನ್ ದುಜಾರಿಕ್ ಹೇಳಿದರು.

‘ಕಪ್ಪು ಶಿಲೀಂಧ್ರ ರೋಗ ಚಿಕಿತ್ಸೆಗೆ ಸಲಹಾ ಸಮಿತಿ’

ಒಂದನೇ ಪುಟದಿಂದ...

‘ರೋಗ ನಿರೋಧಕ ಶಕ್ತಿ ಕಡಿಮೆ ಇರುವವರು ಹಾಗೂ ಸ್ಟಿರಾಯಿಡ್ ಹೆಚ್ಚು ಬಳಸಿರುವವರಿಗೆ ಮತ್ತು ಮಧುಮೇಹ ಹೆಚ್ಚಿರುವವರಿಗೆ ಕೋವಿಡ್ ಬಂದಾಗ ಬ್ಲ್ಯಾಕ್ ಫಂಗಸ್ ಬರುವ ಸಾಧ್ಯತೆ ಇದೆ. ಮೂಗಿನಿಂದ ಆರಂಭವಾಗುವ ಈ ರೋಗ ಕಣ್ಣಿಗೆ ಹಾನಿ ಮಾಡುತ್ತದೆ. ದೃಷ್ಟಿ ಕೂಡ ಕಳೆದುಕೊಳ್ಳುವ ಅಪಾಯವಿದೆ. ಸರಿಯಾದ ಚಿಕಿತ್ಸೆ ನೀಡದಿದ್ದರೆ ಸಾವು ಸಂಭವಿಸಬಹುದು. ಮಹಾರಾಷ್ಟ್ರದಲ್ಲಿ ಕಾಣಿಸಿಕೊಂಡಾಗಲೇ ಇಲ್ಲಿನ ನೇತ್ರ ತಜ್ಞರೊಂದಿಗೆ ಸಮಾಲೋಚನೆ ನಡೆಸಲಾಗಿದೆ’ ಎಂದು ಹೇಳಿದರು.

‘ಕಪ್ಪು ಶಿಲೀಂಧ್ರ ರೋಗಕ್ಕೆ ಸತತ ಏಳು ವಾರಗಳ ಚಿಕಿತ್ಸೆ ಅಗತ್ಯವಿದ್ದು, ₹ 2 ಲಕ್ಷದಿಂದ ₹ 3 ಲಕ್ಷ ಖರ್ಚಾಗುತ್ತದೆ. ಈ ಸಮಸ್ಯೆ ಇದ್ದವರು ತಕ್ಷಣ ಪರೀಕ್ಷೆ ಮಾಡಿಸಬೇಕು. ಇದಕ್ಕೆ ಬೇಕಿರುವ ಆಂಪೊಟೆರಿಸಿನ್ ಔಷಧಿಯನ್ನು ಕೇಂದ್ರ ಸರ್ಕಾರ ನೀಡಲಿದ್ದು, 20 ಸಾವಿರ ಡೋಸ್‌ಗೆ ಮನವಿ ಮಾಡಲಾಗಿದೆ’ ಎಂದರು.

‘ಯಾರೂ ವೈದ್ಯರ ಬಳಿ ಸಲಹೆ ಪಡೆಯದೆ ಸ್ಟಿರಾಯಿಡ್ ಮೊದಲಾದ ಔಷಧಿ ಪಡೆಯಬಾರದು’ ಎಂದು ಮನವಿ ಮಾಡಿದರು.

ಕೋಲಾರ: 12 ಮಂದಿಗೆ ಕಪ್ಪು ಶಿಲೀಂಧ್ರ ಸೋಂಕು

ಒಂದನೇ ಪುಟದಿಂದ

ಸೋಂಕಿತ 12 ಮಂದಿಯಲ್ಲಿ 7 ಮಂದಿ ಮಾತ್ರ ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆಯುತ್ತಿದ್ದು, ಒಬ್ಬರ ಸ್ಥಿತಿ ಗಂಭೀರವಾಗಿದೆ. ಉಳಿದ 5 ಮಂದಿ ಸೋಂಕಿತರು ಚಿಕಿತ್ಸೆಗೆ ಹಣ ಹೊಂದಿಸಿಕೊಂಡು ಬರುವುದಾಗಿ ಹೇಳಿ ಆಸ್ಪತ್ರೆಯಿಂದ ಹೊರಟು ಹೋಗಿದ್ದಾರೆ. ಆಸ್ಪತ್ರೆಯ ತೀವ್ರ ನಿಗಾ ಘಟಕದಲ್ಲಿರುವ 7 ಸೋಂಕಿತರ ಪೈಕಿ 4 ಮಂದಿಗೆ ಶಸ್ತ್ರಚಿಕಿತ್ಸೆ ನಡೆಸಿ, ಸೋಂಕಿನಿಂದ ಹಾನಿಗೊಳಗಾಗಿರುವ ದೇಹದ ಭಾಗವನ್ನು ತೆರವುಗೊಳಿಸಲಾಗಿದೆ.

‘45 ವರ್ಷದಿಂದ 75 ವರ್ಷದವರೆಗಿನ ವಯೋಮಾನದವರಲ್ಲಿ ಬ್ಲ್ಯಾಕ್ ಫಂಗಸ್ ಸೋಂಕಿನ ಲಕ್ಷಣ ಗೋಚರಿಸಿದೆ. ಈ ಸೋಂಕಿತರಿಗೆ ಲಿಪೋಸೋಮಲ್ ಆಂಪೊಟೆರಿಸಿನ್ ಬಿ ಚುಚ್ಚುಮದ್ದು ನೀಡಿ ಚಿಕಿತ್ಸೆ ಮುಂದುವರಿಸಲಾಗಿದೆ’ ಎಂದು ಜಾಲಪ್ಪ ಆಸ್ಪತ್ರೆಯ ವೈದ್ಯಕೀಯ ಸೂಪರಿಂಟೆಂಡೆಂಟ್ ಡಾ.ಎಸ್.ಎಂ. ಅಜೀಂ ಮೊಹಿಯುದ್ದೀನ್ ‘ಪ್ರಜಾವಾಣಿ’ಗೆ ತಿಳಿಸಿದರು.

ದೆಹಲಿ: ಕೋವಿಡ್ ಪೀಡಿತರ ಜೀವ ರಕ್ಷಣೆಗೆ ಕೇಂದ್ರ ನೆರವು

ನಿವಾಸಿಗಳೇ ರೂಪಿಸಿದ ಆರೈಕೆ ಕೇಂದ್ರ

ಪ್ರಜಾವಾಣಿ ವಾರ್ತೆ

ನವದೆಹಲಿ: ಆಸ್ಪತ್ರೆಯ ಹುಡುಕಾಟದಲ್ಲಿಯೇ ಮಹಿಳೆಯೊಬ್ಬರು ಪ್ರಾಣಬಿಟ್ಟ ಘಟನೆಯ ನಂತರ ಎಚ್ಚೆತ್ತುಕೊಂಡ ಕೆಲ ನಿವಾಸಿಗಳು ಒಟ್ಟಾಗಿ ನೋಯ್ಡಾದಲ್ಲಿ ಆಮ್ಲಜನಕ ಸೌಲಭ್ಯವುಳ್ಳ ಕೋವಿಡ್ ಆರೈಕೆ ಕೇಂದ್ರ ಸ್ಥಾಪಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಆಮ್ಲಜನಕ ಸೌಲಭ್ಯಯುಕ್ತ ಒಂದು ಹಾಸಿಗೆಯೊಂದಿಗೆ ನೋಯ್ಡಾದ ಸೆಕ್ಟರ್ 50ರಲ್ಲಿ ಮೇ 1ರಂದು ಆರಂಭವಾದ ಕೇಂದ್ರದಲ್ಲಿ ಈಗ ಇಂತಹ 14 ಹಾಸಿಗೆಗಳಿವೆ. ಕೋವಿಡ್ ಪೀಡಿತರ ಜೀವ ರಕ್ಷಣೆಗೆ ಕೇಂದ್ರ ನೆರವಾಗುತ್ತಿದೆ.

‘ಆಮ್ಲಜನಕ ಮಟ್ಟ 35ಕ್ಕೆ ಇಳಿದಿದ್ದ ಒಬ್ಬರಿಗೆ ಕೇಂದ್ರದ ನರ್ಸ್ ಕೂಡಲೇ ಆಮ್ಲಜನಕ ಸೇವೆ ಒದಗಿಸಿದ್ದು, ಜೀವ ಉಳಿಸಲು ಶಕ್ತರಾಗಿದ್ದೇವೆ’ ಎಂದು ನಿವಾಸಿಗಳ ಕಲ್ಯಾಣ ಸಂಘದ ಸದಸ್ಯರಾದ ಅಂಚಲ್ ಬೋಹ್ರಾ ಅವರು ತಿಳಿಸಿದರು.

ಸಾಂದರ್ಭಿಕ ಚಿತ್ರ

ಜಿಲ್ಲಾ ಅಧಿಕಾರಿಗಳ ಜೊತೆ ಸಂಪರ್ಕ ಸಾಧಿಸಿ ರೋಗಿಗೆ ಐಸಿಯು ಬೆಡ್ ಒದಗಿಸಲಾಗಿದೆ. ವೆಂಟಿಲೇಟರ್ ನೆರವಿನಲ್ಲಿ ಇದ್ದರೂ ಸದ್ಯ ಆರೋಗ್ಯ ಸ್ಥಿರವಾಗಿದೆ ಎಂದು ಹೇಳಿದರು.

ಸಂಘದ ಅಧ್ಯಕ್ಷ ವಿಮಲ್ ಶರ್ಮಾ ಅವರು, ‘ಆದರೆ, ಏಪ್ರಿಲ್ 28ರಂದು ಒಬ್ಬರಿಗೆ ಆಸ್ಪತ್ರೆಯಲ್ಲಿ ಹಾಸಿಗೆ ಸೌಲಭ್ಯ ಸಿಗಲಿಲ್ಲ. ಕಾರಿನಲ್ಲಿ ತಿರುಗಾಡಿದರೂ ಪ್ರಯೋಜನವಾಗಲಿಲ್ಲ. ಮಹಿಳೆ ಕಾರಿನಲ್ಲಿಯೇ ಪ್ರಾಣ ತ್ಯಜಿಸಿದ್ದರು’ ಎಂದು ಸ್ಮರಿಸಿದರು.

ಆ ಘಟನೆಯ ನಂತರ ನಾವು ಆಮ್ಲಜನಕ ಸಿಲಿಂಡರ್ ವ್ಯವಸ್ಥೆಯನ್ನು ಮಾಡಿಕೊಂಡಿದ್ದು ಐಸೋಲೇಷನ್ ಸೌಲಭ್ಯ ಸ್ಥಾಪಿಸಿಕೊಂಡೆವು ಎಂದು ಶರ್ಮಾ ಸ್ಮರಿಸಿದರು.

ಸದ್ಯ, ಈ ಸೌಲಭ್ಯವು ದಿನದ 24 ಗಂಟೆ ಕಾರ್ಯನಿರ್ವಹಿಸುತ್ತಿದೆ. ಆನ್‌ಲೈನ್ ಮೂಲಕವು ವೈದ್ಯರ ಸಮಾಲೋಚನೆಗೆ ವ್ಯವಸ್ಥೆ ಮಾಡಿದೆ. ಹೆಲ್ಪ್‌ಡೆಸ್ಕ್ ರಚಿಸಲಾಗಿದೆ ಎಂದು ತಿಳಿಸಿದರು.

ಸದ್ಯ, ಕೇಂದ್ರದಲ್ಲಿ ಗರಿಷ್ಠ 9 ರೋಗಿಗಳು ಸೇವೆ ಪಡೆದಿದ್ದು, ಸಿಬ್ಬಂದಿ ಅಗತ್ಯ ಆರೈಕೆಯನ್ನು ಮಾಡಿದ್ದಾರೆ. ಭಾನುವಾರ ಒಬ್ಬ ರೋಗಿಯೂ ಇರಲಿಲ್ಲ. ಬಹುಶಃ ಪ್ರಕರಣ ಸಂಖ್ಯೆ ಕಡಿಮೆ ಆಗಿರುವುದು ಕಾರಣ ಇರಬಹುದು ಎಂದು ಪ್ರತಿಕ್ರಿಯಿಸಿದರು.

ಸಂಕ್ಷಿಪ್ತ ಸುದ್ದಿ

ಫೇಸ್‌ಬುಕ್‌ನಲ್ಲಿ ಐಸಿಸ್ ಪೋಸ್ಟ್ ಎನ್‌ಐಎ ಶೋಧ

ಚೆನ್ನೈ: ಇಸ್ಲಾಮಿಕ್ ಸ್ಟೇಟ್ ಭಯೋತ್ಪಾದಕ ಸಂಘಟನೆ ಹಾಗೂ ಹಿಜ್ಬ್ ಉಲ್ ತಹ್ರಿರ್ ಮೂಲಭೂತವಾದಿ ಸಂಘಟನೆಯ ಸಿದ್ಧಾಂತವನ್ನು ಪ್ರತಿಪಾದಿಸುವ ಪೋಸ್ಟ್‌ಗಳನ್ನು ಫೇಸ್‌ಬುಕ್‌ನಲ್ಲಿ ಹಂಚಿಕೊಂಡ ಪ್ರಕರಣಕ್ಕೆ ಸಂಬಂಧಿಸಿದಂತೆ ರಾಷ್ಟ್ರೀಯ ತನಿಖಾ ದಳವು (ಎನ್‌ಐಎ) ಭಾನುವಾರ ತಮಿಳುನಾಡಿನ ಮದುರೈ ಜಿಲ್ಲೆಯ ನಾಲ್ಕು ಸ್ಥಳಗಳಲ್ಲಿ ಶೋಧ ನಡೆಸಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಮದುರೈ ಜಿಲ್ಲೆಯ ಕಾಜಿಮಾರ್ ಸ್ಟ್ರೀಟ್, ಕೆ. ಪುದರ್, ಪೆಥಾನಿಯಪುರಂ ಮತ್ತು ಮೆಹಬೂಬ್ ಪಾಳಯಂ ಎಂಬಲ್ಲಿ ಶೋಧ ನಡೆಸಲಾಗಿದೆ.

ಶೋಧ ಕಾರ್ಯಾಚರಣೆಯ ವೇಳೆಯಲ್ಲಿ ಲ್ಯಾಪ್‌ಟ್ಯಾಪ್, ಹಾರ್ಡ್ ಡಿಸ್ಕ್‌ಗಳು, ಮೊಬೈಲ್ ಫೋನ್‌ಗಳು, ಮೆಮೊರಿ ಕಾರ್ಡ್‌ಗಳು, ಸಿಮ್, ಪೆನ್ ಡ್ರೈವ್‌ಗಳು ಆಕ್ಷೇಪಾರ್ಹ ಕರಪತ್ರ, ಪುಸ್ತಕಗಳು ಸೇರಿದಂತೆ 16 ಡಿಜಿಟಲ್ ಸಾಧನಗಳು ದೊರಕಿವೆ ಎಂದು ಎನ್‌ಐಎ ಮೂಲಗಳು ತಿಳಿಸಿವೆ.

ಬಿಜೆಪಿಯ ಮೂವರು ಶಾಸಕರ ಬಂಧನ, ಬಿಡುಗಡೆ

ಸಿಲಿಗುರಿ: ‘ಪಶ್ಚಿಮ ಬಂಗಾಳದ ಸಿಲಿಗುರಿಯಲ್ಲಿ ಲಾಕ್‌ಡೌನ್ ನಿಯಮ ಉಲ್ಲಂಘಿಸಿದ ಆರೋಪದಡಿ ಬಿಜೆಪಿಯ ಮೂವರು ಶಾಸಕರನ್ನು ಭಾನುವಾರ ಬಂಧಿಸಲಾಗಿದೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

‘ಉತ್ತರ ಬಂಗಾಳದಲ್ಲಿ ಕೋವಿಡ್ ಪ್ರಕರಣಗಳನ್ನು ನಿಯಂತ್ರಿಸಲು ರಾಜ್ಯ ಸರ್ಕಾರ ಕೈಗೊಂಡಿರುವ ಕ್ರಮಗಳಲ್ಲಿ ಕೊರತೆಯಿದೆ ಎಂದು ಆರೋಪಿಸಿ ಬಿಜೆಪಿ ಶಾಸಕರಾದ ಶಂಕರ್ ಘೋಶ್, ಆನಂದಮೊಯಿ ಬರ್ಮನ್ ಮತ್ತು ಶಿಖಾ ಚಟ್ಟೋಪಾಧ್ಯಾಯ ಅವರು ಪ್ರತಿಭಟನೆ ನಡೆಸಿದರು. ಈ ಹಿನ್ನೆಲೆಯಲ್ಲಿ ಅವರನ್ನು ಬಂಧಿಸಿ, ಬಳಿಕ ಬಿಡುಗಡೆಗೊಳಿಸಲಾಯಿತು ಎಂದು ಅವರು ತಿಳಿಸಿದರು.

ಪ್ರತ್ಯೇಕತಾವಾದಿ ನಾಯಕ ಸೆಹ್ರಾಯ್ ಪುತ್ರರು ವಶಕ್ಕೆ

ಶ್ರೀನಗರ: ಈಚೆಗೆ ನಿಧನರಾದ ಪ್ರತ್ಯೇಕತಾವಾದಿ ನಾಯಕ ಮೊಹಮ್ಮದ್ ಅಶ್ರಫ್ ಸೆಹ್ರಾಯ್ ಅವರ ಇಬ್ಬರು ಪುತ್ರರನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ ಎಂದು ಅಧಿಕಾರಿಗಳು ಭಾನುವಾರ ತಿಳಿಸಿದ್ದಾರೆ.

ಸೆಹ್ರಾಯ್ ಅವರ ಅಂತ್ಯಕ್ರಿಯೆಯ ಸಂದರ್ಭದಲ್ಲಿ ಸ್ವಾತಂತ್ರ್ಯ ಪರ ಘೋಷಣೆ ಕೂಗಿದ್ದ ಆರೋಪದಲ್ಲಿ ಇವರ ವಿರುದ್ಧ ಕುಪ್ವಾರ ಜಿಲ್ಲೆಯ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದು, ಬರ್ಜುಲ್ಲಾ ಪ್ರದೇಶದಲ್ಲಿರುವ ಅವರ ಮನೆಯಿಂದ ಶನಿವಾರ ಸಂಜೆ ವಶಕ್ಕೆ ಪಡೆಯಲಾಗಿದೆ ಎಂದೂ ತಿಳಿಸಿದ್ದಾರೆ.

ತೆಹ್ರೀಕ್ ಇ ಹುರಿಯತ್ (ಟಿಇಎಚ್) ಅಧ್ಯಕ್ಷರಾಗಿದ್ದ ಸೆಹ್ರಾಯ್ ಅವರನ್ನು ಕಳೆದ ವರ್ಷ ಜುಲೈ ತಿಂಗಳಿನಲ್ಲಿ ಸಾರ್ವಜನಿಕ ಸುರಕ್ಷತಾ ಕಾಯ್ದೆ ಅಡಿ ಬಂಧಿಸಲಾಗಿತ್ತು. ಉಧಂಪುರ ಜೈಲಿನಲ್ಲಿದ್ದ ಅವರನ್ನು ಅನಾರೋಗ್ಯದ ಕಾರಣ ಜಮ್ಮುವಿನ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಅಲ್ಲಿ ಮೇ 5ರಂದು ನಿಧನರಾಗಿದ್ದರು.

ಕೋವಿಡ್‌ನಿಂದ ಮೃತರಾದವರ ಕುಟುಂಬಕ್ಕೆ ಪರಿಹಾರ ಕೋರಿ ಅರ್ಜಿ

ನವದೆಹಲಿ: ಕೋವಿಡ್‌ನಿಂದ ಮೃತರಾದವರ ಕುಟುಂಬಕ್ಕೆ ₹4ಲಕ್ಷ ಪರಿಹಾರ ನೀಡಲು ಅಧಿಕಾರಿಗಳಿಗೆ ನಿರ್ದೇಶನ ನೀಡಬೇಕೆಂದು ಕೋರಿ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಕೆಯಾಗಿದೆ.



ಪರಿಹಾರ ಕಾರ್ಯಾಚರಣೆಯಲ್ಲಿ ಪಾಲ್ಗೊಳ್ಳುವ ವ್ಯಕ್ತಿಗೆ ₹4 ಲಕ್ಷ ಪರಿಹಾರ ನೀಡಲು ರಾಜ್ಯ ವಿಪತ್ತು ನಿರ್ವಹಣಾ ನಿಧಿ (ಎಸ್‌ಡಿಆರ್‌ಎಫ್) ಮತ್ತು ರಾಷ್ಟ್ರೀಯ ವಿಪತ್ತು ನಿರ್ವಹಣಾ ನಿಧಿಯನ್ನು (ಎನ್‌ಡಿಆರ್‌ಎಫ್) ಬಳಕೆ ಮಾಡುವ ಬಗ್ಗೆ ಕೇಂದ್ರ ಸರ್ಕಾರವು ಪರಿಷ್ಕೃತ ಪಟ್ಟಿಯನ್ನು ಬಿಡುಗಡೆ ಮಾಡಿರುವ ಅಂಶವನ್ನು ವಕೀಲರಾದ ರೀಪಕ್ ಕಾನ್ಸಾಸ್ ಅರ್ಜಿಯಲ್ಲಿ ಉಲ್ಲೇಖಿಸಿದ್ದಾರೆ.

ಕೇಂದ್ರ ಸರ್ಕಾರವು ಕೋವಿಡ್–19 ಅನ್ನು ರಾಷ್ಟ್ರೀಯ ವಿಪತ್ತು ಎಂದು ಮಾರ್ಚ್ 14ರಂದು ಘೋಷಿಸಿದ್ದು, ವಿಪತ್ತು ನಿರ್ವಹಣಾ ಕಾಯ್ದೆಯ ಸೆಕ್ಷನ್ 12ರ ಅಡಿಯಲ್ಲಿ ಪರಿಹಾರ ಒದಗಿಸಲು ಕನಿಷ್ಠ ಮಾನದಂಡಗಳನ್ನು ಶಿಫಾರಸು ಮಾಡಬೇಕು ಎಂದೂ ಅರ್ಜಿದಾರರು ಕೋರಿದ್ದಾರೆ.

ಕೋವಿಡ್‌ನಿಂದ ಮೃತರಾದವರ ಮರಣ ಪ್ರಮಾಣ ಪತ್ರವನ್ನು ಅವರ ಕುಟುಂಬದವರಿಗೆ ನೀಡಲು ರಾಜ್ಯ ಸರ್ಕಾರಗಳಿಗೆ ನಿರ್ದೇಶನ ನೀಡಬೇಕು ಎಂದೂ ಅರ್ಜಿಯಲ್ಲಿ ಮನವಿ ಮಾಡಿದ್ದಾರೆ.

ನಿಧನ ವಾರ್ತೆ

ಕಾಂಗ್ರೆಸ್ ಸಂಸದ ರಾಜೀವ್ ಸಾತವ್

ಪುಣೆ (ಪಿಟಿಐ): ಕೋವಿಡ್ ಸೋಂಕು ದೃಢಪಟ್ಟಿದ್ದ ಕಾಂಗ್ರೆಸ್ ಸಂಸದ ರಾಜೀವ್ ಸಾತವ್ ಅವರು (46) ಇಲ್ಲಿನ ಖಾಸಗಿ ಆಸ್ಪತ್ರೆಯಲ್ಲಿ ಭಾನುವಾರ ನಿಧನರಾದರು.

ಏಪ್ರಿಲ್ 22ರಂದು ಸಾತವ್ ಅವರಲ್ಲಿ ಕೋವಿಡ್ ಸೋಂಕು ದೃಢಪಟ್ಟಿದ್ದು, ಚೇತರಿಸಿಕೊಂಡಿದ್ದರು. ಬಳಿಕ ಸೈಟೊಮೆಗಾಲೊ ವೈರಸ್ ಸೋಂಕು ಕಾಣಿಸಿಕೊಂಡಿತ್ತು. ಪರಿಸ್ಥಿತಿ ಗಂಭೀರವಾಗಿದ್ದು, ವೆಂಟಿಲೇಟರ್ ನೆರವಿನಲ್ಲಿ ಇರಿಸಲಾಗಿತ್ತು.

‘ಅಂತ್ಯಕ್ರಿಯೆಯು ಅವರ ಹುಟ್ಟೂರು ಮಹಾರಾಷ್ಟ್ರದ ಹಿಂಗೋಳಿ ಜಿಲ್ಲೆಯ ಕಲಮ್ನುರಿಯಲ್ಲಿ ಸೋಮವಾರ ಬೆಳಿಗ್ಗೆ ನಡೆಯಲಿದೆ’ ಎಂದು ಎಂದು ಹಿಂಗೋಲಿ ಜಿಲ್ಲಾಧಿಕಾರಿ ರುಚೇಶ್ ಜಯವಂಶಿ ತಿಳಿಸಿದ್ದಾರೆ.

ಸಾತವ್ ಅವರು ಪುಣೆಯಲ್ಲಿ 1974ರ ಸೆಪ್ಟೆಂಬರ್‌ನಲ್ಲಿ ಜನಿಸಿದ್ದರು. ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿಗೆ ಆಪ್ತರಾಗಿದ್ದರು. ಅವರು ಗುಜರಾತ್‌ನಲ್ಲಿ ಕಾಂಗ್ರೆಸ್ ಪಕ್ಷದ ಉಸ್ತುವಾರಿಯಾಗಿದ್ದರು.

ಪತ್ರಕರ್ತ ಸುನೀಲ್ ಜೈನ್

ನವದೆಹಲಿ (ಪಿಟಿಐ): ಹಿರಿಯ ಪತ್ರಕರ್ತ, ಫೈನಾನ್ಸಿಯಲ್ ಎಕ್ಸ್‌ಪ್ರೆಸ್‌ನ ವ್ಯವಸ್ಥಾಪಕ ಸಂಪಾದಕ ಸುನೀಲ್ ಜೈನ್ ಅವರು ಕೋವಿಡ್‌ನಿಂದ ಮೃತಪಟ್ಟಿದ್ದಾರೆ.

ವಾರದ ಹಿಂದೆ ಅವರಿಗೆ ಸೋಂಕು ದೃಢಪಟ್ಟಾಗ ಏಐಐಎಂಎಸ್ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಚಿಕಿತ್ಸೆಗೆ ಸ್ಪಂದಿಸದೇ ಕೊನೆಯುಸಿರೆಳೆದರು ಎಂದು ಸುನೀಲ್ ಅವರ ಸಹೋದರಿ ಸಂಧ್ಯಾ ಜೈನ್ ತಿಳಿಸಿದ್ದಾರೆ.



ರಾಜೇಂದ್ರ ಸಿನ್ಹ ಜಡೇಜ –ಟ್ವಿಟರ್ ಚಿತ್ರ

ಕೋವಿಡ್: ರಾಜೇಂದ್ರ ಜಡೇಜ ಸಾವು

ರಾಜ್‌ಕೋಟ್ (ಪಿಟಿಐ): ಸೌರಾಷ್ಟ್ರದ ಮಾಜಿ ವೇಗದ ಬೌಲರ್ ಹಾಗೂ ಬಿಸಿಸಿಐ ಮ್ಯಾಚ್ ರೆಫರಿ ಆಗಿದ್ದ ರಾಜೇಂದ್ರ ಸಿನ್ಹ ಜಡೇಜ (66) ಕೋವಿಡ್‌ನಿಂದ ನಿಧನರಾಗಿದ್ದಾರೆ ಎಂದು ಸೌರಾಷ್ಟ್ರ ಕ್ರಿಕೆಟ್ ಸಂಸ್ಥೆ (ಎಸ್‌ಸಿಎ) ಭಾನುವಾರ ತಿಳಿಸಿದೆ.

'ರಾಜೇಂದ್ರ ಸಿನ್ಹ ಅವರ ಅಕಾಲಿಕ ಮರಣ ಎಲ್ಲರನ್ನು ದು:ಖದ ಕಡಲಿನಲ್ಲಿ ಮುಳುಗಿಸಿದೆ. ಸೌರಾಷ್ಟ್ರದ ಕ್ರಿಕೆಟ್ ಬೆಳವಣಿಗೆಯಲ್ಲಿ ಅವರು ಮಹತ್ವದ ಪಾತ್ರ ವಹಿಸಿದ್ದಾರೆ. ಕೋವಿಡ್ ವಿರುದ್ಧ ಹೋರಾಡಿ ಭಾನುವಾರ ಬೆಳಿಗ್ಗೆ ಅವರು ಕೊನೆಯುಸಿರೆಳೆದರು' ಎಂದು ಎಸ್‌ಸಿಎ ತಿಳಿಸಿದೆ.

1975ರಿಂದ 1987ರ ವರೆಗೆ ಕ್ರಿಕೆಟ್ ಆಡಿದ್ದ ಜಡೇಜ ಅತ್ಯುತ್ತಮ ಮಧ್ಯಮ ವೇಗಿಯಾಗಿದ್ದರು. ಆಲ್‌ರೌಂಡರ್ ಆಗಿಯೂ ಹೆಸರು ಮಾಡಿದ್ದಾರೆ. 50 ಪ್ರಥಮ ದರ್ಜೆ ಪಂದ್ಯ ಮತ್ತು 11 ಲಿಸ್ಟ್ 'ಎ' ಪಂದ್ಯಗಳನ್ನು ಆಡಿರುವ ಅವರು ಕ್ರಮವಾಗಿ 134 ಮತ್ತು 14 ವಿಕೆಟ್ ಉರುಳಿಸಿದ್ದಾರೆ. ಪ್ರಥಮ ದರ್ಜೆ ಕ್ರಿಕೆಟ್‌ನಲ್ಲಿ 1536 ರನ್ ಗಳಿಸಿರುವ ಅವರು ಲಿಸ್ಟ್ 'ಎ'ಯಲ್ಲಿ 104 ರನ್ ಕಲೆ ಹಾಕಿದ್ದಾರೆ. 53 ಏಕದಿನ ಪಂದ್ಯಗಳಲ್ಲಿ, 18 ಲಿಸ್ಟ್ ಎ ಪಂದ್ಯಗಳಲ್ಲಿ ಮತ್ತು 34 ಟಿ20 ಪಂದ್ಯಗಳಲ್ಲಿ ರಾಜೇಂದ್ರ ಸಿನ್ಹ ರೆಫರಿಯಾಗಿ ಕಾರ್ಯನಿರ್ವಹಿಸಿದ್ದಾರೆ. ಆಯ್ಕೆ ಸಮಿತಿ ಮುಖ್ಯಸ್ಥ, ಕೋಚ್ ಮತ್ತು ತಂಡದ ಮ್ಯಾನೇಜರ್ ಆಗಿಯೂ ಕಾರ್ಯನಿರ್ವಹಿಸಿದ್ದಾರೆ.

ಮಾಸ್ಕ್ ಅಗತ್ಯವಿಲ್ಲ: ಎನ್‌ಎಫ್‌ಎಲ್

ಬೆಂಗಳೂರು (ರಾಯಿಟರ್ಸ್): ಕೋವಿಡ್ ಲಸಿಕೆಯ ಎರಡೂ ಡೋಸ್ ಪಡೆದುಕೊಂಡ ಆಟಗಾರರು ಕಡ್ಡಾಯವಾಗಿ ಮಾಸ್ಕ್ ಧರಿಸಬೇಕಾದ ಅಗತ್ಯವಿಲ್ಲ ಎಂದು ಅಮೆರಿಕದ ನ್ಯಾಷನಲ್ ಫುಟ್‌ಬಾಲ್ ಲೀಗ್ (ಎನ್‌ಎಫ್‌ಎಲ್) ಆಯೋಜಕರು ತಿಳಿಸಿದ್ದಾರೆ. ಎರಡೂ ಲಸಿಕೆ ಹಾಕಿಸಿಕೊಂಡವರು ಎಲ್ಲ ಸಂದರ್ಭದಲ್ಲೂ ಮಾಸ್ಕ್ ಧರಿಸಬೇಕಾಗಿಲ್ಲ ಎಂದು ಅಮೆರಿಕದ ರೋಗ ನಿಯಂತ್ರಣ ಕೇಂದ್ರ ಹೇಳಿದೆ.

ಯುರೋಪಿಯನ್ ಚಾಂಪಿಯನ್‌ಷಿಪ್‌ನಲ್ಲಿ 'ಅತಿಥಿ'ಯಾಗಿ ಭಾಗಿ

ಶೂಟಿಂಗ್–ಶಿಕ್ಷಣ: ಮನುಗೆ 'ಪರೀಕ್ಷೆ'

ನವದೆಹಲಿ (ಪಿಟಿಐ): ಹೋಟೆಲ್ ಕೊಠಡಿಯಲ್ಲಿ ಕುಳಿತು ಟೋಕಿಯೊ ಒಲಿಂಪಿಕ್ಸ್ ಕುರಿತು ಯೋಚಿಸುತ್ತಿರುವ ಸಂದರ್ಭದಲ್ಲಿ ಭಾರತದ ಶೂಟರ್ ಮನು ಭಾಕರ್ ಪಿಸ್ತೂಲು ಮತ್ತು ಪೆನ್ ಮೂಲಕ ಮಾಡುವ ಸಾಧನೆಯ ಕುರಿತು ಕೂಡ ಚಿಂತಿಸುತ್ತಿದ್ದಾರೆ.

ಒಲಿಂಪಿಕ್ಸ್‌ಗೆ ಆಯ್ಕೆಯಾಗಿರುವ ಮನು ಭಾಕರ್ ಭಾರತ ತಂಡದೊಂದಿಗೆ ಕ್ರೊವೇಷ್ಯಾದ ರಾಜಧಾನಿ ಜಗ್ರೆಬ್‌ನಲ್ಲಿ ಅಭ್ಯಾಸನಿರತರಾಗಿದ್ದಾರೆ. ಅದೇ ವೇಳೆ ಬಿಎ ನಾಲ್ಕನೇ ಸೆಮಿಸ್ಟರ್ ಪರೀಕ್ಷೆಗೂ ಸಿದ್ಧರಾಗುತ್ತಿದ್ದಾರೆ. ಹೋಟೆಲ್ ಕೊಠಡಿಯಲ್ಲಿ ಕುಳಿತು ಆನ್‌ಲೈನ್ ಮೂಲಕ ಅವರು ಪರೀಕ್ಷೆ ಬರೆಯುವರು.

ದೆಹಲಿ ವಿಶ್ವವಿದ್ಯಾಲಯದ ಶ್ರೀರಾಮ್ ಮಹಿಳಾ ಕಾಲೇಜಿನ ಸಮಾಜ ವಿಜ್ಞಾನ ವಿದ್ಯಾರ್ಥಿನಿಯಾಗಿರುವ ಮನು ಅವರ ಪರೀಕ್ಷೆಗಳು ಇದೇ 18ರಂದು ಆರಂಭವಾಗಲಿವೆ. ಮೇ 20ರಿಂದ ಒಸಿಜೆಕ್‌ನಲ್ಲಿ ಯುರೋಪಿಯನ್ ಚಾಂಪಿಯನ್‌ಷಿಪ್ ಕೂಡ ನಡೆಯಲಿದೆ. ಭಾರತದ ಶೂಟರ್‌ಗಳು ಅದರಲ್ಲಿ ಅತಿಥಿ ಆಹ್ವಾನಿತರಾಗಿ ಪಾಲ್ಗೊಳ್ಳುವರು. ಆದರೆ ಅವರು ಪಾಲ್ಗೊಳ್ಳುವ ಸ್ಪರ್ಧೆಗಳು ಇರುವ ದಿನ ಪರೀಕ್ಷೆ ಇಲ್ಲದೇ ಇರುವುದು ಅನುಕೂಲವಾಗಿದೆ.

ಮನು ಭಾಕರ್ –ಪಿಟಿಐ ಚಿತ್ರ

'ಪರೀಕ್ಷೆ ಮತ್ತು ಶೂಟಿಂಗ್ ಸ್ಪರ್ಧೆಗಳನ್ನು ಈ ಹಿಂದೆಯೂ ಜೊತೆಯಾಗಿ ನಿಭಾಯಿಸಿದ್ದೇನೆ. ಈಗಲೂ ಅದು ಸಾಧ್ಯ. ನನಗೆ ಶೂಟಿಂಗ್ ಮತ್ತು ಶಿಕ್ಷಣ ಎರಡೂ ಮುಖ್ಯ. ಇದು ಒಲಿಂಪಿಕ್ಸ್ ನಡೆಯುವ ವರ್ಷ. ಅಲ್ಲಿ ಪದಕ ಗೆಲ್ಲಲು ಎಲ್ಲ ರೀತಿಯ ಪ್ರಯತ್ನವನ್ನೂ ಮಾಡಲಿದ್ದೇನೆ' ಎಂದು ಕಾಮನ್‌ವೆಲ್ತ್ ಗೇಮ್ಸ್, ಐಎಸ್‌ಎಸ್‌ಎಫ್ ವಿಶ್ವಕಪ್ ಮತ್ತು ಯೂತ್ ಒಲಿಂಪಿಕ್ಸ್‌ನಲ್ಲಿ ಪದಕಗಳನ್ನು ಗೆದ್ದುಕೊಂಡಿರುವ ಮನು ಸುದ್ದಿಸಂಸ್ಥೆಗೆ ತಿಳಿಸಿದರು.

'ಮನು ಓದಿನ ಬಗ್ಗೆ ತುಂಬ ಕಾಳಜಿ ವಹಿಸುತ್ತಾರೆ. ಆದರೆ ಓದು ಮತ್ತು ಶೂಟಿಂಗ್ ಸ್ಪರ್ಧೆ ಜೊತೆಜೊತೆಯಾಗಿ ಬಂದರೆ ಕ್ರೀಡೆಯ ಕಡೆಗೆ ಹೆಚ್ಚು ಗಮನ ನೀಡುತ್ತಾರೆ' ಎನ್ನುತ್ತಾರೆ, ಮರ್ಚಂಟ್ ನೇವಿಯಲ್ಲಿ ಮುಖ್ಯ ಎಂಜಿನಿಯರ್ ಆಗಿರುವ ತಂದೆ ರಾಮ್ ಕಿಶನ್ ಭಾಕರ್.

ಶೂಟಿಂಗ್ ಪರಿಕರಗಳೊಂದಿಗೆ ಪುಸ್ತಕಗಳನ್ನು ತೆಗೆದುಕೊಂಡು ಹೋಗಿರುವ ಮನು ಭಾಕರ್ ಪರೀಕ್ಷೆ ಬರೆದು ಉತ್ತರ ಪತ್ರಿಕೆಗಳನ್ನು ಮೊಬೈಲ್ ಸ್ಕ್ಯಾನರ್ ಮೂಲಕ ಸ್ಕ್ಯಾನ್ ಮಾಡಿ ಕಳುಹಿಸುವರು. 19 ವರ್ಷದ ಮನು ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಮಹಿಳೆಯರ 25 ಮೀಟರ್ ಪಿಸ್ತೂಲು ಮತ್ತು 10 ಮೀಟರ್ ಏರ್ ಪಿಸ್ತೂಲು ವಿಭಾಗದಲ್ಲಿ ಸ್ಪರ್ಧಿಸುವರು. ರಾಹಿ ಸರ್ನೋಬತ್ ಮತ್ತು ಯಶಸ್ವಿನಿ ಸಿಂಗ್ ದೇಸ್ವಾಲ್ ಕೂಡ ಮನು ಜೊತೆ ಕಣಕ್ಕೆ ಇಳಿಯಲಿದ್ದಾರೆ. 10 ಮೀಟರ್ ಪಿಸ್ತೂಲ್ ಮಿಶ್ರ ವಿಭಾಗದಲ್ಲಿ ಸೌರಭ್ ಚೌಧರಿ ಜೊತೆಗೂಡಿ ಮನು ಸ್ಪರ್ಧಿಸಲಿದ್ದಾರೆ.

ಯುರೋಪಿಯನ್ ಚಾಂಪಿಯನ್‌ಷಿಪ್ ನಂತರ ಭಾರತದ ಶೂಟರ್‌ಗಳು ಜೂನ್ 22ರಿಂದ ಜುಲೈ ಮೂರರ ವರೆಗೆ ನಡೆಯಲಿರುವ ಐಎಸ್‌ಎಸ್‌ಎಫ್ ವಿಶ್ವಕಪ್‌ನಲ್ಲಿ ಸ್ಪರ್ಧಿಸಲಿದ್ದಾರೆ.

ಪಿಪಿಎಲ್‌ನಲ್ಲಿ ವಿರಾಟ್ 'ಆಟ'

ರಾಂಚಿ (ಪಿಟಿಐ): ಕೋವಿಡ್ ಹಾವಳಿಯಿಂದಾಗಿ ಅರ್ಧಕ್ಕೆ ನಿಂತ ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯಿಂದ ಮನೆಗೆ ತೆರಳಿರುವ ಜಾರ್ಖಂಡ್‌ನ ಯುವ ಕ್ರಿಕೆಟಿಗರಾದ ಸೌರಭ್ ತಿವಾರಿ ಮತ್ತು ವಿರಾಟ್ ಸಿಂಗ್ ಅವರು ಪಿಪಿಎಲ್ (ಪ್ಲಾಸ್ಮಾ ಪ್ರೀಮಿಯರ್ ಲೀಗ್) ಅಥವಾ ಟೆಲ್ಕೊ ರೆಡ್ ಪ್ಯಾಂಥರ್ಸ್‌ನಲ್ಲಿ ತಮ್ಮ 'ಆಟ' ತೋರಿಸುತ್ತಿದ್ದಾರೆ.

ಇದು ಕ್ರಿಕೆಟ್ ಆಟವಲ್ಲ. ಕೋವಿಡ್ ರೋಗಿಗಳ ಜೀವ ಉಳಿಸುವ ಅಭಿಯಾನ. ಮಾಜಿ ಶಾಸಕ ಕುನಾಲ್ ಸಾರಂಗಿ ಆರಂಭಿಸಿರುವ ಪಿಪಿಎಲ್‌ಗೆ ಸೌರಭ್ ಮತ್ತು ವಿರಾಟ್ ಕೈಜೋಡಿಸಿದ್ದಾರೆ.

'ಪ್ರೀಷಿಯಸ್ ಪ್ಲಾಸ್ಮಾ ಟೈಗರ್ಸ್, ಟೆಲ್ಕೊ ರೆಡ್ ಪ್ಯಾಂಥರ್ಸ್, ತ್ರಿಎಸ್ ಡೋನೆಟರ್ಸ್, ಹೆಲ್ಪಿಂಗ್ ಹ್ಯಾಂಡ್ಸ್, ಸ್ಟೀಲ್ ಸಿಟಿ ವಾರಿಯರ್ಸ್, ಜುಗ್ಸಲಾಯ್ ಮಾಸ್ಕ್, ಸನ್‌ರೈಸ್ ಸೂಪರ್ ಸ್ಟಾರ್, ಜೆಮ್ಷೆಡ್‌ಪುರ್ ಕಿಂಗ್ಸ್ ಮತ್ತು ರೋಟರ್ಯಾಕ್ಟ್ ಇಲೆವನ್ ಈ ಲೀಗ್‌ನಲ್ಲಿರುವ ತಂಡಗಳು.

ಸುದ್ದಿ 2 ನಿಮಿಷ

ವಿಶ್ವಕಪ್ ಅರ್ಹತಾ ಟೂರ್ನಿಯಿಂದ ಹಿಂದೆ ಸರಿದ ಉತ್ತರ ಕೊರಿಯಾ

ಸೋಲ್ (ಎಪಿ): ಉತ್ತರ ಕೊರಿಯಾ ತಂಡ 2022ರ ವಿಶ್ವ ಕಪ್ ಫುಟ್‌ಬಾಲ್‌ನ ಅರ್ಹತಾ ಟೂರ್ನಿಯಲ್ಲಿ ಪಾಲ್ಗೊಳ್ಳದೇ ಇರಲು ನಿರ್ಧರಿಸಿದೆ ಎಂದು ಏಷ್ಯನ್ ಫುಟ್‌ಬಾಲ್ ಕಾನ್ಫೆಡರೇಷನ್ (ಎಎಫ್‌ಸಿ) ಭಾನುವಾರ ತಿಳಿಸಿದೆ.

ಟೂರ್ನಿಯಿಂದ ಹಿಂದೆ ಸರಿಯಲು ಕಾರಣವೇನು ಎಂದು ಉತ್ತರ ಕೊರಿಯಾ ತಿಳಿಸಿಲ್ಲ. ಕೋವಿಡ್‌ನಿಂದಾಗಿ ಉಂಟಾಗಿರುವ ವಿಷಮ ಸ್ಥಿತಿಯೇ ಇದಕ್ಕೆ ಕಾರಣ ಎಂದು ದಕ್ಷಿಣ ಕೊರಿಯಾದ ಮಾಧ್ಯಮಗಳು ವರದಿ ಮಾಡಿವೆ.

ಅರ್ಹತಾ ಟೂರ್ನಿ 2022ರ ನವೆಂಬರ್ ಹಾಗೂ ಡಿಸೆಂಬರ್‌ನಲ್ಲಿ ಕತಾರ್‌ನಲ್ಲಿ ನಡೆಯಲಿದೆ. ಕೋವಿಡ್‌ನಿಂದಾಗಿ 2019ರಿಂದ ಏಷ್ಯಾಮಟ್ಟದಲ್ಲಿ ಯಾವುದೇ ಅರ್ಹತಾ ಟೂರ್ನಿ ನಡೆಯಲಿಲ್ಲ. ಪ್ರಯಾಣವನ್ನು ಕಡಿಮೆ ಮಾಡುವ ಉದ್ದೇಶದಿಂದ ಪಂದ್ಯಗಳನ್ನು ಆಯಾ ವಲಯದಲ್ಲೇ ನಡೆಸಲು ಎಎಫ್‌ಸಿ ನಿರ್ಧರಿಸಿದೆ. ಈ ವೇಳಾಪಟ್ಟಿಯ ಪ್ರಕಾರ ತುರ್ಕಮೆನಿಸ್ಥಾನ, ಲೆಬನಾನ್,ಶ್ರೀಲಂಕಾ ಮತ್ತು ಉತ್ತರ ಕೊರಿಯಾದ 'ಎಚ್' ಗುಂಪಿನ ಪಂದ್ಯಗಳು ದಕ್ಷಿಣ ಕೊರಿಯಾದಲ್ಲಿ ಜೂನ್ 3ರಿಂದ 15ರ ವರೆಗೆ ನಡೆಯಲಿವೆ.

ಮೂರು ಪಂದ್ಯಗಳು ಬಾಕಿ ಇರುವಂತೆ ಉತ್ತರ ಕೊರಿಯಾ ತಂಡ ಗುಂಪು ಹಂತದ ಪಾಯಿಂಟ್ಸ್ ಪಟ್ಟಿಯ ನಾಲ್ಕನೇ ಸ್ಥಾನದಲ್ಲಿದೆ.

ತೇಜಸ್ವಿನ್‌ಗೆ ಚಿನ್ನದ ಪದಕ

ನವದೆಹಲಿ (ಪಿಟಿಐ): ಭಾರತದ ಹೈಜಂಪ್ ಪಟು ತೇಜಸ್ವಿನ್ ಶಂಕರ್ ಅವರು ಅಮೆರಿಕದ ಮನ್‌ಹ್ಯಾಟನ್‌ನಲ್ಲಿ ನಡೆಯುತ್ತಿರುವ 'ದಿ ಬಿಗ್ 12' ಹೊರಾಂಗಣ ಟ್ರ್ಯಾಕ್ ಮತ್ತು ಫೀಲ್ಡ್ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನದ ಪದಕ ಗಳಿಸಿದ್ದಾರೆ.

ಕೆನ್‌ಜಸ್ ಸ್ಟೇಟ್ ವಿಶ್ವವಿದ್ಯಾಲಯವನ್ನು ಪ್ರತಿನಿಧಿಸುತ್ತಿರುವ ತೇಜಸ್ವಿನ್ ಶನಿವಾರ ನಡೆದ ಸ್ಪರ್ಧೆಯಲ್ಲಿ 2.28 ಮೀಟರ್ಸ್ ಸಾಧನೆ ಮಾಡಿದರು. ಓಕ್ಲಹೊಮಾ ವಿಶ್ವವಿದ್ಯಾಲಯದ ವೆರ್ನನ್ ಟರ್ನರ್ (2.25 ಮೀ) ಮತ್ತು ಟೆಕ್ ವಿಶ್ವವಿದ್ಯಾಲಯದ ಜೆಕ್ವನ್ ಹೊಗಾನ್ (2.11 ಮೀ) ಕ್ರಮವಾಗಿ ಬೆಳ್ಳಿ ಮತ್ತು ಕಂಚಿನ ಪದಕ ಗಳಿಸಿದರು.

ಇದು ಈ ಬಾರಿ ತೇಜಸ್ವಿನ್ ಅವರ ಶ್ರೇಷ್ಠ ಸಾಧನೆಯಾಗಿದೆ. ಆದರೆ ವೈಯಕ್ತಿಕ ಗರಿಷ್ಠ ಸಾಧನೆಗಿಂತ ಒಂದು ಸೆಂಟಿಮೀಟರ್ ಕಡಿಮೆಯಾಗಿದೆ. 2018ರಲ್ಲಿ 2.20 ಮೀಟರ್ಸ್ ಎತ್ತರ ಜಿಗಿದು ಅವರು ರಾಷ್ಟ್ರೀಯ ದಾಖಲೆ ನಿರ್ಮಿಸಿದ್ದರು. 2019ರಲ್ಲೂ ತೇಜಸ್ವಿನ್ ಚಿನ್ನ ಗೆದ್ದಿದ್ದರು. ಕೋವಿಡ್‌ನಿಂದಾಗಿ ಕಳೆದ ವರ್ಷ ಕೂಟ ನಡೆದಿರಲಿಲ್ಲ. 22 ವರ್ಷದ ತೇಜಸ್ವಿನ್ 2017ರಿಂದ ಅಮೆರಿಕದದಲ್ಲಿದ್ದಾರೆ.

ದಿಗ್ಗಜ ಆಟಗಾರ ಸಚಿನ್ ತೆಂಡೂಲ್ಕರ್ ಹೇಳಿಕೆ

ದೇಹಕ್ಕೆ ಗಾಯವಾದಾಗ ವೈದ್ಯರು ಚಿಕಿತ್ಸೆ ನೀಡುತ್ತಾರೆ. ಅದೇ ರೀತಿ ಮಾನಸಿಕ ತೊಂದರೆಗೊಳಗಾದಗಲೂ ಚಿಕಿತ್ಸೆ ಪಡೆಯುವುದು ಸಹಜ ಪ್ರಕ್ರಿಯೆ ಎಂದರು ಸಚಿನ್

ಮಾನಸಿಕ ಕ್ಷೋಭೆ ಅನುಭವಿಸಿದ್ದೆ

ನವದೆಹಲಿ (ಪಿಟಿಐ): ದಿಗ್ಗಜ ಬ್ಯಾಟ್ಸ್‌ಮನ್ ಸಚಿನ್ ತೆಂಡೂಲ್ಕರ್ ತಾವು ಭಾರತ ತಂಡದಲ್ಲಿ ಆಡುವ ಸಂದರ್ಭದಲ್ಲಿ ಸುಮಾರು ಒಂದು ದಶಕಕ್ಕೂ ಹೆಚ್ಚು ಕಾಲ ಮಾನಸಿಕವಾಗಿ ತೀವ್ರ ಕ್ಷೋಭೆಯನ್ನು ಅನುಭವಿಸಿದ್ದರಂತೆ.

'ಕ್ರೀಡೆಯಲ್ಲಿ ದೈಹಿಕವಾಗಿ ಸಿದ್ಧತೆ ಮಾಡುವುದರ ಜೊತೆಗೆ ಮಾನಸಿಕವಾಗಿಯೂ ತರಬೇತುಗೊಳ್ಳುವುದು ಅವಶ್ಯಕ ಎಂಬುದನ್ನು ನನ್ನ ಅನುಭವದಿಂದ ಕಲಿತೆ' ಎಂದು ಹೇಳಿದ್ದಾರೆ. ಅವರು ಅನ್‌ಅಕಾಡೆಮಿ ಆಯೋಜಿಸಿದ್ದ ಮಾನಸಿಕ ಆರೋಗ್ಯದ ಕುರಿತ ಸಂವಾದದಲ್ಲಿ ತಮ್ಮ ಅನುಭವ ಹಂಚಿಕೊಂಡರು.

'ನಾನು ಆಡುವ ಕಾಲಘಟ್ಟದಲ್ಲಿ ಸುಮಾರು 10–12 ವರ್ಷಗಳವರೆಗೆ ಅಪಾರ ಆತಂಕದ ಮನಃಸ್ಥಿತಿಯನ್ನು ಅನುಭವಿಸಿದ್ದೇನೆ. ಹಲವಾರು ರಾತ್ರಿಗಳನ್ನು ನಿದ್ದೆಯಿಲ್ಲದೇ ಕಳೆದಿದ್ದೇನೆ. ಆದರೆ ದಿನಗಳೆದಂತೆ ಮನಃಶಾಂತಿ, ನಿದ್ದೆಗಳು ನನ್ನ ಪೂರ್ವಾಭ್ಯಾಸದ ಭಾಗ ಎಂದು ನಂಬತೊಡಗಿದೆ. ಕಾಲಕ್ರಮೇಣ ಪರಿಸ್ಥಿತಿ ಸುಧಾರಿಸಿತು. ನೆಮ್ಮದಿ ಲಭಿಸತೊಡಗಿತು. ಆದ್ದರಿಂದ ಸ್ವಯಂ ಸ್ವೀಕೃತಿ ಮುಖ್ಯ' ಎಂದು ಹೇಳಿದರು.



ಸಚಿನ್ ತೆಂಡೂಲ್ಕರ್

'ಮನಸ್ಸನ್ನು ಉಲ್ಲಸಿತವಾಗಿಡಲು ಕೆಲವು ಚಟುವಟಿಕೆಗಳಲ್ಲಿ ತೊಡಗಿಸಿಕೊಂಡೆ. ಚಹಾ ತಯಾರಿಸುವುದು, ಬಟ್ಟೆ ಇಸ್ತ್ರಿ ಮಾಡುವುದು. ಪಂದ್ಯಕ್ಕೆ ತೆರಳುವ ಮುನ್ನಾದಿನವೇ ನನ್ನ ಕಿಟ್ ಸಿದ್ಧಗೊಳಿಸಿಕೊಳ್ಳುತ್ತಿದ್ದೆ. ಇದೆಲ್ಲವನ್ನೂ ಅಣ್ಣ ಕಲಿಸಿಕೊಟ್ಟರು. ಇದೇ ರೂಢಿಯನ್ನು ನನ್ನ ವೃತ್ತಿಜೀವನದ ಕೊನೆಯ ಪಂದ್ಯದವರೆಗೂ ಮುಂದುವರಿಸಿದ್ದೆ' ಎಂದು 48 ವರ್ಷದ ಸಚಿನ್ ಹೇಳಿದರು.

ಕೋಚ್ ತರಬೇತಿ ಕೌಶಲ: ಪಿ.ವಿ.ಸಿಂಧು ಮೆಚ್ಚುಗೆ ನುಡಿ

'ಅಭ್ಯಾಸಕ್ಕೆ ಪಂದ್ಯದ್ದೇ ವಾತಾವರಣ'

ನವದೆಹಲಿ (ಪಿಟಿಐ): ಒಲಿಂಪಿಕ್ಸ್‌ಗೆ ಆಯ್ಕೆಯಾಗಿರುವ ಭಾರತದ ಬ್ಯಾಡ್ಮಿಂಟನ್ ಪಟುಗಳು ಇತ್ತೀಚೆಗೆ ಮೂರು ಟೂರ್ನಿಗಳು ರದ್ದಾದ ಕಾರಣ ಬೇಸರಗೊಂಡಿದ್ದಾರೆ. ಸ್ಪರ್ಧೆಗಳಲ್ಲಿ ಪಾಲ್ಗೊಳ್ಳದೇ ಕೂಟಕ್ಕೆ ತೆರಳುವುದು ಹೇಗೆ ಎಂಬ ಚಿಂತೆಯಲ್ಲಿದ್ದಾರೆ. ಆದರೆ ಪಿ.ವಿ.ಸಿಂಧು ಮಾತ್ರ ನಿರಾಳವಾಗಿದ್ದಾರೆ. ತರಬೇತಿ ಸಂದರ್ಭದಲ್ಲಿ ಸ್ಪರ್ಧೆಯ ವಾತಾವರಣವನ್ನೇ ಸೃಷ್ಟಿಸಲಾಗುತ್ತಿದೆ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

ಕೊರಿಯಾದ ಪಾರ್ಕ್ ತೇ ಸ್ಯಾಂಗ್ ಅವರ ಬಳಿ ಸಿಂಧು ತರಬೇತಿ ಪಡೆಯುತ್ತಿದ್ದಾರೆ. ಪ್ರತಿಯೊಬ್ಬ ಆಟಗಾರರಿಗೆ ಅವರದೇ ಆದ ಶೈಲಿ ಇದೆ. ತಾಯ್ ಜು ಯಿಂಗ್ ಅವರ ರೀತಿಯಂತೆ ರಚನಾಕ್ ಇಂಟನಾನ್ ಆಡುವುದಿಲ್ಲ. ಆದರೆ ಯಾವುದೇ ಆಟಗಾರ್ತಿಯರನ್ನು ಎದುರಿಸುವ ತಂತ್ರಗಳನ್ನು ಹೇಳಿಕೊಡಲು ಪಾರ್ಕ್ ಸಮರ್ಥರಾಗಿದ್ದಾರೆ ಎಂದು ಸಿಂಧು ಅಭಿಪ್ರಾಯಪಟ್ಟರು.

ಕೋವಿಡ್–19 ಏರುಗತಿಯಲ್ಲಿ ಸಾಗುತ್ತಿರುವುದರಿಂದ ಭಾರತ, ಮಲೇಷ್ಯಾ ಮತ್ತು ಸಿಂಗಪುರದಲ್ಲಿ ಓಪನ್ ಟೂರ್ನಿಗಳನ್ನು ವಿಶ್ವ ಬ್ಯಾಡ್ಮಿಂಟನ್ ಫೆಡರೇಷನ್ ರದ್ದುಗೊಳಿಸಿತ್ತು. ಒಲಿಂಪಿಕ್ಸ್‌ಗೂ ಮುನ್ನ ನಡೆಯಬೇಕಾಗಿದ್ದ ಪ್ರಮುಖ ಟೂರ್ನಿಗಳು ಆಗಿದ್ದವು ಇವು. ಇದರ ಬಗ್ಗೆ ಪ್ರತಿಕ್ರಿಯಿಸಿದ ಸಿಂಧು 'ಸಿಂಗಪುರ ಓಪನ್ ಟೂರ್ನಿಯೂ ರದ್ದಾದ ಕಾರಣ ಒಲಿಂಪಿಕ್ಸ್‌ಗೆ ಮುನ್ನ ಟೂರ್ನಿಗಳೇ ಇಲ್ಲ ಎಂದಾಗಿದೆ.

ಪಿ.ವಿ ಸಿಂಧು – ಪಿಟಿಐ ಚಿತ್ರ

ಅದರ ಬಗ್ಗೆ ಹೆಚ್ಚು ಯೋಚಿಸದೆ ಬೇರೆ ಬೇರೆ ಆಟಗಾರ್ತಿಯರ ಜೊತೆ ಪಂದ್ಯ ಆಡುತ್ತಿದ್ದೇನೆ. ಕೋಚ್ ನನ್ನ ಬೆನ್ನಿಗಿದ್ದಾರೆ' ಎಂದರು.

ಒಲಿಂಪಿಕ್ಸ್‌ಗೆ ಆಯ್ಕೆಯಾಗಿರುವ ಇತರ ಆಟಗಾರರ ಜೊತೆ ಸಿಂಧು ಅಭ್ಯಾಸ ಮಾಡುತ್ತಿಲ್ಲ. ತೆಲಂಗಾಣದ ಗಚ್ಚಿಬೌಳಿ ಕ್ರೀಡಾಂಗಣದಲ್ಲಿ ಅಭ್ಯಾಸದಲ್ಲಿ ತೊಡಗಿರುವ ಅವರು ಸುಚಿತ್ರಾ ಅಕಾಡೆಮಿಯಲ್ಲಿ ಫಿಟ್‌ನೆಸ್ ತರಬೇತಿ ಪಡೆಯುತ್ತಿದ್ದಾರೆ.

'ಟೂರ್ನಿಗಳು ನಡೆದರೆ ಕೋವಿಡ್‌ನ ಆತಂಕ ಇದ್ದೇ ಇರುತ್ತದೆ. ಯಾಕೆಂದರೆ ಕೊರೊನಾ ವೈರಸ್ ಯಾವ ರೀತಿ ಆಕ್ರಮಣ ಮಾಡುತ್ತದೆ ಎಂದು ಹೇಳಲಾಗುವುದಿಲ್ಲ. ಟೂರ್ನಿಗಳನ್ನು ರದ್ದು ಮಾಡಿದ್ದರಿಂದ ಕ್ರೀಡಾಪಟುಗಳಿಗೆ ಬೇಸರವಾಗಿದೆ ನಿಜ. ಆದರೆ ಜನರ ಸುರಕ್ಷತೆಯ ದೃಷ್ಟಿಯಿಂದ ಇದು ಸರಿಯಾದ ನಿರ್ಧಾರ. ಆಯೋಜಕರು ತುಂಬ ಕಾಳಜಿ ವಹಿಸಿ ಕ್ರೀಡಾಪಟುಗಳನ್ನು ಬಯೊಬಬಲ್‌ನಲ್ಲಿ ಇರಿಸುತ್ತಾರೆ. ಆದರೂ ನಮ್ಮ ಸುರಕ್ಷತೆಯ ಬಗ್ಗೆ ನಾವೇ ಯೋಚಿಸಬೇಕು' ಎಂದು ಸಿಂಧು ಅಭಿಪ್ರಾಯಪಟ್ಟರು.

ಫಿಕ್ಸಿಂಗ್ ವೇಳೆ ಬುದ್ಧಿ ಇರಲಿಲ್ಲವೇ?

ಲಂಡನ್ (ಪಿಟಿಐ): 'ಅಂದು ಪಂದ್ಯ ಫಿಕ್ಸಿಂಗ್ ಮಾಡುವಾಗ ನಿಮ್ಮ ಬುದ್ಧಿ ಎಲ್ಲಿ ಹೋಗಿತ್ತು. ಈಗ ತೋರಿಸುತ್ತಿರುವ ಜಾಣತನ ಆಗ ಬಳಸಬೇಕಿತ್ತು'– ಇಂಗ್ಲೆಂಡ್ ಕ್ರಿಕೆಟ್ ತಂಡದ ಮಾಜಿ ನಾಯಕ ಮೈಕಲ್ ವಾನ್ ಅವರು ಪಾಕಿಸ್ತಾನದ ಮಾಜಿ ಆಟಗಾರ ಸಲ್ಮಾನ್ ಭಟ್‌ಗೆ ನೀಡಿರುವ ತಿರುಗೇಟು ಇದು.

ಈಚೆಗೆ ವಾನ್ ಅವರು 'ನ್ಯೂಜಿಲೆಂಡ್ ತಂಡದ ಕೇನ್ ವಿಲಿಯಮ್ಸನ್ ಮತ್ತು ಭಾರತ ತಂಡದ ನಾಯಕ ವಿರಾಟ್ ಕೊಹ್ಲಿ ಶ್ರೇಷ್ಠ ಆಟಗಾರರು. ವಿರಾಟ್ ಅತಿ ಹೆಚ್ಚು ಅಭಿಮಾನಿಗಳನ್ನು ಹೊಂದಿದ್ದಾರೆ. ಜಾಹೀರಾತುಗಳಿಂದ ಅಪಾರ ಹಣವನ್ನೂ ಗಳಿಸುತ್ತಿದ್ದಾರೆ. ಕೇನ್ ಭಾರತದಲ್ಲಿ ಜನಿಸಿದ್ದರೆ ಕೊಹ್ಲಿಯನ್ನೂ ಮೀರಿಸುತ್ತಿದ್ದರು' ಎಂದಿದ್ದರು.

ಇದಕ್ಕೆ ಪ್ರತಿಕ್ರಿಯಿಸಿದ್ದ ಸಲ್ಮಾನ್, 'ಕೊಹ್ಲಿ 70 ಶತಕ ಹೊಡೆದಿದ್ದಾರೆ. ಐಸಿಸಿ ರ್‍ಯಾಂಕಿಂಗ್‌ನಲ್ಲಿ ಅಗ್ರಪಟ್ಟ ಗಳಿಸಿದ್ದಾರೆ. ವಾನ್ ಏಕದಿನ ಕ್ರಿಕೆಟ್‌ನಲ್ಲಿ ಒಂದೂ ಶತಕ ಗಳಿಸಿಲ್ಲ. ಇನ್ನೊಬ್ಬರ ಬಗ್ಗೆ ಮಾತನಾಡುವುದು ತಮಾಷೆಯ ಸಂಗತಿ' ಎಂದಿದ್ದರು. ಇದು ವಾನ್ ಅವರನ್ನು ಕೆರಳಿಸಿತ್ತು. 10ವರ್ಷಗಳ ಹಿಂದೆ ಸಲ್ಮಾನ್ ಮ್ಯಾಚ್ ಫಿಕ್ಸಿಂಗ್ ಹಗರಣದಲ್ಲಿ ಸಿಕ್ಕಿಬಿದ್ದಿದ್ದರು.

ಇಟಾಲಿಯನ್ ಓಪನ್ ಪ್ರಶಸ್ತಿಯೊಂದಿಗೆ ರಫೆಲ್ ನಡಾಲ್ –ಎಎಫ್‌ಪಿ ಚಿತ್ರ

ನಡಾಲ್‌ಗೆ ಪ್ರಶಸ್ತಿ

ರೋಮ್ (ಎಎಫ್‌ಪಿ): ಸರ್ಬಿಯಾದ ನೊವಾಕ್ ಜೊಕೊವಿಚ್ ವಿರುದ್ಧ 7-5, 1-6, 6-3ರ ಜಯ ಗಳಿಸಿದ ಸ್ಪೇನ್‌ನ ರಫೆಲ್ ನಡಾಲ್ ಅವರು ಇಟಾಲಿಯನ್ ಓಪನ್ ಟೆನಿಸ್ ಟೂರ್ನಿಯ ಪ್ರಶಸ್ತಿ ಗೆದ್ದುಕೊಂಡರು. 'ಎಟಿಪಿ ಮಾಸ್ಟರ್ಸ್ 1000' ಟೂರ್ನಿಯಲ್ಲಿ 36ನೇ ಪ್ರಶಸ್ತಿ ಗೆದ್ದು ನಡಾಲ್ ಅವರು ಜೊಕೊವಿಚ್ ದಾಖಲೆಯನ್ನು ಸಮಗಟ್ಟಿದರು.

ಮಹಿಳೆಯರ ವಿಭಾಗದ ಫೈನಲ್‌ನಲ್ಲಿ ಪೋಲೆಂಡ್‌ನ ಇಗಾ ಸ್ವಿಯಾಟೆಕ್ 6–0, 6–0ರಲ್ಲಿ ಕರೊಲಿನಾ ಪ್ಲಿಸ್ಕೋವ ಎದುರು ಗೆಲುವು ಸಾಧಿಸಿದರು.

ಹಸಿದವರತ್ತ ಕ್ರಿಕೆಟಿಗರ ನೆರವಿನ ಹಸ್ತ

ಬೆಂಗಳೂರು: ಕೆನರಾ ಬ್ಯಾಂಕ್ ಕ್ರಿಕೆಟ್ ತಂಡದ ಆಟಗಾರ ರಾಜೂ ಭಟ್ಕಳ ಅವರು ಕೋವಿಡ್ ಲಾಕ್ ಡೌನ್‌ನಲ್ಲಿ ನಿರ್ಗತಿಕರಾದವರಿಗೆ ಆಹಾರ ಒದಗಿಸುತ್ತಿದ್ದಾರೆ.

'ನಾನು ಮಲ್ಲೇಶ್ವರಂ 15ನೇ ಕ್ರಾಸ್‌ನಲ್ಲಿರುವ ಕೆನರಾ ಬ್ಯಾಂಕ್ ಉದ್ಯೋಗಿ. ಆರ್‌.ಟಿ.ನಗರದಲ್ಲಿರುವ ಮನೆಯಿಂದ ಪ್ರತಿದಿನ ಹೋಗುವಾಗ ದಾರಿಯಲ್ಲಿ ಹಲವರನ್ನು ನೋಡುತ್ತಿದ್ದೆ. ಕಟ್ಟಡ ನಿರ್ಮಾಣ ಕಾರ್ಯಗಳಲ್ಲಿ ದುಡಿಯುವ ದಿನಗೂಲಿಗಳು, ನಿರ್ಗತಿಕರು ಫನ್‌ವರ್ಲ್ಡ್ (ದೂರ ದರ್ಶನ ಹತ್ತಿರ) ಸಮೀಪ ರಸ್ತೆ ಬದಿಯಲ್ಲಿ, ಕಂಟೋನ್ಮೆಂಟ್ ರೈಲ್ವೆ ಸ್ಟೇಷನ್‌ನಲ್ಲಿ ಕೆಲವರು ತಮ್ಮ ಊರುಗಳಿಗೆ ಹೋಗಲಾರದೆ ಹತಾಶರಾಗಿ ಕೂತಿರುವುದನ್ನು ನೋಡುತ್ತಿದ್ದೆ. ಹೇಗಾದರೂ ಸಹಾಯ ಮಾಡಬೇಕು ಎಂದುಕೊಂಡು ಪ್ರತಿನಿತ್ಯ ಅವರಿಗೆ ಮನೆ ಸಮೀಪದ ಹೋಟೆಲ್‌ನಿಂದ 40 ಆಹಾರದ ಪೊಟ್ಟಣಗಳನ್ನು ತೆಗೆದುಕೊಂಡು ಹೋಗಿ ಕೊಡುತ್ತಿದ್ದೇನೆ. ಪತ್ನಿ ಶರಣ್ಯಾ ಕಲ್ಮಠ ಕೂಡ ಸಹಾಯ ಮಾಡುತ್ತಿದ್ದಾರೆ' ಎಂದು ರಾಜೂ 'ಪ್ರಜಾವಾಣಿ'ಗೆ ತಿಳಿಸಿದರು.

ರಾಜೂ ಭಟ್ಕಳ

'ನಾನು ಆರಂಭದಲ್ಲಿ ಕಡಿಮೆ ಸಂಖ್ಯೆಯಲ್ಲಿ ಪೊಟ್ಟಣಗಳನ್ನು ಕೊಂಡೊಯ್ಯುತ್ತಿದ್ದೆ. ಕೆನರಾಬ್ಯಾಂಕ್ ತಂಡದ ನನ್ನ ಸ್ನೇಹಿತರಾದ ಭರತ್ ಚಿಪ್ಲಿ, ದೀಪಕ್ ಚೌಗುಲೆ, ಕೆ.ವಿ. ಸಿದ್ಧಾರ್ಥ್, ಶ್ರೀನಿವಾಸ್ ಮೂರ್ತಿ, ಸಿ. ರಘು, ಜಿ. ಚೈತ್ರಾ, ಕೆ.ಪಿ. ಅಪ್ಪಣ್ಣ, ಕೆ.ಬಿ. ಪವನ್, ಜಿ. ಬಾಲಾಜಿ, ಎಂ.ಜಿ. ನವೀನ್, ಮೊಹಮ್ಮದ್ ಸೈಫ್, ಎನ್.ಸಿ. ಅಯ್ಯಪ್ಪ, ಪಲ್ಲವಕುಮಾರ್ ದಾಸ್, ಜಿ. ಬಾಲಾಜಿ ಅವರೆಲ್ಲರೂ ನೆರವು ನೀಡುತ್ತಿದ್ದಾರೆ. ಲಾಕ್‌ಡೌನ್ ಆರಂಭವಾದಾಗಿನಿಂದಲೂ ಈ ಕೆಲಸ ಮಾಡ್ತಾ ಇದ್ದೇನೆ. ಇಲ್ಲಿಯವರೆಗೆ 350ಕ್ಕಿಂತ ಹೆಚ್ಚು ಜನರಿಗೆ ಕೊಟ್ಟಿದ್ದೇವೆ. ಸಹೋದ್ಯೋಗಿಗಳಾದ ರಾಜೇಶ್ವರಿ ಮತ್ತು ಜಯಲಕ್ಷ್ಮೀ ಅವರ ಸಹಾಯವೂ ಇದೆ. ಓಡಾಟಕ್ಕೆ ನಿರ್ಬಂಧ ಇರುವುದರಿಂದ ಬಹಳಷ್ಟು ಜನರಿಗೆ ಆಹಾರ ಒದಗಿಸಲು ಸಾಧ್ಯವಾಗುತ್ತಿಲ್ಲ. ಕಚೇರಿಗೆ ಹೋಗುವ ಮಾರ್ಗದಲ್ಲಿ ಮಾತ್ರ ಇದು ಸಾಧ್ಯವಾಗುತ್ತಿದೆ' ಎಂದು ರಾಜೂ ಹೇಳಿದರು.

ಆಲ್‌ರೌಂಡರ್ ರಾಜೂ ಕರ್ನಾಟಕದ ಪರ 2 ಪ್ರಥಮ ದರ್ಜೆ ಮತ್ತು 21 ಲಿಸ್ಟ್ ಎ ಪಂದ್ಯ ಆಡಿದ್ದಾರೆ.

ಪೆಟ್ರೋಲ್, ಡೀಸೆಲ್ ದರ ಹೆಚ್ಚಳ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳು ಭಾನುವಾರ ಪೆಟ್ರೋಲ್ ದರವನ್ನು ಲೀಟರಿಗೆ 24 ಪೈಸೆ ಮತ್ತು ಡೀಸೆಲ್ ದರವನ್ನು ಲೀಟರಿಗೆ 27 ಪೈಸೆಯಷ್ಟು ಹೆಚ್ಚಿಸಿವೆ. ಇದರಿಂದಾಗಿ ದೆಹಲಿಯಲ್ಲಿ ಪೆಟ್ರೋಲ್ ದರ ಲೀಟರಿಗೆ ₹ 92.98 ಮತ್ತು ಡೀಸೆಲ್ ದರ ₹ 83.22ಕ್ಕೆ ಏರಿಕೆ ಆಗಿದೆ. ಮುಂಬೈನಲ್ಲಿ ಪೆಟ್ರೋಲ್ ₹ 98.88 ಮತ್ತು ಡೀಸೆಲ್ ₹ 90.49ಕ್ಕೆ ತಲುಪಿದೆ. ಬೆಂಗಳೂರಿನಲ್ಲಿ ಪೆಟ್ರೋಲ್ ದರ ಲೀಟರಿಗೆ ₹95.66 ಮತ್ತು ಡೀಸೆಲ್ ದರ ₹ 88.22ಕ್ಕೆ ತಲುಪಿದೆ.

ಮೇ 4ರಿಂದ ಇಲ್ಲಿಯವರೆಗೆ ಪೆಟ್ರೋಲ್ ದರ ₹ 2.19 ಮತ್ತು ಡೀಸೆಲ್ ದರ ₹ 2.49ರಷ್ಟು ಏರಿಕೆ ಆದಂತಾಗಿದೆ. ಮಧ್ಯಪ್ರದೇಶ, ರಾಜಸ್ಥಾನ ಮತ್ತು ಮಹಾರಾಷ್ಟ್ರ ರಾಜ್ಯಗಳ ಹಲವು ನಗರಗಳಲ್ಲಿ ಪೆಟ್ರೋಲ್ ದರವು ಈಗಾಗಲೇ ₹ 100ರ ಗಡಿ ದಾಟಿದೆ.

ಏಪ್ರಿಲ್‌ನಲ್ಲಿ ₹ 46,620 ಕೋಟಿ ಮೌಲ್ಯದ ಚಿನ್ನ ಆಮದು

ನವದೆಹಲಿ (ಪಿಟಿಐ): ಚಿನ್ನದ ಆಮದು ಮೌಲ್ಯವು 2020ರ ಏಪ್ರಿಲ್‌ನಲ್ಲಿ ₹ 21.61 ಕೋಟಿ ಇದ್ದಿದ್ದು 2021ರ ಏಪ್ರಿಲ್‌ನಲ್ಲಿ ₹ 46,620 ಕೋಟಿಗಳಿಗೆ ಏರಿಕೆ ಕಂಡಿದೆ ಎಂದು ಕೇಂದ್ರ ವಾಣಿಜ್ಯ ಸಚಿವಾಲಯ ಮಾಹಿತಿ ನೀಡಿದೆ.

ಚಿನ್ನಕ್ಕೆ ದೇಶಿ ಬೇಡಿಕೆ ಹೆಚ್ಚಾಗಿರುವುದೇ ಇದಕ್ಕೆ ಕಾರಣ ಎಂದು ಸಚಿವಾಲಯ ತಿಳಿಸಿದೆ. ಚಿನ್ನದ ಆಮದು ಹೆಚ್ಚಳದಿಂದಾಗಿ ಚಾಲ್ತಿ ಖಾತೆ ಕೊರತೆ ಅಂತರವು ₹ 50,024 ಕೋಟಿಗಳಿಂದ ₹ 1.17 ಲಕ್ಷ ಕೋಟಿಗೆ ಏರಿದೆ.

ಬೆಳ್ಳಿ ಆಮದು ಕಳೆದ ವರ್ಷದ ಏಪ್ರಿಲ್‌ಗೆ ಹೋಲಿಸಿದರೆ ಈ ವರ್ಷದ ಏಪ್ರಿಲ್‌ನಲ್ಲಿ ಶೇ 88.53ರಷ್ಟು ಇಳಿಕೆ ಆಗಿದೆ.

ಕೋವಿಡ್–19 ಸಾಂಕ್ರಾಮಿಕದ ಎರಡನೇ ಅಲೆಯ ಕಾರಣದಿಂದಾಗಿ ಮುಂಬರುವ ತಿಂಗಳುಗಳಲ್ಲಿ ಚಿನ್ನದ ಬೇಡಿಕೆಯ ಮೇಲೆ ಪರಿಣಾಮ ಉಂಟಾಗುವ ಸಾಧ್ಯತೆ ಇದೆ ಎಂದು ಉದ್ಯಮ ವಲಯದ ತಜ್ಞರು ಹೇಳಿದ್ದಾರೆ.

ಸಂಕಷ್ಟದಲ್ಲಿರುವವರ 'ಆಪ್ತಮಿತ್ರ' ಈ ವಿಮೆಗಳು!

ಹಣಕಾಸು ಸಾಕ್ಷರತೆ

ಪ್ರಮೋದ್ ಬಿ.ಪಿ.

ಕೋವಿಡ್-19ರ ಎರಡನೆಯ ಅಲೆಯಿಂದಾಗಿ ಸಾವು-ನೋವು ಅಪಾರ ಪ್ರಮಾಣದಲ್ಲಿ ವರದಿಯಾಗುತ್ತಿದೆ. ಕಣ್ಣಿಗೆ ಕಾಣದ ವೈರಾಣುವಿನ ದಾಳಿಯಿಂದ ಪ್ರೀತಿಪಾತ್ರರನ್ನು ಕಳೆದುಕೊಳ್ಳುವುದು ಕುಟುಂಬಗಳ ಪಾಲಿಗೆ ತುಂಬಲಾರದ ನಷ್ಟ. ಆದರೆ ಇಂತಹ ಸಂಕಷ್ಟದ ಪರಿಸ್ಥಿತಿಯಲ್ಲಿ ನೊಂದವರಿಗೆ ಆರ್ಥಿಕ ಬಲ ಸಿಕ್ಕರೆ ಒಂದಿಷ್ಟು ಸಮಸ್ಯೆಗಳು ನೀಗಬಹುದು. ಜನಧನ ಬ್ಯಾಂಕ್ ಖಾತೆ ಹೊಂದಿರುವವರಿಗೆ ಮತ್ತು ಕಾರ್ಮಿಕರ ಭವಿಷ್ಯ ನಿಧಿ (ಇಪಿಎಫ್) ಖಾತೆ ಹೊಂದಿರುವವರಿಗೆ ಕೆಲವು ವಿಮೆಗಳು ಸಿಗುತ್ತವೆ. ದುರಿತ ಕಾಲದಲ್ಲಿ ನೆರವಿಗೆ ಬರುವ ಈ ವಿಮೆಗಳ ಬಗ್ಗೆ ಎಲ್ಲರೂ ತಿಳಿಯಬೇಕಾದ ಮಾಹಿತಿ ಇಲ್ಲಿದೆ.

ಜನಧನ ಖಾತೆ ಜತೆ PMJJBY ಯೋಜನೆ ಇದ್ದರೆ ಸಿಗುತ್ತದೆ ₹ 2 ಲಕ್ಷ ವಿಮೆ: 2014ರಲ್ಲಿ ಜನಧನ ಯೋಜನೆ ಜಾರಿಗೊಳಿಸಿದಾಗ 18 ವರ್ಷದಿಂದ 50 ವರ್ಷ ವಯಸ್ಸಿನವರೆಗಿನ ಪ್ರತಿ ಖಾತೆದಾರನಿಗೂ ಪ್ರಧಾನಮಂತ್ರಿ ಜೀವನ್ ಜ್ಯೋತಿ ವಿಮಾ ಯೋಜನೆ (PMJJBY) ಒದಗಿಸಲಾಗಿತ್ತು.

ಆರಂಭದಲ್ಲಿ ₹ 330 ಪ್ರೀಮಿಯಂ ಕಡಿತ ಮಾಡಿಕೊಂಡು ₹ 2 ಲಕ್ಷಗಳ ಜೀವ ವಿಮೆ ಒದಗಿಸಲಾಗಿತ್ತು. ನಂತರ ಪ್ರತಿ ವರ್ಷ ಜನಧನ ಖಾತೆದಾರನ ಖಾತೆಯಿಂದ ಸ್ವಯಂಚಾಲಿತವಾಗಿ ಪ್ರಧಾನಮಂತ್ರಿ ಜೀವನ್ ಜ್ಯೋತಿ ವಿಮಾ ಯೋಜನೆಗೆ ₹ 330 ಪ್ರೀಮಿಯಂ ಕಡಿತಗೊಳಿಸಲಾಗುತ್ತಿತ್ತು. ಸದ್ಯದ ಮಾಹಿತಿಯ ಪ್ರಕಾರ, ಈ ವರ್ಷದ ಮಾರ್ಚ್ 31ರ ವೇಳೆಗೆ 10.27 ಕೋಟಿ ಜನರ ಪ್ರಧಾನಮಂತ್ರಿ ಜೀವನ್ ಜ್ಯೋತಿ ವಿಮೆಗಳು ಚಾಲ್ತಿಯಲ್ಲಿವೆ.

ಹಾಗಾಗಿ ನೆರೆಹೊರೆಯವರು, ಸಂಬಂಧಿಕರು ಅಥವಾ ಪರಿಚಯಸ್ಥರು ಕೋವಿಡ್ ಅಥವಾ ಯಾವುದೇ ರೋಗದಿಂದ ಮರಣ ಹೊಂದಿದಲ್ಲಿ, ಇನ್ಯಾವುದೇ ಕಾರಣದಿಂದ ಮೃತಪಟ್ಟಲ್ಲಿ ಒಮ್ಮೆ ಅವರ ಪಾಸ್‌ಬುಕ್, ಖಾತೆಯ ಜಮಾ–ಖರ್ಚಿನ ವಿವರಗಳನ್ನು ಪರಿಶೀಲಿಸಲು ಹೇಳಿ. ಸರಿಯಾದ ಸಮಯಕ್ಕೆ ವಿಮೆಯ ಪ್ರೀಮಿಯಂ ಮೊತ್ತ ₹ 330 ಕಡಿತಗೊಂಡಿದ್ದಲ್ಲಿ ಅವರಿಗೆ ₹ 2 ಲಕ್ಷ ವಿಮೆ ಪರಿಹಾರ ಸಿಗುತ್ತದೆ. ಸೂಕ್ತ ದಾಖಲೆಗಳನ್ನು ಸಂಬಂಧಪಟ್ಟ ಬ್ಯಾಂಕ್ ಅಥವಾ ವಿಮಾ ಕಂಪನಿಗೆ ಸಲ್ಲಿಸಿ 90 ದಿನಗಳ ಒಳಗಾಗಿ ವಿಮೆ ಕ್ಲೇಮ್ ಪಡೆಯಬಹುದು. ನೆನಪಿಡಿ, 55 ವರ್ಷ ವಯಸ್ಸಿನ ಒಳಗಿನವರಿಗೆ ಮಾತ್ರ ಈ ವಿಮೆ ಅನ್ವಯಿಸುತ್ತದೆ. ಇದು ಅವಧಿ ವಿಮೆ ಇದ್ದಂತೆ.

ಇಪಿಎಫ್ ಖಾತೆದಾರರಿಗೂ ಇದೆ ವಿಮೆ ನೆರವು: ಉದ್ಯೋಗಿಯು ಕಾರ್ಮಿಕರ ಭವಿಷ್ಯ ನಿಧಿಗೆ (ಇಪಿಎಫ್) ಸೇರ್ಪಡೆಗೊಂಡಾಗ ಉದ್ಯೋಗದಾತ ಸಂಸ್ಥೆ ನೀಡುವ ಇಪಿಎಫ್ ಪಾಲಿನಲ್ಲಿ ಒಂದಿಷ್ಟು ಮೊತ್ತ ಉದ್ಯೋಗಿಯ ಠೇವಣಿ ಆಧರಿತ ವಿಮೆಗೆ (Employee Deposit-Linked Insurance Scheme) ಸಂದಾಯವಾಗುತ್ತದೆ. ಈ ವಿಮೆ ₹ 2.5 ಲಕ್ಷದಿಂದ ಗರಿಷ್ಠ ₹ 7 ಲಕ್ಷದವರೆಗೆ ಕವರೇಜ್ ನೀಡುತ್ತದೆ. ಈ ವಿಮೆ ಮೊತ್ತ ಸಿಗಬೇಕು ಅಂದರೆ ಮೃತಪಡುವ ಸಂದರ್ಭದಲ್ಲಿ ಉದ್ಯೋಗಿ ಕೆಲಸದಲ್ಲಿದ್ದು, ಸಕಾಲಕ್ಕೆ ಇಪಿಎಫ್ ಕೊಡುಗೆ ಪಾವತಿಸಿರಬೇಕು. ಈ ಪರಿಹಾರ ಪಡೆಯಲು, ಮೃತ ವ್ಯಕ್ತಿಯ ಕುಟುಂಬ ದವರು ಸಂಬಂಧಪಟ್ಟ ಕಂಪನಿಯ ಮಾನವ ಸಂಪನ್ಮೂಲ ವಿಭಾಗವನ್ನು ಸಂಪರ್ಕಿಸಬೇಕು.

(ಲೇಖಕ ಸುವಿಷನ್ ಹೋಲ್ಡಿಂಗ್ಸ್ ಪ್ರೈ.ಲಿ.,ನ ಸಂಶೋಧನಾ ವಿಭಾಗದ ಮುಖ್ಯಸ್ಥ)

ಮಾರಾಟದ ಒತ್ತಡಕ್ಕೆ ಸಿಲುಕಿದ ಷೇರುಪೇಟೆ

ಮೇ 14ಕ್ಕೆ ಕೊನೆಗೊಂಡ ವಾರದಲ್ಲಿ ಷೇರುಪೇಟೆ ಏರಿಳಿತಗಳಿಂದ ಕೂಡಿತ್ತು. ಅಮೆರಿಕದ ಹಣದುಬ್ಬರ ಪ್ರಮಾಣದಲ್ಲಿ ಹೆಚ್ಚಳ, ಕೋವಿಡ್ ಲಸಿಕೆ ಪೂರೈಕೆಯಲ್ಲಿನ ವಿಳಂಬ, ಹೆಚ್ಚುತ್ತಿರುವ ಕೋವಿಡ್ ಪ್ರಕರಣಗಳು, ದೇಶದ ವಿವಿಧೆಡೆ ವಿಸ್ತರಣೆ ಆಗುತ್ತಿರುವ ಲಾಕ್‌ಡೌನ್ ಕ್ರಮಗಳು ಸೇರಿ ಹಲವು ಕಾರಣಗಳಿಂದಾಗಿ ಪೇಟೆಯಲ್ಲಿ ಅನಿಶ್ಚಿತ ವಾತಾವರಣ ಮನೆಮಾಡಿತ್ತು. ಗ್ರಾಹಕ ಬೆಲೆ ಆಧರಿಸಿದ ಹಣದುಬ್ಬರ ಸೂಚ್ಯಂಕ, ಕೈಗಾರಿಕಾ ಉತ್ಪಾದನೆ ಸೂಚ್ಯಂಕ, ತ್ರೈಮಾಸಿಕ ಫಲಿತಾಂಶಗಳಲ್ಲಿ ಕಂಪನಿಗಳ ನಿರೀಕ್ಷಿತ ಸಾಧನೆ ಸೇರಿ ಕೆಲವು ಪ್ರಮುಖ ಸಕಾರಾತ್ಮಕ ಅಂಶಗಳು ಕೂಡ ಹೂಡಿಕೆದಾರರ ಉತ್ಸಾಹ ಹೆಚ್ಚಿಸುವಲ್ಲಿ ವಿಫಲವಾದವು. ಪರಿಣಾಮವಾಗಿ, ಷೇರುಪೇಟೆಯು ಮಾರಾಟದ ಒತ್ತಡಕ್ಕೆ ಸಿಲುಕಿತು. ವಾರಾಂತ್ಯಕ್ಕೆ 48,732 ಅಂಶಗಳಲ್ಲಿ ವಹಿವಾಟು ಮುಗಿಸಿರುವ ಸೆನ್ಸೆಕ್ಸ್ ಶೇ 0.96ರಷ್ಟು ಕುಸಿದಿದೆ. 14,677 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿರುವ ನಿಫ್ಟಿ ಶೇ 0.98ರಷ್ಟು ಕುಸಿತ ಕಂಡಿದೆ. ವಲಯವಾರು ಪ್ರಗತಿಯಲ್ಲಿ ನಿಫ್ಟಿ ಲೋಹ ವಲಯ ಶೇ 4.5ರಷ್ಟು ಕುಸಿದಿದೆ. ಮಾಹಿತಿ ತಂತ್ರಜ್ಞಾನ ವಲಯ ಶೇ 2.6ರಷ್ಟು, ರಿಯಲ್ ಎಸ್ಟೇಟ್ ಶೇ 2.3ರಷ್ಟು ಇಳಿದಿವೆ. ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಮತ್ತು ಮಾಧ್ಯಮ ವಲಯ ಕ್ರಮವಾಗಿ ಶೇ 3.6ರಷ್ಟು ಮತ್ತು ಶೇ 2.3ರಷ್ಟು ಹೆಚ್ಚಳವಾಗಿವೆ. ಬಿಎಸ್‌ಇ ಮಿಡ್ ಕ್ಯಾಪ್ ಸೂಚ್ಯಂಕ ಶೇ 0.49ರಷ್ಟು ತಗ್ಗಿದೆ. ಜಿಂದಾಲ್ ಸ್ಟೀಲ್ ಮತ್ತು ಪವರ್, ಎಸ್‌ಎಐಎಲ್, ಇನ್ಫೊ ಎಡ್ಜ್ ಇಂಡಿಯಾ, ಚೋಳಮಂಡಲಂ ಇನ್ವೆಸ್ಟ್‌ಮೆಂಟ್ ಆ್ಯಂಡ್ ಫೈನಾನ್ಸ್, ನೆರೋಲ್ಯಾಕ್ ಪೇಂಟ್ಸ್ ಮತ್ತು ಅದಾನಿ ಎಂಟರ್‌ಪ್ರೈಸಸ್ ಕುಸಿದಿವೆ. ಭಾರತ್ ಹೆವಿ ಎಲೆಕ್ಟ್ರಿಕಲ್ಸ್, ಬ್ಯಾಂಕ್ ಆಫ್ ಇಂಡಿಯಾ, ಗ್ಲಾಂಡ್ ಫಾರ್ಮಾ, ಯುನಿಯನ್ ಬ್ಯಾಂಕ್ ಆಫ್ ಇಂಡಿಯಾ ಶೇ 8ರಿಂದ ಶೇ 17ರಷ್ಟು ಹೆಚ್ಚಳವಾಗಿವೆ. ಬಿಎಸ್‌ಇ ಲಾರ್ಜ್ ಕ್ಯಾಪ್ ಸೂಚ್ಯಂಕ ಶೇ 0.78ರಷ್ಟು ತಗ್ಗಿದೆ. ಜೆಎಸ್‌ಡಬ್ಲ್ಯು ಸ್ಟೀಲ್, ಗ್ರಾಸಿಮ್ ಇಂಡಸ್ಟ್ರೀಸ್, ಹಿಂಡಾಲ್ಕೋ ಇಂಡಸ್ಟ್ರೀಸ್, ಅದಾನಿ ಪೋರ್ಟ್ಸ್ ಇಳಿದಿವೆ. ಗೋದ್ರೇಜ್ ಕನ್ಸ್ಯೂಮರ್ ಪ್ರಾಡಕ್ಟ್ಸ್, ಟಾಟಾ ಮೋಟರ್ಸ್, ಏಷ್ಯನ್ಸ್ ಪೇಂಟ್ಸ್, ಸೀಮನ್ಸ್ ಮತ್ತು ಕೋಲ್ ಇಂಡಿಯಾ ಹೆಚ್ಚಳ ಕಂಡಿವೆ. ಬಿಎಸ್‌ಇ ಸ್ಮಾಲ್ ಕ್ಯಾಪ್ ಸೂಚ್ಯಂಕ ಬಹುತೇಕ ಯಥಾಸ್ಥಿತಿಯಲ್ಲಿದೆ. ನ್ಯೂಲೆಂಡ್ ಲ್ಯಾಬೋರೇಟರಿಸ್, ವೈಭವ್ ಗ್ಲೋಬಲ್, ಟಾಟಾ ಮೆಟಾಲಿಕ್ಸ್, ಹ್ಯಾಪಿಯೆಸ್ಟ್ ಮೈಂಡ್ಸ್ ಟೆಕ್ನಾಲಜೀಸ್, ಸ್ಟರ್ಲಿಂಗ್ ಆ್ಯಂಡ್ ವಿಲ್ಸನ್ ಸೋಲಾರ್, ಟಿನ್ ಪ್ಲೇಟ್ ಕಂಪನಿ, ಸೀಕ್ವೆಂಟ್ ಸೈಂಟಿಫಿಕ್, ಸನ್ ಫ್ಲ್ಯಾಗ್ ಐರನ್, ಕಲ್ಯಾಣಿ ಸ್ಟೀಲ್ಸ್, ಇಂದ್ರಪ್ರಸ್ಥ ಕಾರ್ಪೊರೇಷನ್ ಶೇ 10ರಿಂದ ಶೇ 22ರಷ್ಟು ಇಳಿಕೆ ದಾಖಲಿಸಿವೆ.

ಮುನ್ನೋಟ: ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ಕೋವಿಡ್ ಲಸಿಕೆ ನೀಡುವಲ್ಲಿನ ವೇಗ ಮತ್ತು ಭಾರತ ಹಾಗೂ ಇತರ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಲಸಿಕೆ ನೀಡುವಲ್ಲಿ ಕಂಡುಬರುತ್ತಿರುವ ನಿಧಾನಗತಿ ಪೇಟೆಯ ಮೇಲೆ ಪ್ರಭಾವ ಬೀರಲಿದೆ. ಭಾರತದಲ್ಲಿ ಇನ್ನೂ ಒಂದೆರಡು ತಿಂಗಳು ಲಸಿಕೆ ಕೊರತೆ ಇರಲಿದೆ ಎಂಬ ವರದಿಗಳಿವೆ. ಲಸಿಕೆ ಕೊರತೆ ಇದ್ದಾಗ, ಲಾಕ್‌ಡೌನ್ ಸಡಿಲಿಸಿ ವಾಣಿಜ್ಯ ಚಟುವಟಿಕೆಗಳನ್ನು ಆರಂಭಿಸಲು ಸಾಧ್ಯವಾಗುವುದಿಲ್ಲ. ಈ ವಿಚಾರವಾಗಿ ಹೂಡಿಕೆದಾರರು ಆಲೋಚನೆ ಮಾಡುತ್ತಿದ್ದಾರೆ. ಲಾಕ್‌ಡೌನ್ ನಿರ್ಬಂಧ ಮುಂದಿನ ತ್ರೈಮಾಸಿಕ ಫಲಿತಾಂಶಗಳ ಮೇಲೆ ನಕಾರಾತ್ಮಕ ಪರಿಣಾಮ ಬೀರಬಹುದೇ ಎನ್ನುವ ಪ್ರಶ್ನೆ ಇದೆ. ಎರಡನೇ ಅಲೆ ಮುಗಿದ ಬಳಿಕ ಸೂಚ್ಯಂಕ ವೇಗವಾಗಿ ಚೇತರಿಸಿಕೊಳ್ಳುವ ನಿರೀಕ್ಷೆಯಿದೆ.